(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಅದರಲ್ಲಿ ಬೇರೆ ಏನೂ ಕೂಡ ಇಲ್ಲ. ಅದಕ್ಕಾಗಿ ದಯವಿಟ್ಟು ಪುನರ್ ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಹೋಗಬೇಡಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆನ್ನುವ ವಾಗ್ದಾನವನ್ನು ತಾವೇನು ಮಾಡಿದ್ದೀರಿ, ದಯವಿಟ್ಟು ಅದನ್ನು ಒಪ್ಪಿಕೊಂಡು....

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ, ಸತ್ಯಶೋಧನ ಸಮಿತಿಯ ಒಂದು ವರದಿ ಬಂದಿದೆ, ಅದನ್ನು ಕೊಡುತ್ತೇನೆಂದು ಹೇಳಿದಾಗ, ಅದರಲ್ಲಿ ಏನೇ ಇದ್ದರೂ ಕೂಡ ಅದಕ್ಕೆ ನಾನು ವಿಚಾರ ಮಾಡುತ್ತೇನೆ, ಅನುಷ್ಠಾನಕ್ಕೆ ತರುತ್ತೇನೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಈಗ ಏನು ಹೇಳುತ್ತಿದ್ಧಾರೆಂದರೆ, ಈಗ ಸ್ವಲ್ಪ deviate ಮಾಡುತ್ತಿದ್ದಾರೆ. ನಾವೇನು ಕೇಳುತ್ತಿದ್ದೇವೆಂದರೆ, ಸದನ ಸಮಿತಿ ಮಾಡಿ, ಇದಕ್ಕೆಲ್ಲ ಸತ್ಯ ಶೋಧನಾ ಸಮಿತಿ ಏನು ರಿಪೋರ್ಟ್ ಮಾಡಿದೆ, ಅದನ್ನು ಜಾರಿಗೊಳಿಸುವುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅದರೊಳಗಿರುವ ಸತ್ಯವನ್ನು ಅವರು ಶೋಧನೆ ಮಾಡಬೇಕಲ್ಲವೇ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಆಗಲೇ ನಾನು ಹೇಳಿರುವುದೇನೆಂದರೆ, ಇವತ್ತು ಕಾಂಗ್ರೆಸ್ ಪಕ್ಷದ ಸತ್ಯಶೋಧನಾ ಸಮಿತಿ ಕೊಟ್ಟಿರುವ ಸಲಹೆಗಳಲ್ಲಿ ರೈತರಿಗೆ ರಕ್ಷಣೆ ಒದಗಿಸತಕ್ಕಂಥ ಒಳ್ಳೆಯ ಸಲಹೆಗಳಿವೆ ಅದನ್ನು ನಾನು ಜಾರಿಗೊಳಿಸುವುದಕ್ಕೆ ಪ್ರಯತ್ನ ಪಡುತ್ತೇನೆಂದು ಹೇಳಿರತಕ್ಕಂಥದ್ದು. (ಗೊಂದಲ) ರೈತರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆ ನಡೆಯುತ್ತಿದ್ದಾಗ ರೈತರಿಗೆ ಇಲ್ಲಿ ಕೊಟ್ಟಿರುವ ಸಲಹೆಗಳಲ್ಲಿ ರಕ್ಷಣೆ ಸಿಗತಕ್ಕಂಥದ್ದಕ್ಕೆ ಅವಕಾಶಗಳಿದ್ದರೆ ಆ ಎಲ್ಲ ಅವಕಾಶಗಳನ್ನು ಜಾರಿಗೆ ತರುತ್ತೇವೆ.

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪಗಳು.

ಶ್ರೀ ಬಿ.ಎಸ್.ಯಡಿಯೂರಪ್ಪ: 2007–08ನೇ ಸಾಲಿನ ಪೂರಕ ಆಂದಾಜುಗಳು(ಒಂದನೇ ಕಂತು) ಮೇಲೆ ಸನದದಲ್ಲಿ ಏನು ಮಂಡನೆ ಮಾಡಿದ್ದೇನೆ, ಅದರ ವಿವರವನ್ನು ಭಾರತ ಸಂವಿಧಾನದ...

ಅಧ್ಯಕ್ಷರು: ನಾಳೆ 10.00 ಗಂಟೆಯಿಂದ ಎಂದು ಬೆಳಿಗ್ಗೆಯೇ ಹೇಳಿದೆನಲ್ಲಾ ಸ್ವಾಮಿ.

ಶ್ರೀ ಬಿ.ಎಸ್.ಯಡಿಯೂರಪ್ಪ: 205(1)ನೇ ಅನುಚ್ಛೇಧದ ಮೇರೆಗೆ 2007–08ನೇ ಸಾಲಿಗೆ ಸಂಬಂಧಿಸಿದ ಮೇಲಿನ....(ಗೊಂದಲ) ಇಲ್ಲಿಂದ ಆ ಮನೆಗೆ ಹೋಗಿ pass ಆಗಿ ಬರಬೇಕು ಸರ್. ರೈತರಿಗೆ 750 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ನೀವೇ ಮಾಡುತ್ತಿದ್ದೀರಿ. ಇದರಲ್ಲೇನದೇ, 10 ನಿಮಿಷ ನಾನು ಹೇಳುವುದನ್ನು ದಯವಿಟ್ಟು ಕೇಳಿ. (ಗೊಂದಲ) ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡಿದರೆ ನಾನು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನಾಗಿದೆ ಎಂದರೆ, ಈ ಮನೆಯೊಳಗೆ ಯಾರು ಕೂರುತ್ತಾರೋ ಅವರಿಗೆ ಶಿಕ್ಷೆ. ಯಾರು ಕುಳಿತುಕೊಳ್ಳುವುದಿಲ್ಲವೋ,...

ಅಧ್ಯಕ್ಷರು: ಶಿಕ್ಷೆ ಎಂದರೆ ಏನು ಮಾಡುತ್ತೀರಿ? ಈಗ ಯಾರು ಭಾರ ಹೊರುತ್ತಾರೋ ಅವರೇ ಹೊರಬೇಕು. ಭಾರ ಎಲ್ಲರೂ ಹೊರುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಆ ಮನೆಗೆ ಹೋಗಿ pass ಆಗಿ ಬರಬೇಕು ಸರ್. (ಗೊಂದಲ) ಮಾನ್ಯ ಅಧ್ಯಕ್ಷರೆ, ಇದು important ಇದೆ. ಇದು ಇಲ್ಲಿ ಇವತ್ತು pass ಆಗಿ ಆ ಮನೆಗೆ ಹೋಗಿ ಅಲ್ಲಿಂದ pass ಆಗಿ ಬರಬೇಕು. (ಗೊಂದಲ) ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರ ನಡೆಸಿದಂಥವರು. (ಗೊಂದಲ) ಇದರಲ್ಲೇನು 15 ನಿಮಿಷ. ದಯಮಾಡಿ ಸಹಕಾರ ಕೊಡಿ.

ಶ್ರೀ ಸಿದ್ದರಾಮಯ್ಯ: ನಿಮಗೆ ಇದರಲ್ಲಿ ಒಂದೇ ಒಂದು urgency ಇರುವುದು ಏನೆಂದರೆ ರೈತರಿಗೆ ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದು ಆ ಮನೆಯಲ್ಲೂ ಕೂಡ ಪಾಸ್ ಆಗಬೇಕು.

ಶ್ರೀ ಸಿದ್ದರಾಮಯ್ಯ: ಪಾಸಾಗುತ್ತದೆ. ಎಷ್ಟೊತ್ತಾಗುತ್ತದೆ? Appropriation Bill ಒಂದೇ ದಿನದಲ್ಲಿ ಪಾಸಾಗುತ್ತದೆ, supplementary estimate pass ಆಗುವುದಿಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರತಿ ಪಕ್ಷದ ನಾಯಕರು ಈ ಚರ್ಚೆಯಲ್ಲಿ ಪಾಲ್ಗೊಳಲಿ.

ಅಧ್ಯಕ್ಷರು: Opposition leader ಮಾತನಾಡಿ. ಇನ್ನು Bills ಇವೆ.

ಶ್ರೀ ಎನ್.ಧರ್ಮ್‌ಸಿಂಗ್: ಮಾನ್ಯ ಯಡಿಯೂರಪ್ಪವರೇ, ಬೇಡಿಕೆ ಮೇಲೆ ಚರ್ಚೆ ಮಾಡಿದ್ದೇವೆ, ನಾವೆಲ್ಲಾ ಒಪ್ಪಿದ್ದೇವೆ. ನಾಳೆ ಇದನ್ನು ಮಾಡಿಕೊಡುತ್ತೇವೆ.

ಅಧ್ಯಕ್ಷರು: Bills ಇವೆಯಲ್ಲ.

ಶ್ರೀ ಎನ್.ಧರ್ಮ್‌ಸಿಂಗ್: Bills ಕೂಡ ಚರ್ಚೆ ಆಗುತ್ತವೆ. Simple bills ಇವೆ.

ಅಧ್ಯಕ್ಷರು: ಯಾವುದು ನೀವು ಮಾಡುವುದಿಲ್ಲ. ಆಮೇಲೆ ಎಲ್ಲಾ guillotine ಆಗುತ್ತದೆ. ಇವತ್ತು ಬೆಳಿಗ್ಗೆ 10.00 ಗಂಟೆಯವರೆಗೆ ನಡೆಸಬೇಕೆಂದು ಹೇಳಿದ್ದು, ಆಮೇಲೆ Opposition leader 8.00 ಗಂಟೆಯವರೆಗೆ ಮಾಡೋಣವೆಂದು ಹೇಳಿದರು.

ಶ್ರೀ ಎನ್.ಧರ್ಮ್‌ಸಿಂಗ್: ನಾಳೆ ಹತ್ತು ಗಂಟೆಗೆ ಪ್ರಾರಂಭ ಮಾಡಿಬಿಡಿ. ನಾಳೆ ಬೆಳಿಗ್ಗೆ 10.00 ಗಂಟೆಯಿಂದ 11.30ಕ್ಕೆ ಮುಗಿಸಿಬಿಡಬಹುದು.

ಅಧ್ಯಕ್ಷರು: ಮಾತನಾಡಿ. ಯಾರೂ ಮಾತನಾಡದಿದ್ದರೆ ಮತಕ್ಕೆ ಹಾಕುತ್ತೇನೆ.

ಶ್ರೀ ಎನ್.ಧರ್ಮ್‌ಸಿಂಗ್: 1,900 ಕೋಟಿ ರೂಪಾಯಿ ಪೂರಕ ಅಂದಾಜಿಗೆ ಹೇಗೆ ಹಾಗೆ ಒಪ್ಪಿಗೆ ಕೊಡುವುದಕ್ಕಾಗುತ್ತದೆ.

ಅಧ್ಯಕ್ಷರು: ಮಾತನಾಡಿ, ನಿಮ್ಮ ಅಭಿಪ್ರಾಯ ಏನು ಎಂದು ಹೇಳಿ.

ಶ್ರೀ ಎನ್.ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ನಿಮಗೆ ಮನಸ್ಸಿಗೆ ಬಂದ ಹಾಗೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ನೀವು ಏನು ಮಾತನಾಡುತ್ತೀರಿ?

ಅಧ್ಯಕ್ಷರು: ಆಗುವುದಿಲ್ಲ. ಏನು ಮಾತನಾಡುತ್ತೀರಿ ಎಂದರೆ ಏನಾದರೂ ಮಾತನಾಡುವುದು. ಯಾರು ಏನು ಮಾತನಾಡುತ್ತಾರೋ ಅದನ್ನೇ ಮಾತನಾಡುವುದು. ಇವತ್ತು 10.00 ಗಂಟೆಯವರೆಗೆ ಕುಳಿತುಕೊಳ್ಳೋಣ ಎಂದಾಗ ನೀವೇ 8.00 ಗಂಟೆಯವರೆಗೆ ಕುಳಿತುಕೊಳ್ಳೋಣವೆಂದು ಬೆಳಿಗ್ಗೆ ಹೇಳಿದಿರಿ. ಈಗ 6.00 ಗಂಟೆಗೆ ಈ ಮಾತು ಹೇಳುತ್ತಿದ್ದೀರಿ. ಇನ್ನೂ ಎರಡು ಗಂಟೆ ಇದೆ ಸ್ವಾಮಿ. ನೀವು ಮಾತನಾಡಿ. ನಿಮ್ಮ ಅನುಭವದಲ್ಲಿ ನೀವು ಈ ರೀತಿ ಆಗಿಬಿಟ್ಟರೆ ಹೇಗೆ? ನೀವು ಹೇಳಿದ ಹಾಗೆ 8.00 ಗಂಟೆಯವರೆಗೆ ಮಾತನಾಡಿ.

ಶ್ರೀ ಎನ್.ಧರ್ಮ್‌ಸಿಂಗ್: ನಾಡಿದ್ದು 12.00 ಗಂಟೆಗೆ ಮಾನ್ಯ ಪ್ರಧಾನ ಮಂತ್ರಿಯವರ programme ಇದೆ. ನಾವು arrangement ಗೆ ಹೋಗಬೇಕಾಗಿದೆ.

ಅಧ್ಯಕ್ಷರು: ಆಯಿತು. ನೀವು ಮಾತನಾಡಿ ಹೋಗಿ, ಸದನದಲ್ಲಿ ಬೇರೆಯವರು ಮಾತನಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ಸ್ನೇಹಿತರಾದ ಮಾನ್ಯ ದೇಶಪಾಂಡೆ, ಮಾನ್ಯ ಸಿದ್ದರಾಮಯ್ಯನವರು ಇದ್ದಾರೆ, ಅವರು ಮಾತನಾಡುತ್ತಾರೆ. ನೀವು ಪ್ರಾರಂಭ ಮಾಡಿ, ಇದರಲ್ಲಿ ಏನಿದೆ ಸಾರ್. ಇದರಲ್ಲಿ ಪ್ರಮುಖವಾದುದು ಏನು ಕೂಡ ಇಲ್ಲ. ದಯಮಾಡಿ ಪ್ರಾರಂಭ ಮಾಡಿ.

ಶ್ರೀ ಎನ್.ಧರ್ಮ್‌ಸಿಂಗ್(ಜೇವರ್ಗಿ): ಮಾನ್ಯ ಅಧ್ಯಕ್ಷರೆ, ಯಾವಾಗಲೂ ಕೂಡ ಪೂರಕ ಅಂದಾಜು ಇದೇ ರೀತಿಯಾಗಿ ಪ್ರಸ್ತಾವನೆ ಸದನಕ್ಕೆ ಬರುತ್ತಿದೆ. ಬೆಳಗಾಂ ಅಧಿವೇಶದಲ್ಲಿ ಕೂಡ ಇದೇ ರೀತಿ ತೆಗೆದುಕೊಂಡು ಬಂದರು. ಮೊನ್ನೆ ಕೂಡ ನಾವು ಬಜೆಟ್ pass ಮಾಡಿ ಕಳುಹಿಸಿದ್ದೇವೆ. Appopriation Bill ಕೂಡ pass ಆಗಿದೆ. ಇವತ್ತು ಯಾವ್ಯಾವುದು ಬಜೆಟ್‌ನಲ್ಲಿ ನಮೂದಿಸಿಲ್ಲ, ಯಾವ್ಯಾವ ಇಲಾಖೆಗಳಿಗೆ ಹೆಚ್ಚಿನ ಹಣವನ್ನು ಕೊಟ್ಟಿಲ್ಲ ಮತ್ತು ಸಾರ್ವಜನಿಕರ ಅಭಿವೃದ್ಧಿ ಮತ್ತು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಹಣವನ್ನು ಕೊಡಬೇಕು ಎಂದು ಬೇಡಿಕೆ ಬಂದಾಗ ಆಗ ಪೂರಕ ಅಂದಾಜಿಗೆ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ನೀವು ಏನು ಮಾಡಿದ್ದೀರೆಂದರೆ ನಾವು 2300 ಕೋಟಿ ರೈತರ ಸಾಲ ಮನ್ನಾ ಮಾಡುತ್ತೇವೆಂದು ಮೊದಲೇ ಹೇಳಿದ್ದಿರಿ. ನಾವೂ ಮಾನ್ಯ ದೇಶಪಾಂಡೆ ಮತ್ತು ಮಾನ್ಯ ಸಿದ್ದರಾಮಯ್ಯನವರೂ ಕೂಡ ಇದರ ಬಗ್ಗೆ ಹೇಳಿದ್ದೆವು. ತಾವು ಈಗಾಗಲೇ 750 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈಗ 1,900 ರೂ. ಕೋಟಿ ಪೂರಕ ಅಂದಾಜು ಏನು ಕೊಡಬೇಕೆಂದು ಇಟ್ಟಿದ್ದೀರಿ ಅದರಲ್ಲಿ ಕೂಡ ಮತ್ತೆ ಈ ಹಣವನ್ನು ಸೇರಿಸಿದ್ದೀರಿ. ಸಾರಾಯಿ ನೀಷೇಧದ ಬಗ್ಗೆ ತಾವು ಬಜೆಟ್‌ನಲ್ಲಿ ಮಂಡಿಸಿದ್ದೀರಿ. ಹೋದ ಬಜೆಟ್ ಮಂಡಿಸಿದ ನಾಲ್ಕು ತಿಂಗಳ ಅವಧಿಯಲ್ಲಿ

ಇದನ್ನು ಯಾವ ರೀತಿಯಾಗಿ ಬಿಡುಗಡೆ ಮಾಡಿದ್ದೀರಿ. ಒಂದು ಕಡೆ ತಾವು ರೈತರಿಗೆ ತೊಂದರೆಯಾಗುತ್ತಿಲ್ಲ, ನಾವು ಸಹಾಯ ಮಾಡಿದ್ದೇವೆಂದು ಹೇಳಿದ್ದೀರಿ. ಮೊನ್ನೆ ಬಜೆಟ್ ಪಾಸ್ ಆಗಿದೆ. ಇವತ್ತು ಎಂಟು ತಿಂಗಳ ಅವಧಿಯಲ್ಲಿ ಮತ್ತೆ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಪೂರಕ ಅಂದಾಜನ್ನು ಇಟ್ಟಿದ್ದೀರಿ. ಇದು ಸರಿಯಾದ ರೀತಿ ಅಲ್ಲ. ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಎಷ್ಟು ಹಣ ಕೊಡಬೇಕಾಗಿದೆ ಹಾಗೂ ಬೇರೆ ಬೇರೆ ಬಾಬತ್ತಿನಲ್ಲಿ ಕೊಡುವಂತಹ ರೀತಿಯಲ್ಲಿ ತಾವು ಮತ್ತೆ ಎಡವಿದ್ದೀರಿ. ಅದು ಹಣವನ್ನು ಕೊಡುವಂತಹ ರೀತಿಯಲ್ಲಿ ಅಲ್ಲ. ಶಿಕಾರಿಪುರ ಕ್ಷೇತ್ರಕ್ಕೆ Polytechnic Collegeಗಾಗಲಿ ಹಾಗೂ ಬೇರೆ ಬೇರೆ ವಿಚಾರಕ್ಕೂ ತಾವು ಹಣವನ್ನು ಕೊಟ್ಟಿದ್ದೀರಿ. ಈಗಾಗಲೇ ಮಾನ್ಯ ಬಿ.ಆರ್. ಪಾಟೀಲ್ ಮತ್ತು ವೈಜನಾಥ್ ಪಾಟೀಲ್‌ರವರು ಆ ಭಾಗದ ಶಾಸಕರು ಚರ್ಚೆ ಮಾಡಿದ್ದು, ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುವಂತಹ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ regional imbalance ಇದೆ. ಅದಕ್ಕೂ ಕೂಡ ಹಣವನ್ನು ಕೊಟ್ಟಿಲ್ಲವೆಂದು ಈಗಾಗಲೇ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆದರೆ ಅದಕ್ಕೆ ನಿಯಮ 69ರಲ್ಲಿ ಚರ್ಚೆಗೆ ಅವಕಾಶ ಕೊಡುವಂತಹ ವಿಚಾರ ಇದೆ. ಇವತ್ತು ರಾಜ್ಯದ ಹಣಕಾಸಿನ ಮಂತ್ರಿಗಳು, ನಮ್ಮ ರಾಜ್ಯದಲ್ಲಿರುವ ನೀರಾವರಿಗಾಗಲಿ, ಬೇರೆ ಬೇರೆ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಬೇಕು. ನೀವು ಬಜೆಟ್‌ನಲ್ಲಿ 40,000 ಹಣ ತೆರಿಗೆ ವಸೂಲಾತಿಯಾಗಿ ಬರುತ್ತಿದೆ ಎಂದು ಹೇಳಿದ್ದೀರಿ. ಇವತ್ತು ತೆರಿಗೆ ವಸೂಲಾತಿಯಲ್ಲಿ utterly this Government has failed. ಇವತ್ತು resources mobilization ಮಾಡುವುದಕ್ಕೆ ತಮಗೆ ಆಗುತ್ತಿಲ್ಲ. ಇವತ್ತು ಸಾರಾಯಿ ನಿಷೇಧ ಹಾಗೂ ಸಾಲ ಮನ್ನಾ ಮಾಡಿರುವುದರಿಂದ ಅದಕ್ಕೆ ಬೇಕಾದಂತಹ ಹಣಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ಇವತ್ತು 4,500 ಕೋಟಿ ರೂಪಾಯಿ ಏನು resources mobilization ಮಾಡಬೇಕಾಗಿತ್ತು ಅದನ್ನು ಮಾಡಿಲ್ಲ. ಮೊನ್ನೆ ತಾನೇ ಬಜೆಟ್ ಆಗಿದ್ದು, ಇವತ್ತು ಮತ್ತೆ ಪೂರಕ ಅಂದಾಜಿನಲ್ಲಿ 1,905 ಕೋಟಿ ರೂಪಾಯಿ ಕೇಳುತ್ತಿದ್ದಾರೆ. ಇದಕ್ಕೆ ನಾವು ವಿರೋಧ ಮಾಡುತ್ತೇವೆ. ಏಕೆಂದರೆ ನಿಮಗೆ vision ಇಲ್ಲ. ಸರ್ಕಾರ ಇವತ್ತು anticipate ಮಾಡಿ ಏನು ಸಂದರ್ಭ ಬರಬಹುದು, ಎಲ್ಲೆಲ್ಲಿ ಕೊಡಬೇಕಾಗಿದೆ, ಸಾರ್ವಜನಿಕರಿಗೆ, ದಲಿತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಸಮಾಜ ಕಲ್ಯಾಣ ಇಲಾಖೆಗೆ ಎಷ್ಟು ಕೊಡಬೇಕಾಗಿದೆ ಎನ್ನುವುದರ ಬಗ್ಗೆ ನೋಡದೇ, ಇವತ್ತು ತಾವು ಶಿಕಾರಿಪುರಕ್ಕೆ, ಹಾಸನಕ್ಕೆ, ರಾಮನಗರಕ್ಕೆ ಮತ್ತು ಬೇರೆ ಬೇರೆ ಕಡೆ ತಮಗೆ ಎಲ್ಲೆಲ್ಲಿ ಬೇಕಾಗಿದೆ.

ಅಂತಹವುಗಳಿಗೆ ಮಾತ್ರ ಕೊಡುತ್ತಿದ್ದೀರಿ. ಅದಕ್ಕೆ ನಾವು ಅದರ ಬಗ್ಗೆ ವಿರೋಧ ಕೂಡ ಮಾಡಬೇಕಾಗಿದೆ. ನಾವು ಬಜೆಟ್ ಭಾಷಣ ಹೇಳಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಗಳಾಗಿದ್ದಾಗ, ನಾನು ಮುಖ್ಯಮಂತ್ರಿಯಾಗಿದ್ದೆನು. We have provided 29% for irrigation at that time. Now that has been reduced to 17%. ಮೊನ್ನೆ ಕೂಡ ಅದರ ಪ್ರಸ್ತಾಪ ಮಾಡಿದ್ದೇವೆ, ಆದರೂ ಕೂಡ ಇವತ್ತು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಲಿಲ್ಲ. ಪ್ರವಾಹ ಪೀಡಿತ ಪ್ರದೇಶಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಬರ ಪೀಡಿತ ಪ್ರದೇಶಗಳಲ್ಲಿ 128 ತಾಲ್ಲೂಕುಗಳಲ್ಲಿ ನಮ್ಮ ರಾಜ್ಯದಲ್ಲಿರುವಂತಹ ಯಾವ ಜಿಲ್ಲಾದಿಕಾರಿಗಳು ಕೂಡ ಕೆಲಸವನ್ನು ಮಾಡುತ್ತಿಲ್ಲ. P.D.account ನಲ್ಲಿ ಹಣವಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಕೇವಲ ಭಾಷಣಗಳನ್ನು ಮಾಡುತ್ತೀರಿ. ಗ್ರಾಮ ವಾಸ್ತವ್ಯ ಮಾಡಿದ್ದೀರಿ. ಅದರ ಪರಿಣಾಮ ನೀವು ಎಲ್ಲೆಲ್ಲಿ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ, ಆ ಪ್ರಕಾರ ಏನೇನು ಕೆಲಸ ಕಾರ್ಯಗಳು ಆಗಿಲ್ಲ. ಬಜೆಟ್ ಮಂಡನೆಯಾದ ಮೇಲೆ, ಪೂರಕ ಅಂದಾಜಿಗೆ ತಾವು ಈ ಸದನದ ಸಮ್ಮತಿ ಪಡೆಯಬೇಕಾದರೆ ನಿಜವಾದ ವಸ್ತುಪರಿಸ್ಥಿತಿ ಏನದೆ ಎಂದು ಹೇಳಬೇಕು. (ನಾವು ಮೊದಲೇ ಹೇಳಿದ್ದೇವೆ, you are facing financial crisis in karntaka State. ಇವತ್ತು ಯಾವ ಬಾಬತ್ತಿನಲ್ಲಿ ಕೂಡ ನಮಗೆ vision ಇಲ್ಲ. ನಾವು ಮತ್ತು ಸರಿಯಾದದಂತಹ ರೀತಿಯಲ್ಲಿ ವ್ಯವಸ್ಥೆ ಮಾಡಿಲ್ಲ ಎನ್ನುವ ಮಾತನ್ನು ಹೇಳಿದ್ದೇವೆ. ತಾವು ಇವತ್ತಿನ ದಿವಸ ಪೂರಕ ಅಂದಾಜನ್ನು ಮಾಡಿದ್ದೀರಿ. ನಾಳೆ ಇಲ್ಲಿಗೆ ಮಾನ್ಯ ಪ್ರಧಾನ ಮಂತ್ತಿಗಳು ಬರುತ್ತಿದ್ದಾರೆ. ವಿದರ್ಭ ಪ್ಯಾಕೇಜ್‌ನಲ್ಲಿ 2,680 ಕೋಟಿ ರೂಪಾಯಿ ನಮ್ಮ ಕರ್ನಾಟಕ ರಾಜ್ಯಕ್ಕೆ ಹಣ ಏನು ಬರುತ್ತಿದೆ, ಅದಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಹಣವನ್ನು ಕೊಟ್ಟಿದ್ದೀರಾ? ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು ಉಪಯೋಗಿಸಿ ಕೊಟ್ಟಿದ್ದೀರಾ? ಕೇಂದ್ರ ಸರ್ಕಾರದಿಂದ 250 ಕೋಟಿ ರೂಪಾಯಿಯನ್ನು ಮಾನ್ಯ ಶಿವರಾಜ್ ಪಾಟೀಲರು ಇಲ್ಲಿ ಬಂದು ಕೊಟ್ಟು ಹೋಗಿದ್ದಾರೆ. ಇವತ್ತು ಸಾಕಷ್ಟು ಹಣ ಕೇಂದ್ರದಿಂದ ಬಂದಿದೆ. ನಮ್ಮ ಪಾಲು ರಾಜ್ಯದಲ್ಲಿ 26% ಇದೆ. ಇವತ್ತು ಕೇಂದ್ರದಿಂದ ಬಂದಂತಹ ಪಾಲು ಕೂಡ ಹೆಚ್ಚಿದೆ. ಅದನ್ನು ಕೂಡ ತಾವು ಸರಿಯಾದ ರೀತಿಯಲ್ಲಿ ನಿರ್ವಹಣೆಯನ್ನು ಮಾಡಿಲ್ಲ. ಗೃಹ ಇಲಾಖೆಗೆ ಮತ್ತು ಬೇರೆ ಬೇರೆ ಇಲಾಖೆಗಳಿಗೆ ಕೂಡ ಹೆಚ್ಚಿನ ಹಣವನ್ನು ಕೊಡಬೇಕಾಗಿದೆ. ಇವತ್ತು ವಸತಿ ನಿರ್ವಹಣೆಗಾಗಿ ಕೂಡ ಹಣವನ್ನು ಕೊಟ್ಟಿಲ್ಲ. ಕೇಂದ್ರದಿಂದ ಹಣ ಏನು ಬರುತ್ತದೆ, ಆ ಹಣವನ್ನು ರಾಜ್ಯ ಸರ್ಕಾರ ಖರ್ಚು ಮಾಡಿ ಅದಕ್ಕೆ utilization

certificate ಅನ್ನು submit ಮಾಡಬೇಕಾಗುತ್ತದೆ. ಅಗ ಕೇಂದ್ರ ಸರ್ಕಾರ ಮುಂದಿನ ಹಣವನ್ನು ಕೂಡ ಕೊಡುತ್ತಾರೆ. ಪೂರಕ ಅಂದಾಜು ಏನು ಇಟ್ಟಿದ್ದಾರೆ, ಇವತ್ತು ಇವರು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿಲ್ಲ. ಇವತ್ತಿನ ದಿವಸ ಬಹಳ ಹೆಚ್ಚಿನ ಹಣವನ್ನು ಕೇಳುವಂಥಾದ್ದರಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ. ಅವರು ಇವತ್ತು ಸದನಕ್ಕೆ ಹೇಳಬೇಕು, ಯಾವ್ಯಾವ ಬಾಬತ್ತಿನಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದೀರಿ. ಅದು ಎಲ್ಲಿ ಮಾಡಬೇಕೆಂದು ಇದ್ದೀರಿ, ಎಂಬುದನ್ನು ಹೇಳಬೇಕು. ಇವತ್ತು ತಾವು ಸಾರಾಯಿ ನಿಷೇಧವನ್ನು ಮಾಡಿದ್ದೀರಿ. ಇದರಿಂದ ತಮಗೆ ಬಹಳ ಶಹಭಾಷ್‌ಗಿರಿಯೂ ಸಿಕ್ಕಿದೆ. ಈಗ ಸಾರಾಯಿ ಹೋಗಿ, ಎಲ್ಲಾ ಕಡೆಗಳಲ್ಲೂ ಬಾಟ್ಲಿಂಗ್ ಅನ್ನು ಎಲ್ಲಾ ಪಂಚಾಯತ್‌ಗಳಿಗೂ ಕೊಡುವಂಥಾದ್ದನ್ನು ಇವತ್ತು ತಾವು ಮಾಡುತ್ತಿದ್ದೀರಿ. ತಾವು ನಮಗೆ ಅದನ್ನು ಹೇಳಬೇಕು, ತಾವು ಬೇಡಿಕೆಯಲ್ಲಿ ಹೇಳಿದ್ದೀರಿ, 4,500-5,000 ಪಂಚಾಯತ್‌ಗಳು ಇವೆ. ಇಲ್ಲಿ ಸಾರಾಯಿ ಪ್ಯಾಕೆಟ್ ಬದಲಾಗಿ ಅಲ್ಲಿ ಬಾಟ್ಲಿಂಗ್‌ನ ಕಾರ್ಪೊರೇಷನ್ ಮಾಡುವಂಥಾ ರೀತಿಯಲ್ಲಿ, ಹಣವನ್ನು ವಸೂಲು ಮಾಡುವಂಥಾ ರೀತಿಯಲ್ಲಿ ಇವತ್ತು ತಮ್ಮ ಇಲಾಖೆಯಲ್ಲಿ ಈ ಒಂದು ಚಿಂತನೆ ನಡೆದಿದೆ. ಅದರಿಂದ ತಮಗೆ ಏನೂ ಉಪಯೋಗವಾಗುವುದಿಲ್ಲ. ಇವತ್ತು ಸಾರಾಯಿಯನ್ನು ನಿಷೇಧ ಮಾಡಿ, ಸಾಲ ಮನ್ನಾ ಮಾಡಿ, ಆದರೆ ಬೇಕಾದಂಥಾ ಹಣವನ್ನು ಕೂಡ ಇವತ್ತಿನ ದಿವಸ ತಾವು ಕೊಡುತ್ತಿಲ್ಲವೆಂಬ ಅಪಾದನೆ ಕೂಡ ಇದೆ. ಇವತ್ತು ಸರ್ಕಾರದಲ್ಲಿ ಬಹಳಷ್ಟು ಬಾಬತ್ತಿನಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. There is total crisis in the financial management, ಮತ್ತೆ ಇವತ್ತು ಈ ರೀತಿಯ ತಮ್ಮ ಹಣಕಾಸಿನ ಪರಿಸ್ಥಿತಿ ಏನು ಇದೆ. ಇದು ನಿಜವಾಗಿಯೂ ಕೂಡ ಈ ರಾಜ್ಯದ ಸಮಸ್ಯೆಗಳಿಗೆ ಸರಿಯಾದ ರೀತಿಯಲ್ಲಿ ಬಿಂಬಿಸುವಂಥಾ ರೀತಿಯಲ್ಲಿ ತಾವು security ಯನ್ನು ಕೊಡಬೇಕಾಗಿದೆ, ಅದರಲ್ಲೂ ವಿಶೇಷವಾಗಿ pole sectorನ ಬಗ್ಗೆ ನಾವು ಮೊದಲು ಕೂಡ ಹೇಳಿದ್ದೇವೆ. Agricultureಗೆ, powerಗೆ ಮತ್ತು irrigationಗೆ ಹೆಚ್ಚಿನ ಹಣವನ್ನು ಕೊಡಬೇಕು, ಅಲ್ಲಿಯೂ ಕೊಟ್ಟಿಲ್ಲ. Social Sector ನ ಬಗ್ಗೆ ನಾವು ಮೊನ್ನೆ ಕೂಡ ಹೇಳಿದ್ದೇವೆ. ಇವತ್ತು 71ಕೋಟಿ ರೂಪಾಯಿಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪಂಗಡದ ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಿದ್ದಾರೆ. ಅವರಿಗೆ ಸಿಬ್ಸಿಡಿಯನ್ನು ಕೊಡಬೇಕಾಗಿದೆ. There you have released only Rs. 6.19 crores.ಇವರಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. Social justices ಏನು ಇದೆ, ಆ philosophyಏನು ಇದೆ ಆ concept ಏನು ಇದೆ. ಅದು ಇವತ್ತಿನ ಸಮ್ಮಿಶ್ರಸರ್ಕಾರಕ್ಕೆ ಇಲ್ಲ. ಬಡಜನತೆಗೆ ಅವರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸುವಂಥ ರೀತಿಯಲ್ಲಿ ಸರ್ಕಾರ ಏನು ಕೆಲಸಗಳನ್ನು

ಮಾಡಬೇಕಾಗಿತ್ತು. You have to create an atmosphere, but it is not there. ಇವತ್ತು ಜನರ ಮನಸ್ಸಿನಲ್ಲಿ ಇಲ್ಲ. ತಾವು ಅದರಲ್ಲಿ fail ಆಗಿದ್ದೀರಿ, ಮತ್ತೆ ತಾವು ಇವತ್ತು ಎರಡು ಸಾವಿರ ಕೋಟಿ ರೂಪಾಯಿಗಳನ್ನು ಪಾಸು ಮಾಡಿಕೊಡಬೇಕೆಂದು ಕೇಳುತ್ತಿದ್ದೀರಿ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇದು ತಮ್ಮ ಗಮನಕ್ಕೆ ಬರುತ್ತಿಲ್ಲ. ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಯವರು ಹಣಕಾಸಿನ ಮಂತ್ರಿಗಳೂ ಆಗಿದ್ದಾರೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ವಿವರಗಳನ್ನು ಸದನಕ್ಕೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ(ಹಳಿಯಾಳ): ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಉಪಮುಖ್ಯಮಂತ್ರಿಯವರು, ಪುನಃ ಒಂದು ಮುಂಗಡ ಪತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ಪುನಃ ಇಲ್ಲಿ supplementary estimate ಅನ್ನು ನಾವು ಕೊಡುವುದಿಲ್ಲ, ಏಕೆಂದರೆ ಒಂದು ಮುಂಗಡ ಪತ್ರ ಮಂಡನೆ ಆದ ನಂತರ ಇಷ್ಟು ಬೇಗನೆ, 1,900 ಕೋಟಿ ರೂಪಾಯಿಗಳಿಗೆ supplementary estimate ಬರುವಂಥಾದ್ದು ಸರಿಯಲ್ಲ. ಇದು ಏಕೆ ಆಯಿತು? ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರೆ, ಏಕೆಂದರೆ ತಾವು ಮುಂಗಡ ಪತ್ರವನ್ನು ಮಂಡಿಸಿದ ನಂತರ, ಹಲವಾರು ಬೇಡಿಕೆಗಳನ್ನು ಮಂಜೂರು ಮಾಡಿದ್ದೀರಿ. ಅದರ ಸಾಧಕ ಬಾಧಕಗಳನ್ನು ಸಹ ತಾವು ನೋಡಿಲ್ಲ. ಇವತ್ತು ಒಂದು ಮುಂಗಡ ಪತ್ರವನ್ನು ಮಂಡಿಸಬೇಕಾದರೆ, Article 205, Consitution of India ಪ್ರಕಾರ "..if the amount authorized by the Appropriation Act to be expended for a particular service for the current year is found to be insufficient for the purpose of that year or when a need has arisen during the current financial year for Supplementary or additional expenditure upon some new service not contemplated in the annual financial statement for the year, another statement showing the estimated amount of expenditure shall be laid before the Legislature of the State." ಒಂದು ವೇಳೆ ನೀವು ಹೀಗೆ ಮುಂಗಡ ಪತ್ರವನ್ನು ಮಂಡಿಸಿದರೆ, ಅಲ್ಲೇ ನಿಮ್ಮ ಅಂದಾಜು ತಪ್ಪು ಎಂದು ಆದರೆ, Finance Minister comes to the House. ಇಲ್ಲಿ ನೀವು ಒಂದು ಬಜೆಟ್ ಅನ್ನು present ಮಾಡಿದ ನಂತರ ನೀವು ಮತ್ತೊಂದು ಹೊಸ

ಬಜೆಟ್ ಅನ್ನು ಇವತ್ತು ನಮ್ಮ ಮುಂದೆ ಇಟ್ಟಿದ್ದೀರಿ. ಇದು financial discipline ಅಲ್ಲ. ಇದರಿಂದ you are leading the State to a financial crisis. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, it will lead to bankruptcy. ಇವತ್ತು ತಾವೇ ಹೇಳಿದ ಹಾಗೆ ಕಳೆದ 5–6 ವರ್ಷಗಳಲ್ಲಿ ಮಾನ್ಯ ಎಸ್. ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿ ಇದ್ದಾಗ, ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿ ಇದ್ದಾಗ, ಅವರು Fiscal Responsibility Act ಅನ್ನು ತಂದು, ಹಲವಾರು ಶಿಸ್ತನ್ನು ಆರ್ಥಿಕ ಇಲಾಖೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. Fiscal deficit 3% ಗಿಂತ ಕೆಳಗೆ ಇರಬೇಕು. Fiscal deficit wipe out ಆಗಬೇಕು. ಅಂಥಾ ಸೂಚನೆಗಳು, ಆದೇಶಗಳನ್ನು ಈ ಮನೆ ನಮಗೆ ಕೊಟ್ಟಿದೆ. ಇವತ್ತು ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರೆ, ನಿಮ್ಮ Fiscal deficit will cross 3%, ತಾವು ಹೇಳಿದ್ದೀರಿ. ಏಪ್ರಿಲ್, ಮೇ, ಜೂನ್, ತಿಂಗಳಲ್ಲಿ ಸಾಕಷ್ಟು ಆದಾಯವಾಗಿದೆಯೆಂದು ಹೇಳಿದ್ದೀರಿ, ಆಗಿಲ್ಲ. ತಾವು growth compare ಮಾಡಿ. ಯಾವುದೇ ಒಂದು growth ಅನ್ನು ನೋಡುವಾಗ, compare to last yearನ percentage ನೋಡಬೇಕಾಗುತ್ತದೆ. ಈ ವಿಚಾರವನ್ನು ನಾನು ಮತ್ತು ಮಾನ್ಯ ಸಿದ್ದರಾಮಯ್ಯನವರು ಮೊನ್ನೆ ದಿವಸ ಮಾತನಾಡುವಾಗ ಹೇಳಿದ್ದೇವೆ. Excise ಒಂದು ಬಿಟ್ಟರೆ ಪ್ರತಿಯೊಂದು ಇಲಾಖೆಯಲ್ಲಿ ಕಳೆದ ವರ್ಷ ನಿಮ್ಮ collection percentage has fallen. You will be in debt-trap. ನೀವು ಸಾಲ ಹೆಚ್ಚು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅದರಿಂದ Fiscal deficits ಹೆಚ್ಚು ಆಗುತ್ತದೆ. ಅದರಲ್ಲಿ ಯಾವುದೇ ಸಂದೇಹ, ಸಂಶಯವಿಲ್ಲ. ಇವತ್ತು ಬಡವರಿಗೆ ನಮ್ಮ ಕ್ಷೇತ್ರದಲ್ಲಿ ration card ಗಳು ಇಲ್ಲ. ಅಕ್ಕಿ ಇಲ್ಲ. maximum 20 K.G ಅಕ್ಕಿಯನ್ನು ಕೊಡುತ್ತೇವೆಂದು ಹೇಳಿ, ಇವತ್ತು 10–12 ಕಿ.ಲೊ, ಅಕ್ಕಿಯನ್ನು ಬಡವರಿಗೆ ಕೊಡುತ್ತಿದ್ದಾರೆ. ಅವರು 5 ಜನ, 10 ಜನವಿರಲಿ, Food ಸಬ್ಸಿಡಿಯನ್ನು ಕಡಿಮೆ ಮಾಡಿದ್ದಾರೆ. ಹಣಕಾಸು ಸಚಿವರು ಬಡವರ ಬಗ್ಗೆ ಚಿಂತನೆ ಮಾಡಿ. ತಾವು Food subside ಗೆ ಹಣವನ್ನು ಇಟ್ಟರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ತಾವು ಪ್ರವಾಸ ಕೈಗೊಂಡಾಗ ತಮ್ಮ ಗಮನಕ್ಕೂ ಬಂದಿರಬಹುದು. ಹಲವಾರು ಜನರಿಗೆ ration card ಇಲ್ಲ. ಅಕ್ಕಿ, ಗೋಧಿ, ಜೋಳ, ಸರಿಯಾದ ಸಮಯದಲ್ಲಿ ಸಿಗುತ್ತಿಲ್ಲ. ನೀವು 20 ಕಿ.ಲೊ. ಕೊಡುತ್ತೇವೆಂದು ಹೇಳಿದ್ದೀರಿ. ಅದು ಸಿಗುತ್ತಿಲ್ಲ. ಇದರ ಬಗ್ಗೆ ತಾವು ಏನು mention ಮಾಡಿಲ್ಲ. ಇವತ್ತು ಕೃಷಿ ಇಲಾಖೆಯಲ್ಲಿ 750 ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದೀರಿ, ಸಂತೋಷ. ಈಗ ಇನ್ನು 750 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ನಮ್ಮ ಮೇಲೆ ಬಂದ burden ನನ್ನ ದೃಷ್ಠಿಯಲ್ಲಿ 2,200 ರಿಂದ 2,300 ಕೋಟಿ ರೂಪಾಯಿಗಳಾಗುತ್ತದೆ. ಈಗಾಗಲೇ ನೀವು 750 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈಗ ಮುಂಗಡ ಪತ್ರದಲ್ಲಿ 750 ಕೋಟಿ ರೂಪಾಯಿಗಳನ್ನು ಕೊಡಬಹುದು. ಈಗ ಇದು 750 ಕೋಟಿ ರೂಪಾಯಿಗಳನ್ನು ಕೊಟ್ಟರೆ, 1,750 ಕೋಟಿ ರೂಪಗಳಾಯಿತು. ಆದರೂ ಸಹ 600 ರಿಂದ 700 ಕೋಟಿ ರೂಪಾಯಿಗಳು, ಸಹಕಾರಿ ಸಂಘಗಳಿಗೆ ಕೊಡುವಂಥಾದ್ದು ಉಳಿಯುತ್ತದೆ. ಆ ಹಣವನ್ನು ನೀವು ಕೊಡಲಿಲ್ಲವೆಂದರೆ ಎಲ್ಲಾ ಸಹಕಾರಿ ಸಂಘಗಳು ಕಷ್ಟಕ್ಕೆ ಸಿಲುಕುತ್ತವೆ. defaulters ಆಗುತ್ತದೆ. ನಬಾರ್ಡ್ norms ಪ್ರಕಾರ ಅವರಿಗೆ re-finance ಸಿಗುವುದಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ, ಇದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇವತ್ತು ನಾವು ನಮ್ಮ ಬೇಡಿಕೆಗಳ ಬಗ್ಗೆ ಕೇಳಿದಾಗ, ಶಿಕಾರಿಪುರದಲ್ಲಿ drainage ಮಾಡಬೇಕೆಂದು ಇಲಾಖೆಗೆ ಇಷ್ಟು ಹಣವನ್ನು ಕೊಡಿ, Agriculture college, Hassan, Veterinary college, Hassan, Reserve Police Building, Hassan, Ramanagar, Shikaripura, Holenarasipur, ಈ ನಾಲ್ಕು ತಾಲ್ಲೂಕು ಬಿಟ್ಟರೆ, ಬೇರೆ ಎಲ್ಲೂ ಇಲ್ಲ. ಇಲ್ಲಿ ರೈತರಿಗೆ 750 ಕೋಟಿ ರೂಪಾಯಿಗಳು ಬಂದಿದೆ. ತಾವು ಈ ಬಗ್ಗೆ ವಿಚಾರ ಮಾಡಬೇಕಾಗಿದೆ. ಇವತ್ತು ತಾವು ಹಣಕಾಸಿನ ಸಚಿವರಾಗಿ, ಆರ್ಥಿಕ discipline, ಆರ್ಥಿಕ ಶಿಸ್ತು ಬಹಳ important ಇದೆ. ಆ ಆರ್ಥಿಕ ಶಿಸ್ತನ್ನು ತಾವು ಸಂಪೂರ್ಣವಾಗಿ ಮುರಿದಿದ್ದೀರಿ. you are going into financial crisis. ನಾನು ಹೇಳುವಂಥಾದ್ದು ಈ ಸಂದರ್ಭದಲ್ಲಿ recordಗೆ ಹೋಗಲಿ. ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು Finance Minister ಆಗಿ, ತಾವು ಕೆಲವು ಒಳ್ಳೆಯ decision ಅನ್ನು ತೆಗೆದುಕೊಂಡಿರಬಹುದು. Arrack ಅನ್ನು abolish ಮಾಡಿದ್ದೀರಿ. 5th pay Commission ಮಾಡಿದ್ದೀರಿ, lottery abolish ಮಾಡಿದ್ದೀರಿ. ಸಂತೋಷ, ರೈತರಿಗೆ ಸಾಲ ಮನ್ನಾ ಮಾಡಿದ್ದೀರಿ. ಆದರೆ ಯಾವ ರೈತರು defaulters ಇದ್ದಾರೆ. ಅವರ ಸಾಲವ್ನನು ಮನ್ನಾ ಮಾಡಿಲ್ಲ. ಅವರು ಕಷ್ಟದಲ್ಲಿ ಇದ್ದಾರೆ. ಆ ದೃಷ್ಟಿಯಿಂದ ನಾನು ನಮಗೆ ಹೇಳುತ್ತಿದ್ದೇನೆ. ಇವತ್ತು ತಾವು ಏನು ನಿರ್ಣಯವನ್ನು ಮಾಡಿದ್ದೀರಿ. Resource mobilization ಆಗಲಿಲ್ಲವೆಂದರೆ, you will be the most failed, Finance Minister. Resource mobilization ಬಗ್ಗೆ ಏನೂ ಆಗುತ್ತಿಲ್ಲ. Fiscal responsibility Act ಪ್ರಕಾರ 6

ತಿಂಗಳಿಗೊಮ್ಮೆ ನೀವು review ಮಾಡಬೇಕು. ಆ review ವನ್ನು ನೀವು ಮಾಡುತ್ತಿಲ್ಲ. this is mandatory. ಈ ಮನೆ ನಿಮಗೆ ಆದೇಶ ಕೊಟ್ಟಿದೆ. ಆ ಪ್ರಕಾರ ನೀವು ಕೆಲಸ ಮಾಡುತ್ತಿಲ್ಲ. you are leading to a financial crisis. ಕೆಲವು ರೈತರ ಬೇಡಿಕೆಗಳು ಸರಿ ಇವೆ. ಅದಕ್ಕೆ ನಮ್ಮ ಬೆಂಬಲವಿದೆ. ಅದಕ್ಕೆ ಇನ್ನು ಹೆಚ್ಚಿನ ಹಣವನ್ನು ಕೊಟ್ಟು, ರೈತರಿಗೆ ಅನುಕೂಲವಾಗುವಂತೆ ಮಾಡಿ, ಯಾರು ಬಾಕಿ ಕಟ್ಟುವವರು ಇದ್ದಾರೆ. ಅವರಿಗೂ ಸಾಲ ಮನ್ನಾ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಅದಕ್ಕೂ ನಾವು ಬೆಂಬಲವನ್ನು ಕೊಡುತ್ತೇವೆ. ನಾನು ಇಷ್ಟು ಹೇಳಿ, ನನಗೆ ತಾವು ಸಮಯವನ್ನು ಕೊಟ್ಟಿದ್ದಕ್ಕೆ, ತಮಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಯಡಿಯೂರಪ್ಪನವರು fiscal indiscipline ಅನ್ನು ಒಪ್ಪುತ್ತಾರೆ ಎಂದು ನಾನು ಕೂಡ ಭಾವಿಸುತ್ತೇನೆ. ಬಜೆಟ್ ಆದ ಮೇಲೆ, ಹೊರಗೆ ಯಾವ ಯಾವ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದರೋ, ಇವತ್ತು ಅವುಗಳನ್ನೆಲ್ಲ supplementary Demands ನಲ್ಲಿ ತಂದಿದ್ದಾರೆ. ಆವತ್ತು ಬಜೆಟ್ ಇಟ್ಟಾದ ನಂತರ ಹೊರಗಡೆ ಅನೇಕ ಕಾರ್ಯಕ್ರಮಗಳನ್ನು ಘೋಷಿಸಿದರು. ಇವುಗಳನ್ನೆಲ್ಲಾ ನೀವು supplementary Demandsನಲ್ಲಿ ತೆಗೆದುಕೊಳ್ಳಬಹುದಾಗಿತ್ತು, ಬಜೆಟ್ ಭಾಷಣ ಆದ ನಂತರ ನೀವು ಹೇಳಬಾರದಿತ್ತು ಎಂದು ನಾವೆಲ್ಲಾ ಆವತ್ತೇ ಹೇಳಿದೆವು. ಅವತ್ತು ಅವರಿಗೆ ಅದು ಅರಿವಾಯಿತೋ ಇಲ್ಲವೋ ಗೊತ್ತಿಲ್ಲ. ಇಂಥ ಪರಿಸ್ಥಿತಿಯನ್ನು ರಾಜ್ಯಗಳು ನಿರ್ಮಾಣ ಮಾಡಿಕೊಳ್ಳಬಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. supplementary Demands ಇಡುವುದು ಎಲ್ಲಾ ಸರ್ಕಾರಗಳಿಗೂ ವಾಸ್ತವ. ಯಡಿಯೂರಪ್ಪನವರಿಗೆ ಆವತ್ತು ನಾವೆಲ್ಲ ಒತ್ತಾಯ ಮಾಡಿದೆವು. ಎಲ್ಲ ರೈತರ 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿ ಎಂದು ಹೇಳಿದೆವು. ಇಡೀ ಶಾಸನಸಭೇ ಗೋಗರೆದರೂ ನೀವು ಅದಕ್ಕೆ ಒಪ್ಪದೇ, ಆಚೆಕಡೆ ಹೋದಮೇಲೆ, ಎಲ್ಲ ರೈತರಿಗೂ 25 ಸಾವಿರ ರೂಪಾಯಿಗಳನ್ನು ವಜಾ ಮಾಡುತ್ತೇವೆ ಎಂದು ಘೋಷಣೆ ಮಾಡಿ, ಈಗ ಇಲ್ಲಿ ಬಂದು ನೀವು ನಮ್ಮನ್ನು supplementary Demands pass ಮಾಡಿ ಎಂದೇಕೆ ಕೇಳುತ್ತೀರಿ? ಆವತ್ತು ನಾವೆಲ್ಲ ಇಲ್ಲಿ ನಂತಿರಲಿಲ್ಲವೇ? ನಾವೆಲ್ಲ ಗೋಗರೆದಿರಲಿಲ್ಲವೇ? ರೈತರಿಗೆ ಅನುಕೂಲಗಳನ್ನು ಮಾಡಿ ಕೊಡಬೇಕಾಗಿರುವುದು ಶಾಸನಸಭೆಯೋ ಅಥವಾ ನಮ್ಮ ರಾಜಕೀಯ ಪಕ್ಷಗಳೋ? How can we pass this demand? ಆವತ್ತು ನಾವು ಎಷ್ಟು ರೌಂಡ್ ಚರ್ಚೆ ಮಾಡಿದೆವು. ವಾಟಾಳ್

ನಾಗರಾಜ್‌ರವರೇ, ಆವತ್ತು ನಾವು, ಇದಕ್ಕೆ ಒಪ್ಪಿ ಒಪ್ಪಿ ಎಂದು ಗೋಗರೆದೆವಲ್ಲವೇ. ಆಗ ನೀವು ಒಪ್ಪಲಿಲ್ಲ. ನಿನ್ನೆಯ ಭಾಷಣದಲ್ಲೂ ಕೂಡ ತಾವು ಹೇಳಿದ್ದೀರಿ, ಒತ್ತುವರಿಯಾಗಿರುವ ಸರ್ಕಾರೀ ಜಮೀನನ್ನು ಮಾರಿ ದುಡ್ಡು ಕೊಡಿಸುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರಿಂದ ನಾನು ಎಲ್ಲ ರೈತರ 25 ಸಾವಿರ ರೂಪಾಯಿಗಳ ಸಾಲವನ್ನು ವಜಾ ಮಾಡಿದೆ ಎಂದು ಹೇಳಿದ್ದೀರಿ. ನನ್ನ ಹತ್ತಿರ ನಿಮ್ಮ ಭಾಷಣದ ಕಾಪಿ ಇದೆ. ನಾನು ಸುಮ್ಮಸುಮ್ಮನೆ ಮಾತನಾಡುತ್ತಿಲ್ಲ. ನೀವೇ ಹೇಳಿರುವುದು ಇದು, land ಮಾರಿಬಿಟ್ಟು ದುಡ್ಡು ಕೊಡುತ್ತೇವೆ ಎಂದದ್ದರಿಂದ ಇದನ್ನೆಲ್ಲಾ ಮಾಡಿದೆವು. ಹಾಗಾಗಿ deficit ಜಾಸ್ತಿಯಾಯಿತು ಎಂದು ಹೇಳಿದ್ದೀರಿ. ತಾವು, Finance Minister ಇರುವುದು Budget ಅನ್ನು propose ಮಾಡುವುದಕ್ಕೆ. ಅದನ್ನು approve ಮಾಡುವುದು, reject ಮಾಡುವುದು, amend ಮಾಡುವುದು, ಸೇರಿಸುವುದು ಇವುಗಳೆಲ್ಲವೂ ಈ ಶಾಸನ ಸಭೇಯ ಕರ್ತವ್ಯ ಎನ್ನುವುದನ್ನು ತಾವು ದಯಮಾಡಿ ಅರಿತುಕೊಳ್ಳಬೇಕು. ಹಠಕ್ಕೋಸ್ಕರ ಇಟ್ಟರೆ ನಮ್ಮ ಗೌರವಗಳೇನಾಗುತ್ತದೆ? ಇವತ್ತು ನಾವು ಇದನ್ನು ಇಲ್ಲಿ ಮಾತನಾಡಬೇಕಲ್ಲವೇ? ಆವತ್ತು ಶಾಸನ ಸಭೆಯಲ್ಲಿ ಆಗುವುದಿಲ್ಲ ಎಂದು ಹೇಳಿದ ನೀವು, ಆ ನಂತರ ಸೇರಿಸಲಿಕ್ಕೆ ಕಾರಣವೇನು ಎನ್ನುವುದನ್ನು ತಾವು ಉತ್ತರ ಹೇಳುವಾಗ ಹೇಳಬೇಕು. ಹಾಗಿದ್ದ ಮೇಲೆ ನೀವು ಶಾಸನಸಭೆಯಲ್ಲಿ ಏಕೆ ಪಾಸ್ ಮಾಡಿಸುತ್ತೀರಿ? ಇದನ್ನು ಹೇಳಬೇಕೆಂದು ಕೇಳುತ್ತೇನೆ. ಅವರು ಆವತ್ತು ಘೋಷಣೆ ಮಾಡಿದ ಅನೇಕ ಕಾರ್ಯಕ್ರಮಗಳು ಇವತ್ತು supplementary Demands ನಲ್ಲಿವೆ. ಅದಕ್ಕಾಗಿ ನಾವು ಹೆಚ್ಚಿಗೆ ಟೀಕೆ ಮಾಡುವುದಿಲ್ಲ. ಈ ಕಾರ್ಯಕ್ರಮಗಳೆಲ್ಲ ಪ್ರಚಾರಕ್ಕೋಸ್ಕರ ಮಾಡುತ್ತಿರುವ ಕಾರ್ಯಕ್ರಮಗಳು, ಅಭಿವೃದ್ಧಿಗಾಗಿ ಅಲ್ಲ, ಇದರಿಂದ ನಮ್ಮ ರಾಜ್ಯದ ಸ್ಥಿತಿ ಗಂಭೀರವಾಗುತ್ತದೆ ಎಂದು ನಾವು ಆವತ್ತೇ ಹೆಳಿದ್ದೆವು. ಇವತ್ತು ಆ ಗಂಭೀರತೆ ತಮ್ಮ ಮುಂದೆ ಬಂದಿದೆ. ಅಭಿಯಾಚನೆ 2ಕ್ಕೆ ಸಂಬಂಧಪಟ್ಟಂತೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. 902 ಲಕ್ಷ ರೂಪಾಯಿಗಳನ್ನು K.M.F. ಸಂಸ್ಥೆ ಬಾಕಿ ಇರಿಸಿಕೊಂಡಿದ್ದ ಸಾಲವನ್ನು ಅನುದಾನವಾಗಿ ಪರಿವರ್ತಿಸಲು ಉದ್ದೇಶಿಸಿದೆ ಎಂದು ಹೇಳೀದ್ದೀರಿ. ದಯಮಾಡಿ ನೀವು ಇದರ ಬಗ್ಗೆ ವಿವರಗಳನ್ನು ಕೊಡಬೇಕು. K.M.F.ಸಂಸ್ಥೆಯದಿತ್ತೇ? Erstwhile K.D.D.C.ಯದಿತ್ತೇ? ಎಷ್ಟು ವರ್ಷದಿಂದ ಇತ್ತು? ಎನ್ನುವ ವಿವರಗಳನ್ನು ಕೊಡಬೇಕು. ಏಕೆಂದರೆ ಹಿಂದೆ ನಾನೂ K.M.F.ಗೆ ಅಧ್ಯಕ್ಷನಾಗಿದ್ದೆ. ಹೆಗಡೆಯವರ ಕಾಲದಲ್ಲೇ ಒಂದು ಡಿಸಿಷನ್ ತೆಗೆದುಕೊಂಡಿದ್ದೆವು. K.M.F.ಅನ್ನು ಅಟಾನಮಿಯನ್ನಾಗಿ declare ಮಾಡಿ, ನಾವು ಸರ್ಕಾರಕ್ಕೆ ನಮ್ಮ deficit ಅನ್ನು, loss ಅನ್ನು ಕೇಳುವುದಿಲ್ಲ ಎಂದು

ನಿರ್ಣಯ ತೆಗೆದುಕೊಂಡಿದ್ದೆವು. ಹಾಲಿನ ದರವನ್ನು ನಾವೇ ನಗದಿ ಮಾಡಿಕೊಳ್ಳುತ್ತೇವೆ ಎಂದು ಆವತ್ತು ಹೇಳಿದ್ದೆವು. ನಮ್ಮ ಕಾಲದಲ್ಲಿ ಸರ್ಕಾರ deficit ಅನ್ನು ತುಂಬಿ ಕೊಡಲಿಲ್ಲ. ಈಗ ತಾವು ಏಕೆ ಕೊಟ್ಟಿದ್ದೀರಿ ಎನ್ನುವುದಕ್ಕೆ ನಮಗೆ ಉತ್ತರ ಬೇಕು. ಸನ್ಮಾನ್ಯ ರೇವಣ್ಣನವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ ಎಂದು ಕೊಟ್ಟಿರುವಿರಾ? ಅಥವಾ ಇದೊಂದು ಪಾಲಿಸಿಯೇ ಎನ್ನುವುದನ್ನು ತಾವು spell out ಮಾಡಬೇಕು. ಹಿಂದೆ pricing policy ಸರ್ಕಾರಕ್ಕಿರುವವರೆಗೆ deficit ಕೊಡುತ್ತಿದ್ದರು. Prising Policy ಬಗ್ಗೆ K.M.F. ಗೆ ಅಟಾನಮಿಯನ್ನು ಡಿಕ್ಲೇರ್ ಮಾಡಿದ ಮೇಲೆ, ಸರ್ಕಾರದಿಂದ ಯಾವುದೇ ರೀತಿಯ ಸಹಾಯಧನವನ್ನು ಕೇಳುವುದಿಲ್ಲ ಎಂದು agreement ಮಾಡಿಕೊಟ್ಟಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ: K.M.F. ಲಾಭದಲ್ಲಿದ್ದ ಮೇಲೆ ಅದನ್ನು ಕೊಡುವುದು ಏಕೆ?

ಶ್ರೀ ಜೆ.ಸಿ.ಮಾಧುಸ್ವಾಮಿ: K.M.F.ನ ಯಾವ ಸಾಲವನ್ನು ಅನುದಾನ ಎಂದು ತಾವು treat ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು. ತಾವು ಯಾವ ಸಾಲವನ್ನು direct ಆಗಿ K.M.F.ಗೆ ಕೊಟ್ಟಿದ್ದೀರಿ. K.M.F.ಗೆ ಸಾಲ ಕೊಡುವ ಸಂಸ್ಥೆ N.D.D.B.ಸಾಮಾನ್ಯವಾಗಿ K.M.F., N.D.D.B. ಯಿಂದ ಸಾಲ ತೆಗೆದುಕೊಂಡು ಅದಕ್ಕೆ ಸರ್ಕಾರವನ್ನು guarantee ಆಗಿ ನಿಲ್ಲಿಸಿಕೊಂಡು projectಗಳನ್ನು ಮಾಡುತ್ತದೆ. ಈ ಸಾಲ ಯಾವುದು ಎನ್ನುವುದನ್ನು ಹೇಳಬೇಕು.

ಇನ್ನು Home and Transport ನಲ್ಲಿ ನಾವು ನಿಮ್ಮಿಂದ ಬಹಳ ನರೀಕ್ಷೆ ಮಾಡಿದ್ದೆವು. 10–15 police station ಗಳನ್ನಾದರೂ open ಮಾಡಲಿಕ್ಕೆ ತಾವು ಈ Supplementary Damands ನಲ್ಲಿ ಅವಕಾಶ ಕೊಡುತ್ತೀರಿ ಎಂದು ನಿರೀಕ್ಷಿಸಿದ್ದೆವು. ಈ ಬಗ್ಗೆ ಇಲ್ಲಿ ಬಹಳ ಸಲ ಚರ್ಚೆ ಮಾಡಿದ್ದೆವು. ನಾವು ಬಹಳ ಕಷ್ಟದಲ್ಲಿದ್ದೇವೆ, ಲಾರಿಗಳು ಜಾಸ್ತಿಯಾಗಿವೆ, mining operation ಜಾಸ್ತಿಯಾಗಿದೆ, ಒಂದೋ ಎರಡೋ police stationಗಳನ್ನು ಕೊಡುತ್ತೀರಿ ಅಂದುಕೊಂಡಿದ್ದೆವು. ಆ ಭಾಗಕ್ಕೆ 10–15 police station ಗಳನ್ನು ಕೊಟ್ಟರೆ consider ಮಾಡಬಹುದೇ ಎಂದು ನಾನು ನೋಡುತ್ತೇನೆ ಎಂದು ಪ್ರಕಾಶ್‌ರವರೂ ಕೂಡ ಹೇಳಿದ್ದರು. ತಾವು ಅದನ್ನು ಕೊಡಲಿಲ್ಲ. ಆದರೆ additional battalian ಕೊಟ್ಟಿದ್ದೀರಿ. what is the emergency for Hassan now? ಅದನ್ನು ತಾವು ಹೇಳಬೇಕಲ್ಲವೇ? ಹೊಸದಾಗಿ ಸೃಜಿಸಲಾದ India

Reseve Battalion ಅಧಿಕಾರಿಗಳ ವೇತನ ಮತ್ತು ಇತರ ಭತ್ಯೆಗಳಿಗಾಗಿ 514 ಲಕ್ಷ ರೂಪಾಯಿಗಳನ್ನು ಅಭಿಯಾಚನೆಗೆ ಸೇರಿಸಿಕೊಂಡಿದ್ದೀರಿ. what is the need? ನಮಗೆ ಓಡಾಡುವುದಕ್ಕೆ ಆಗುವುದಿಲ್ಲ, ಏನಾದರೂ ಮಾಡಿ ಎಂದರೆ ನೀವು ಮಾಡುವುದಿಲ್ಲ. ಏಕೆ ಈ ಅನ್ಯಾಯಗಳನ್ನು ನಮ್ಮ ಕ್ಷೇತ್ರಗಳಿಗೆ ಮಾಡುತ್ತಿದ್ದೀರಿ ಎನ್ನುವುದನ್ನು ತಾವು ದಯಮಾಡಿ ಹೇಳಬೇಕು. ಅಥವಾ ನೀವ್ಯಾರೂ ಇಲ್ಲಿರಬೇಡಿ ಎಂದು ಹೇಳಿಬಿಡಿ. ನಾವ್ಯಾರೂ ಮಾತನಾಡುವ ಗೋಜಿಗೇ ಹೋಗುವುದಿಲ್ಲ. Social Welfare Department ಗೆ ಸಂಬಂಧಿಸಿದಂತೆ ಹಾಸ್ಟೆಲ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿ ಎಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ post metric ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಅದರಲ್ಲೂ S.C., S.T.ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. 80%-90% ತೆಗೆದುಕೊಂಡು ಬರುತ್ತಿರುವ ಆ ಮಕ್ಕಳಿಗೆ ಇವತ್ತು ನಾವು ಹಾಸ್ಟೆಲ್‌ಗಳಿಗೆ admission ಕೊಡುವುದಕ್ಕೆ ಆಗುತ್ತಿಲ್ಲ. ಅಲ್ಲಿ facility ಇದ್ದರೂ ಕೂಡ ನೀವು ಇವತ್ತು ಅವಕಾಶ ಕೊಡುತ್ತಿಲ್ಲ. ಕೇವಲ ಊಟದ ದುಡ್ಡು ಕೊಡಿ, ಹಾಸ್ಟೆಲ್ ಬಿಲ್ಡಿಂಗ್ ಇದೆ ನಾವು ಮಕ್ಕಳನ್ನು ಸೇರಿಸಿಕೊಳ್ಳುತ್ತೇವೆ ಎಂದರೆ ಅದಕ್ಕೆ ನೀವು ಅವಕಾಶ ಕೊಡುತ್ತಿಲ್ಲ. ಇನ್ನೊಂದಷ್ಟು ದುಡ್ಡು ಖರ್ಚಾದರೂ ಪರವಾಗಿಲ್ಲ, ತಾವು ಇವತ್ತು ಹಾಸ್ಟೆಲ್‌ಗಳನ್ನು, ಅದರಲ್ಲೂ post metric ಹಾಸ್ಟೆಲ್‌ಗಳನ್ನು ಹೆಚ್ಚು ಮಾಡಲು ಒತ್ತು ಕೊಡುವಿರಾ ಎಂದು ಕೇಳುತ್ತೇನೆ. Co-operationನಲ್ಲಿ 300 ಲಕ್ಷ ರೂಪಾಯಿಗಳು ಹೆಣ್ಣುಮಕ್ಕಳ ಡೈರಿ ಸಹಕಾರ ಸಂಘಗಳ ಕಟ್ಟಡ ಕಟ್ಟಲು ಎಂದು ಹೇಳಿದ್ದೀರಿ. ಇದು ಏನು ಎಂದು ನಮಗೆ ಅರ್ಥವಾಗಲಿಲ್ಲ. ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳು ಜಿಲ್ಲಾ ಮಟ್ಟದಲ್ಲಿ ಸ್ವಂತ ಕಟ್ಟಡ ಹೊಂದಲು ಅನುಕೂಲವಾಗುವಂತೆ 1 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಆಯವ್ಯಯದಲ್ಲಿ ಅವಕಾಶ ಮಾಡಿರದ ಕಾರಣ ಮೊದಲ ಹಂತದಲ್ಲಿ 300 ಲಕ್ಷ ರೂಪಾಯಿಗಳು ಅಭಿಯಾಚನೆಯಲ್ಲಿ ಸೇರಿದೆ ಎಂದು ಹೇಳಿದ್ದೀರಿ. ಜಿಲ್ಲಾ ಮಟ್ಟದಲ್ಲಿ ಮಹಿಳಾ ಹಾಲು ಉತ್ಪಾದಕರ ಒಕ್ಕೂಟ ಬರಬಹುದೇ ಹೊರತು ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳು ಬರುವುದಿಲ್ಲ. ತಾವು ಈಗ ಒಂದು ಸಂಘಕ್ಕೆ ಒಂದು ಲಕ್ಷ ರೂಪಾಯಿಗಳ ಅನುದಾನ ಎಂದು ಹೇಳಿದ್ದೀರಿ. 300 ಸಂಘಗಳನ್ನು ಕಟ್ಟುತ್ತಿದ್ದೀರಾ ಅಥವಾ ಒಂದು ಸಂಘವನ್ನು ಕಟ್ಟುತ್ತಿದ್ದೀರಾ? ಎಲ್ಲಾದರೂ federation ಮಾಡಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದ್ದು ಒಂದು ಕಟ್ಟಡ ಕಟ್ಟುತ್ತಿದ್ದೀರಾ ಎನ್ನುವುದು ಸ್ಪಷ್ಟವಾಗಬೇಕು. ಏಕೆಂದರೆ, ಒಂದು ಲಕ್ಷ ರೂಪಾಯಿಗಳ

ಅನುದಾನವನ್ನು ನೀಡಲು ಉದ್ದೇಶಿಸಿದ್ದೇವೆ ಎಂದು ಹೇಳುತ್ತೀರಿ. 300 ಲಕ್ಷ ಬೇಕು ಎಂದು ಹೇಳಿದ್ದೀರಿ. ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ಕಟ್ಟಡ ಕಟ್ಟಿದರೂ 27 ಲಕ್ಷ ರೂಪಾಯಿಗಳು ಸಾಕಾಗಿತ್ತು. ಇದು correction ಆಗಬೇಕೇ ಎಂದು ದಯಮಾಡಿ ನೋಡಿ. ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಕಟ್ಟಲಿಕ್ಕೆ ಪ್ರತಿ ಗ್ರಾಮಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಿರುವಿರೇ ಎನ್ನುವುದನ್ನು clarify ಮಾಡಬೇಕಾಗುತ್ತದೆ. P.W.D.ಯಲ್ಲಿ ತಾವು ಶಿಕಾರಿಪುರದ ಕಾಲೋನಿಗಳಿಗೆ ಚರಂಡಿ ಮಾಡಲಿಕ್ಕೆ, ರೋಡು ಮಾಡಲಿಕ್ಕೆ ಹಣವನ್ನು ಈ supplementary Demandsನಲ್ಲಿ ಸೇರಿಸಿಕೊಂಡಿದ್ದೀರಿ. ನಮ್ಮ ಕ್ಷೇತ್ರಗಳ್ಳಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೂ, ಶಿಕಾರಿಪುರದಲ್ಲಿರುವವರಿಗೂ ಏನು ವ್ಯತ್ಯಾಸ ಎಂದು ನಮಗೆ ಗೊತ್ತಾಗಬೇಕು. ಶಿಕಾರಿಪುರಕ್ಕೆ ನೀವು ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅಲ್ಲಿರುವ ಹರಿಜನರೆಲ್ಲ ಅಭಿವೃದ್ಧಿ ಮಾಡುತ್ತೇವೆ ಎನ್ನುವ ಬದಲು, ಅದನ್ನೇ ನಮಗೂ ಸ್ವಲ್ಪ ಹಂಚಿ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಹೀಗಾದರೆ ನಾವು ಎಲ್ಲಿಗೆ ಹೋಗಬೇಕು? ಮತ್ತೊಂದು ವಿಷಯವೆಂದರೆ, ಈ ಕಾರ್ಯಕ್ರಮವನ್ನು ಯಾರು ಮಾಡಬೇಕು? ರಸ್ತೆ ಮಾಡುವುದು, ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದು P.W.D.ಯ ಕೆಲಸವಾಗಬೇಕು. Scheduled Caste ಕಾಲೋನಗಳಲ್ಲಿ ಚರಂಡಿ, ರಸ್ತೆಗಳನ್ನು ಮಾಡುತ್ತೇವೆ ಎಂದರೆ ಇದನ್ನು Slum Boardಗೆ ಕೊಡಬಹುದು, ಇಲ್ಲವೆಂದರೆ ಜಿಲ್ಲಾ ಪಂಚಾಯಿತಿಗೆ ಕೊಡಬೇಕು, ಇಲ್ಲವೆಂದರೆ Social Welfare Department ನಿಂದನೋ ಅಥವಾ S.C./S.T.Corporation ನಿಂದಾದರೂ ಮಾಡಿಸಿ ಅಭಿವೃದ್ಧಿ ಮಾಡಬೇಕು. ಆದರೆ ಈ ವಿಚಾರದಲ್ಲಿ ತಾವು P.W.D.ಗೆ ಏಕೆ ಅನುದಾನ ಕೊಡುತ್ತಿದ್ದೀರಿ ಎನ್ನುವುದನ್ನು ಹೇಳಬೇಕು. ಹರದನಹಳ್ಳಿಯನ್ನು ಒಂದು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸುವ ಸಲುವಾಗಿ 280.55 ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನವನ್ನು ಅಭಿಯಾಚನೆಯಲ್ಲಿ ಸೇರಿಸಿದೆ ಎಂದು ಹೇಳಿದ್ದೀರಿ. ಇದಕ್ಕೆ ತಾವೇ ಉತ್ತರವನ್ನು ಹೇಳಬೇಕು ಯಡಿಯೂರಪ್ಪನವರೆ. ಏಕೆ? ಇದೇನು? ಭಯಭೀತಿಯಿಂದ ಬದುಕಿದ್ದೀರ? ಏನು ಕಥೆಯಾಗಿದೆ ನಮ್ಮದು? ಇವನ್ನೆಲ್ಲಾ ನಮಗೆ ಹೇಳಿ. ಅರ್ಥವಾಗುತ್ತದೆ. ಭಯಭೀತಿಯಲ್ಲೆನಾದರೂ ಬದುಕಿದ್ದೀರ? ಇನ್ನು ಅಭಿಯಾನ ಸಂಖ್ಯೆ 21 ರಲ್ಲಿ ನೇತ್ರಾವತಿ ತಿರುವು ಯೋಜನೆ ಸರ್ವೆ ಕಾಮಗಾರಿಗಳನ್ನು ನಡೆಸುತ್ತಿರುವ M/s. National Remots Sensing Agency ಯವರಿಗೆ ಬಾಕಿ ಬಿಲ್ಲುಗಳನ್ನು ಪಾವತಿಗಾಗಿ ಅಗತ್ಯವಿರುವ 400 ಲಕ್ಷಗಳ ತಿರುವಳಿಗಾಗಿ ಜಲಸಂಪನ್ಮೂಲ ಇಲಾಖೆಗೆ ಕೊಡುವಂತೆ ಹೆಚ್ಚುವರಿ ಅಭಿಯಾನದಲ್ಲಿ ಸೇರಿಸಿದೆ. 10 ಕೋಟಿ ಕೊಡಬೇಕೆಂದು ಅವರ

ಡಿಮ್ಯಾಂಡ್ ಇರುವುದು. ನೇತ್ರಾವತಿ ತಿರುವ ಯೋಜನೆ ರಿಪೋರ್ಟ್‌ನ್ನು ಸರ್ಕಾರದ ಮುಂದೆ ಇಡಬೇಕೆಂದರೆ You have to give another 10 crores. ನೀವು 4 ಕೋಟಿ ಕೊಟ್ಟರೆ ಮತ್ತೆ ರಿಪೋರ್ಟ್‌ನ್ನು ಅವನು ನಿಮಗೆ ತಂದುಕೊಡುವುದಿಲ್ಲ. ಆ ರಿಪೋರ್ಟ್ ಇಲ್ಲದೇ ನಾವು ಮಾಡುವ ಯಾವುದೇ ಚರ್ಚೆಗೂ ಒಂದು ಅರ್ಥ ಬರುವುದಿಲ್ಲ. ಅವೊತ್ತು ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ ಅವನಿಗೆ 3 ಕೋಟಿ ರೂಪಾಯಿಗಳನ್ನು ಅವನಿಗೆ ಕೊಟ್ಟುಬಿಟ್ಟಿದ್ದಾರೆ. ಇನ್ನೂ 10 ಕೋಟಿ ರೂಪಾಯಿಗಳು ಬಾಕಿ ಇದೆ. ದಯಮಾಡಿ ಆ 10 ಕೋಟಿ ರೂಪಾಯಿಗಳನ್ನು ಒಂದು ಬಾರಿಯಲ್ಲಿಯೇ ಅವನಿಗೆ ಕೊಟ್ಟು ಆ ರಿಪೋರ್ಟ್ ತರಿಸಿಕೊಳ್ಳಿ. ಏನಾದರೂ ಮಾಡಿ. ಇನ್ನು ಹೊಸ ಕೆರೆಗಳ ನಿರ್ಮಾಣ ಕಾಮಗಾರಿಗಳಿಗೆ ಹೆಚ್ಚುವರಿ ಹಣದ ಅವಶ್ಯಕತೆ ಇರುವ ಕಾರಣ 500 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಈ ಅಭಿಯಾಚನೆಯಲ್ಲಿ ಸೇರಿದೆ ಎಂದಿದ್ದೀರಿ. ಸಾರ್ spell out ತಾವು ಮಾಡಬೇಕು. ಈ ಹೊಸ ಕೆರೆಗಳನ್ನು ಎಲ್ಲೆಲ್ಲಿ ಮಾಡುತ್ತೀರಿ? ಎಲ್ಲಿ ನಿಮಗೆ ಜಾಗವಿದೆ? Catchments ಇದೆ. ಇನ್ನೂ ಆ ರೈತರುಗಳು ಜಾಗಗಳನ್ನು ಬಿಟ್ಟಿದ್ದಾರೆಯೆ? ನೀವು ಹೇಳಿರತಕ್ಕಂಥ ಹೊಸ ಕೆರೆಗಳನ್ನು ನೀರಾವರಿ ವಲಯದಲ್ಲಿ ಮಾಡುತ್ತೀರ ಅಥವಾ ಬಯಲು ಸೀಮೆಯಲ್ಲಿ ಮಾಡುತ್ತೀರ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಆಧುನೀಕರಣ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಏತ ನೀರಾವರಿ ಯೋಜನೆಗೆ 25 ಕೋಟಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಬ್ಯಾರೇಜ್‌ಗೆ 20 ಕೋಟಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಪ್ರವಾಹ ನಿಯಂತ್ರಣ ಕಾಮಗಾರಿಗಳಿಗೆ 15 ಕೋಟಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಪ್ರವಾಹ ನಿಯಂತ್ರಣ ಕಾಮಗಾರಿಗೆ Rehabilitation scheme ನಲ್ಲಿ ಕೊಟ್ಟಂಥ ಇನ್ನೂರು ಚಿಲ್ಲರೆ ಕೋಟಿ ಖರ್ಚಾಗಿಲ್ಲವೆಂದು ನಾವು ಭಾಷಣ ಮಾಡಿದ್ದೇವೆ. ತಾವು ಈಗ 15 ಕೋಟಿ ರೂಪಾಯಿಗಳನ್ನು ಇಡುತ್ತಿದ್ದೀರಿ. ದಯಮಾಡಿ ಇದಕ್ಕೆಲ್ಲಾ ತಾವು ಸಮಾಧಾನ ಹೇಳಬೇಕು. ಅನಿವಾರ್ಯತೆಗಳು ಎಲ್ಲರಿಗೂ ಬರುತ್ತದೆ. ನಾವು ಒಂದೇ ಸಲ ಬಜೆಟ್‌ನ್ನು ಪ್ರಿಪೇರ್ ಮಾಡಿ ಇಡುವಷ್ಟು ಸಾಮರ್ಥ್ಯ ಇಲ್ಲದೇ ಹೋದರೂ ಏನು ಈಗ ನೀವು ಹೇಳಿದ್ದೀರೆಂದರೆ ಕನ್ನಡ ಮತ್ತು ಸಂಸ್ಕೃತಿ ಮತ್ತು ರೆವಿನ್ಯೂ ಕೆಳಗಡೆ ಹೇಳಿದ್ದೀರಿ. ಅವೋತು ತಮ್ಮ ಭಾಷಣದಲ್ಲಿ ಹೇಳಿಬಿಟ್ಟಿದ್ದೀರಿ. ನಾವು ಅವೊತ್ತೇ ಸೇರಿಕೊಂಡು ಬಿಟ್ಟಿದೆ ಇದೆಲ್ಲಾ ಎಂದು ತಿಳಿದುಕೊಂಡುಬಿಟ್ಟೆವು. ಸಿದ್ದರಾಮಯ್ಯನವರು, ಅವೊತ್ತೇ ಸೇರಿಕೊಂಡು ಬಿಟ್ಟಿದೆ ಈ ಬಜೆಟ್‌ನಲ್ಲಿ ಎಂದು ತಿಳಿದುಕೊಂಡಿದ್ದೆವು. ಬಜೆಟ್ ಭಾಷಣದಲ್ಲಿಯೇ ಅವೊತ್ತು ಬಿಲ್ಡಿಂಗ್ ಕಟ್ಟುವುದಕ್ಕೆ ವಿನಾಯಿತಿ ಹಾಗೂ ಇತ್ಯಾದಿಗಳ ಬಗ್ಗೆ ಯಡಿಯೂರಪ್ಪನವರು

ಸದನದಲ್ಲಿ announce ಮಾಡಿದರಲ್ಲ. ನಮಗೆ ಅಶ್ಚರ್ಯವಾಯಿತು. ಹೇಗೆ ಇವರು ಹೇಳುತ್ತಿದ್ದಾರೆ, ಹೇಗೆ ಇವರು ಇವುಗಳನ್ನು ಸೇರಿಸುತ್ತಿದ್ದಾರೆಂದು. ಇವೊತ್ತು ವಾಸ್ತವಾಂಶ ಅರ್ಥವಾಗಿದೆ. Supplementary ನಲ್ಲಿ ಸೇರಿಸಿದ್ದೀರಿ. ನಮಗೂ ಒಂದು ಬಿಲ್ಡಿಂಗ್‌ನ್ನು ಹಾಕಿಕೊಟ್ಟಿದ್ದೀರಿ. ಅವೊತ್ತು ವಂದನೆ ಅರ್ಪಿಸಿದ್ದೇನೆ. ಇವೊತ್ತೂ ಅರ್ಪಿಸುತ್ತಿದ್ದೇನೆ. ಆದರೆ ದಯಮಾಡಿ ಡಿಸಿಪ್ಲಿನ್ ಅನ್ನು ಬಿಟ್ಟು ಹೋಗಬಾರದು. ನಾವೇನು ಇವತ್ತು ಅನುಭವಿಸುತ್ತಿದ್ದೇವೆ. ಮುಂದೆ ಬರುವವರಿಗೆ ಅದರ ಪೂರ್ಣ ಫಲ ಸಿಕ್ಕುವಂಥ ಸ್ಥಿತಿಯನ್ನು ನಿರ್ಮಾಣ ಮಾಡಿ ಹೋಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು Supplementary budgetನ ಮೊದಲನೆಯ ಕಂತಿನಲ್ಲಿ 1955 ಕೋಟಿ ರೂಪಾಯಿಗಳಿಗೆ ಒಪ್ಪಿಗೆಯನ್ನು ಕೇಳುತ್ತಿದ್ದಾರೆ. “Supplementary estimatesಅನ್ನು ಮಂಡಿಸಬಾರದು. ಮಂಡಿಸುವುದಕ್ಕೆ ಅವಕಾಶವಿಲ್ಲ. ಅದು ತಪ್ಪು” ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ, ಎಲ್ಲಾ ಸರ್ಕಾರಗಳು ಕೂಡ Supplementary estimates ಅನ್ನು ಮಂಡಿಸುತ್ತವೆ. ಒಪ್ಪಿಗೆಯನ್ನು ತೆಗೆದುಕೊಳ್ಳುತ್ತವೆ. ಆ ಪ್ರಕಾರ ಖರ್ಚು ಮಾಡತಕ್ಕಂಥಾದ್ದನ್ನು ಮಾಡುತ್ತವೆ. ಎಲ್ಲಾ ಸರ್ಕಾರಗಳು ಮಾಡಿವೆ. ನಾನು ಇದ್ದಾಗಲೂ ಕೂಡ ಮಾಡಲಾಗಿದೆ. ಬೇರೆ ಸರ್ಕಾರಗಳು ಕೂಡ ಮಂಡನೆ ಮಾಡಿವೆ. ಮೊನ್ನೆ ಎರಡು ದಿವಸಗಳ ಹಿಂದೆ ಶುಕ್ರವಾರ Appropriation Bill Pass ಆಗಿದೆ. ಆ Appropriation Bill ನಲ್ಲಿ ನೀವು ಏನೇನು ಕಾರ್ಯಕ್ರಮಗಳನ್ನು ಹೇಳಿ ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿ ನೀವು ಒಪ್ಪಿಗೆಯನ್ನು ತೆಗೆದುಕೊಂಡಿದ್ದೀರಿ ಅವೆಲ್ಲವೂ ಈಗಾಗಲೇ ನೀವು ಮಾಡಿರತಕ್ಕಂಥ ಕಾರ್ಯಕ್ರಮಗಳಾಗಿವೆ. ಅವೆಲ್ಲವುಗಳನ್ನು ನೀವು ಬಜೆಟ್‌ನಲ್ಲಿ announce ಮಾಡಿದ್ದೀರಿ. ಈ ಕಾರ್ಯಕ್ರಮಗಳಿಗೆ ಈ ವರ್ಷದಲ್ಲಿ ಹಣ ಸಾಲದೇ ಹೋದರೆ ಆ ಹಣವನ್ನು ಭರಿಸಿಕೊಳ್ಳುವುದಕ್ಕೋಸ್ಕರವಾಗಿ ನಮಗೆ ಇನ್ನೊಂದಷ್ಟಕ್ಕೆ ಒಪ್ಪಿಗೆ ಬೇಕಾಗುತ್ತದೆ ಖರ್ಚು ಮಾಡುವುದಕ್ಕೆ. ಅದಕ್ಕಾಗಿ ನೀವು ಒಪ್ಪಿಗೆ ಕೊಡಿ ಎಂದು ಕೇಳತಕ್ಕಂಥಾದ್ದು. ಈ ವಿಚಾರವನ್ನು Article 205 (1) ರಲ್ಲಿ ಹೇಳಿರತಕ್ಕಂಥಾದ್ದು. ಇನ್ನೊಂದು Unforeseen Expenditure ಎಂದು ಹೇಳುತ್ತಾರೆ. ಬಜೆಟ್ ಮಂಡಿಸುವಾಗ ನಮ್ಮ ಊಹೆಗೂ ಬರದೇ ಇರತಕ್ಕಂಥವುಗಳು ಇರುತ್ತವೆ. ಆ ರೀತಿ ನಮ್ಮ ಊಹೆಗೂ ಬರದೇ ಇರತಕ್ಕಂಥ ಖರ್ಚುಗಳು, ಇವು Additional Expenditure. ಇದರ ಜೊತೆಗೆ New

services ಬಹಳ ಅಗತ್ಯವಿರುವಂಥವುಗಳು. According to the need. There is a need to take up new services., New programmes ಎನ್ನತಕ್ಕಂಥಾದ್ದಕ್ಕೆ ಹಣ ಖರ್ಚು ಮಾಡುವುದಕ್ಕೋಸ್ಕರ Article 205 (1) ರಲ್ಲಿ ಅವಕಾಶ ಮಾಡಿಕೊಟ್ಟಿರುವುದು. ಅದರ ಪ್ರಕಾರವಾಗಿಯೇ ಮಂಡಿಸಿದ್ದೇವೆಂದು Supplementary estimates ನಲ್ಲಿ ಹೇಳಿದ್ದಾರೆ. ಇವರು ಈಗ ತಾನೆ Appropriation Bill Pass ಮಾಡಿಕೊಂಡು 1955 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಕೇಳುತ್ತಿದ್ದಾರೆ. ಈಗಾಗಲೇ ಅವರ ಬಜೆಟ್‌ನಲ್ಲಿ ಹೇಳಿರುವ ಪ್ರಕಾರ ಬೆಳೆ ಸಾಲ ಮನ್ನಾ ಮಾಡಿರುವುದಕ್ಕೆ ಇವರಿಗೆ Resources ಹೇಗೆ ಎಂಬುದನ್ನು ಹೇಳಿಲ್ಲ. 2300 ಕೋಟಿ ರೂಪಾಯಿ ಬೆಳೆ ಸಾಲ ಮನ್ನಾ ಮಾಡುವುದಕ್ಕೆ ಆಗುತ್ತದೆ ಎಂದಿದ್ದಾರೆ. ಆದರೆ ಅದಕ್ಕೆ Resources ಹೇಗೆ ಮಾಡಿಕೊಳ್ಳುತ್ತಾರೆ ಎಂಬ ಬಗ್ಗೆ ಹೇಳಿಲ್ಲ. ಇನ್ನು ಲಾಟರಿ ನಿಷೇಧ ಮಾಡಿರುವುದರಿಂದ 250 ಕೋಟಿ ರೂಪಾಯಿ ಸರ್ಕಾರಕ್ಕೆ ಬರುವುದು ನಿಲ್ಲುವುದರಿಂದ ಇದನ್ನು ಭರಿಸಿಕೊಳ್ಳುವುದಕ್ಕೆ Resources ಏನು ಎಂಬ ಬಗ್ಗೆ ಕೂಡ ಇವರು ಹೇಳಿಲ್ಲ. ಇದಲ್ಲದೇ ಸಾರಾಯಿ ನಿಷೇಧ ಮಾಡಿರುವುದರಿಂದ ಎಷ್ಟು ನಷ್ಟ ಆಗಬಹುದು? ಅವರು ಹೇಳುವ ಪ್ರಕಾರ ಎರಡು ಸಾವಿರ ಕೋಟಿ ರೂಪಾಯಿ. ಆದರೆ ಅಷ್ಟು ಆಗುವುದಿಲ್ಲ. ಏಕೆಂದರೆ ಈಗಾಗಲೇ ಯಡಿಯೂರಪ್ಪನವರು ಹೇಳಲಿಲ್ಲ. 25 ಲಕ್ಷ ಕೇಸ್‌ಗಳನ್ನು ಈಗ ಐ.ಎಂ.ಎಲ್. ನವರು ಮಾರಾಟ ಮಾಡುವುದಕ್ಕೆ ಶುರು ಮಾಡಿಕೊಂಡು ಬಿಟ್ಟಿದ್ದಾರೆ, consumption double ಆಗಿಬಿಟ್ಟಿದೆ ಎಂದು ಹೇಳಿದಾಗ ಯಡಿಯೂರಪ್ಪನವರು ಒಪ್ಪಲಿಲ್ಲ. ಅದಕ್ಕೆ ಅವರು ಸಮಾಜಾಯಿಷಿ ಕೊಡುತ್ತಾರೆಂದು ತಿಳಿದುಕೊಂಡೆ ಆದರೆ ಅವರು ಆಗ ಕೊಡಲಿಲ್ಲ. ನನಗೆ ಬಂದಿರುವ information ಪ್ರಕಾರ ಒಂದು ತಿಂಗಳಿಗೆ ಪಾನೀಯ ನಿಗಮದಿಂದ ಎಷ್ಟು ಐ.ಎಂ.ಎಲ್. ಹೋಗುತ್ತಿತ್ತೋ ಅದರ ಎರಡು ಪಟ್ಟು ಈಗ ಐ.ಎಂ.ಎಲ್. ಕನ್ಸಂಪ್‌ಶನ್ ಆಗುವುದಕ್ಕೆ ಶುರುವಾಗಿದೆ. ಆದುದರಿಂದ ಇದುವರೆಗೂ ಸಾರಾಯಿ ಕುಡಿಯುತ್ತಿದ್ದವರು switchover ಆಗಿಬಿಟ್ಟಿದ್ದಾರೆ I.M.L. ಕುಡಿಯುವುದಕ್ಕೆ. ಈಗ ಹಳ್ಳಿ ಹಳ್ಳಿಗಳಲೆಲ್ಲಾ ಕಿರಾಣಿ ಅಂಗಡಿಗಳಿಗೆ ಇದು ಸಿಗುತ್ತದೆ. ಮೊದಲು ಬಿಳಿಯದ್ದನ್ನು ಕುಡಿಯುತ್ತಿದ್ದವರು ಈಗ ಬಣ್ಣ ಹಾಕಿದ್ದನ್ನು ಬಾಟಲಿಯಲ್ಲಿರುವುದನ್ನು ಕುಡಿಯುವುದಕ್ಕೆ ಶುರು ಮಾಡಿದ್ದಾರೆ. ಆದುದರಿಂದ ಇವರು ಸಾರಾಯಿ ನಿಷೇಧ ಮಾಡಿ ಬಡವರಿಗೇನೋ ಅನುಕೂಲ ಮಾಡಿಕೊಡಲಿಲ್ಲ. ಆ ಹೆಣ್ಣು ಮಕ್ಕಳ ಕಣ್ಣೀರನ್ನೂ ಒರೆಸಲಿಲ್ಲ. ಅವರ ಹತ್ತಿರ ಹೂವಿನ ಹಾರವನ್ನು ಬೇರೆ ದೊಡ್ಡದಾಗಿ ನೀವು

ಹಾಕಿಸಿಕೊಂಡಿರಿ. ಪಾಪ ಆ ಹೆಣ್ಣುಮಕ್ಕಳು ಭಾರಿ ದೊಡ್ಡ ಹೂವಿನ ಹಾರವನ್ನು ನಿಮಗೆ ಹಾಕಿದರು. ಸ್ತ್ರೀ ಸಂಘಗಳಿಂದ ಹೂವಿನ ಹಾರವನ್ನು ಹಾಕಿಸಿಕೊಂಡು ಅವರ ಕಣ್ಣೀರನ್ನೂ ಒರೆಸಲಿಲ್ಲ. ಅವರ ಮನೆಯಲ್ಲಿ ಕುಡಿಯುತ್ತಿದ್ದವರು ಕುಡಿಯುವುದನ್ನು ಬಿಡಲಿಲ್ಲ. ನೀವು ಸಾರಾಯಿ ನಿಷೇಧ ಮಾಡಿರುವುದರಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ನಷ್ಟ ಆಗಬಹುದು. 1950 ಕೋಟಿ ರೂಪಾಯಿಗಳು ಪೂರ್ತಿಯಾಗಿ ಐ.ಎಂ.ಎಲ್. ನಿಂದ ಬಂದುಬಿಡುತ್ತದೆ ಎಂದು ನಾನು ಹೇಳುವುದಿಲ್ಲ. ಆದರೆ ಸ್ವಲ್ಪ ಮಟ್ಟಿಗೆ ನಷ್ಟವಾಗುತ್ತದೆ. ಈಗಾಗಲೇ ನೀವು ಲೈಸೆನ್ಸ್ ಫೀಯನ್ನು ಡಬಲ್ ಮಾಡಿಬಿಟ್ಟಿದ್ದೀರಿ. Retail shops license ಗಳು, CL,9,CL2 ಇವರೆಲ್ಲರದ್ದೂ double ಮಾಡಿಬಿಟ್ಟಿದ್ದೀರಿ. ಅವರು ಬೇರೆ ಗೋಳೋ ಎಂದು ಅಳುತ್ತಿದ್ದಾರೆ. ನೀವು double ಮಾಡಿಬಿಟ್ಟಿದ್ದೀರಿ. ಇನ್ನು distillery ಯವರಿಗೆಲ್ಲಾ ಹಬ್ಬವಾಗಿ ಬಿಟ್ಟಿದೆ. ಅವರೆಲ್ಲಾ ಈಗ ಬಾಟಲ್ ಮಾಡು ಅತ್ತ ಕಡೆ ಕಳುಹಿಸು, ಬಾಟಲ್ ಮಾಡು ಅತ್ತ ಕಡೆ ಕಳುಹಿಸು, ಇದೇ ಆಗಿಬಿಟ್ಟಿದೆ. ಇದಕ್ಕೆ ಯಾವ ರೀತಿಯ Excise duty ಯೂ ಇಲ್ಲದಂತಾಗಿಬಿಟ್ಟಿದೆ. ಯಡಿಯೂರಪ್ಪನವರೇ, ನೀವು ಬೇಕಾದರೆ ಮಾರು ವೇಷ ಹಾಕಿಕೊಂಡು ಕಿರಾಣಿ ಅಂಗಡಿಗೆ ಹೋಗಿ ನೋಡಿ. ನಿಮಗೆ ಗೊತ್ತಾಗುತ್ತದೆ. ಈಗ ಸಾರಾಯಿ ಗಡಂಗಗಳಾಗಿಬಿಟ್ಟಿವೆ. ಹಿಂದೆ ನಾವು ಹೆಂಡದ ಗಡಂಗುಗಳೆಂದು ಹೇಳುತ್ತಿದ್ದೆವು. ಹಗಲು ಹೊತ್ತೇ ತೆಗೆದುಕೊಂಡು ಅಲ್ಲಿಯೇ ಕುಡಿಯುತ್ತಾ ನಿಂತಿರುತ್ತಾರೆ. ಪಾಪ, ಬಡವರೆಲ್ಲಾ ಮಾಡುತ್ತಾರೆಂದರೆ, ಒಂದಿಷ್ಟು ಕಡಲೆ ಪುರಿ ಇಲ್ಲದೇ ಹೋದರೆ, ಉಪ್ಪಿನ ಹರಳುಗಳು, ಈರುಳ್ಳಿ....

ಶ್ರೀ ಎಸ್. ರಾಜೇಂದ್ರನ್: ಅಲ್ಲಿ ಅವರು ಕುಡಿಯುವುದಿಲ್ಲವೆಂದರೆ ಪೋಲೀಸ್‌ನವರು ಅವರ ಮೇಲೆ ಕೇಸು ಹಾಕುತ್ತಾರೆ.

ಶ್ರೀ ಸಿದ್ದರಾಮಯ್ಯ: ನನಗೆ ಗೊತ್ತಿರಲಿಲ್ಲ. ಇದು ಹೊಸ ವಿಚಾರ. ಒಂದು ವೇಳೆ ಅಲ್ಲಿ ಕುಡಿಯುವುದಕ್ಕೆ ಕೊಡದೇ ಹೋದರೆ, ಪೋಲೀಸ್‌ನವರು ಆ licencee ಮೇಲೆ ಕೇಸ್ ಹಾಕುತ್ತಾರಂತೆ. ಇದು ಕೆ.ಜಿ.ಎಫ್‌ನಲ್ಲಿಯೇ? ನಾನು ಆ ಕಡೆ ಬಂದಿರಲಿಲ್ಲ. ಸಾರಿ. ಬರುತ್ತೇನೆ. ಒಂದು ಸಾರಿ ನಿಮ್ಮ ಜೊತೆಯಲ್ಲಿ ಬಂದಿದ್ದೆ. ನಾನು ಕೆ.ಜಿ.ಎಫ್.ಗೆ ಬರುತ್ತೇನೆ. ಅವರು ಮಾತನಾಡುವುದಕ್ಕೆ ಕಾಯ್ದುಕೊಂಡು ಕುಳಿತಿದ್ದಾರೆ. ಜೊತೆಗೆ, ಅವರಿಗೆ ನಿಮ್ಮ ಸ್ನೇಹ ಬೇರೆ. ಅವರಿಗೆ ಎಷ್ಟು ಬಾಯಿ ಕಟ್ಟಿಸಿಬಿಡುತ್ತದೆಂದರೆ, ನಿಮ್ಮದು ಬಹಳ ವರ್ಷಗಳ ಸ್ನೇಹ. ಇಲ್ಲವೇ? ಒಂದೊಂದು ಸಾರಿ ಬಾಯಿ ಕಟ್ಟುವುದಿಲ್ಲವೇ?

ಇಲ್ಲಿ ರಮೇಶ್‌ಕುಮಾರ್‌ರವರು ಹೇಳುತ್ತಿದ್ದರು. ಯಡಿಯೂರಪ್ಪನವರನ್ನು ಕಂಡರೆ ನಮಗೆ ಸ್ವಲ್ಪ Sympathy ಇದೆ, ಅವರನ್ನು ಕಂಡರೆ ಬಾಯಿ ಕಟ್ಟುತ್ತದೆ ಎಂದು ಹೇಳುತ್ತಿದ್ದರು. ಇರಬಹುದು. You are correct. ಅದು ಶಾನುಭೋಗಿಕೆ, ಇದು ಪಟೇಲಿಕೆ. ಇರಬಹುದು. ನಾವೂ ಪಟೇಲರೂ ಅಲ್ಲ, ಶಾನುಭೋಗರೂ ಅಲ್ಲ. Village Officers Abolition Act ಬಂದ ಮೇಲೆ ಎಲ್ಲ ಹೊರಟು ಹೋದರು. ಒಬ್ಬರೂ ಇಲ್ಲ. ಇದಕ್ಕೆ ಇಷ್ಟೊಂದು ಅಗಾಧವಾದಂಥ ಹಣ ಈಗಾಗಲೇ ಕೊರತೆಯಲ್ಲಿದೆ. ಮತ್ತೆ, ಇವರು ಈಗಾಗಲೇ, ಮುಂದಿನ ವರ್ಷಕ್ಕೆ 47,950 ಕೋಟಿ ರೂಪಾಯಿ ನಮ್ಮ expenditure ಇದೆ, expected expenditure. Receipts 47924 ಕೋಟಿ ರೂಪಾಯಿ ಎಂದು ಹೇಳಿಬಿಟ್ಟಿದ್ದಾರೆ. Supplementary estimates ನಲ್ಲೇನು ಹೇಳಿಕೊಂಡಿದ್ದಾರೆಂದರೆ, ಎಲ್ಲ additional ಆಗಿ ಏನು ಖರ್ಚು ಮಾಡುತ್ತಿದ್ದೇವೆ, ಹೊಸ ಸೇವೆಗಳಿಗೇನು ಖರ್ಚು ಮಾಡುವುದಕ್ಕೆ ಹೊರಟಿದ್ದೇವೆ, ಇದನ್ನೆಲ್ಲ ಕೂಡ ನಾವು strict enforcement ಮಾಡಿ, ಸೋರಿ ಹೋಗುವುದನ್ನು ತಪ್ಪಿಸಿ, Wasteful expenditure ಅನ್ನು cut down ಮಾಡಿ ಎಲ್ಲ ಇಲ್ಲಿಗೆ ಹಾಕಿಬಿಡುತ್ತೇವೆಂದು ಹೇಳುತ್ತಾರೆ. Is it possible practically? ಹೇಳಿ ನೋಡೋಣ ಮಾತನಾಡುತ್ತೀರಾ? ಮಾತನಾಡಿ. I have no objection.

ಶ್ರೀ ಬಿ.ಎಸ್.ಯಡಿಯೂರಪ್ಪ(ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರು): ಸಾಕಷ್ಟು ಅನುಭವವಿರುವಂಥ ಹಣಕಾಸು ಸಚಿವರು ಸಿದ್ದರಾಮಯ್ಯನವರು ಮಾತನಾಡಿದ್ದಾರೆ. ನಾವೇನೂ ಒಂದು ದೂರದೃಷ್ಟಿ ಇಟ್ಟುಕೊಂಡು ನಮ್ಮೆಲ್ಲರ ಸಹಕಾರದೊಂದಿಗೆ ಸಾರಾಯಿ ರದ್ದು ಮಾಡಿದ್ದೇವೆ. ನೀವು ಹೇಳಿದ ಹಾಗೆ, ಅವರು bottle ಹಿಡಿದುಕೊಂಡು ಕುಡಿಯಲಿಕ್ಕೆ ಕಲಿತಿದ್ದಾರೆ, sales double ಆಗಿದೆ ಎಂದು ಹೇಳಿದ್ದೀರಿ. ನಾನು ಇಲ್ಲವೆಂದು ಹೇಳಲಿಲ್ಲ. ಆದರೆ, ನನ್ನ ಪಾಯಿಂಟು ಏನೆಂದರೆ, ಕೈಗೆ ಎಟುಕುವ ಹತ್ತಿರ, ದೇವಸ್ಥಾನದ ಹತ್ತಿರ ಹರಿಜನ ಕಾಲೋನಿಯಲ್ಲಿ, ಬೋವಿ ಕಾಲೋನಿಯಲ್ಲಿ, ಬಡವರ ಕಾಲೋನಿಗಳಲ್ಲಿ ಸಿಕ್ಕಿ ತೂರಾಡಿಕೊಂಡು ಬಿದ್ದಿದ್ದರು. ಬೇಕಾದರೆ, ನಾನು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ. ಸಾವಿರಾರು ಗ್ರಾಮಗಳಲ್ಲಿ ಆ ಸ್ಥಿತಿ ಇಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. 75–80% ನೆಮ್ಮದಿಯ ವಾತಾವರಣವಿದೆ. ಇವರನ್ನು ತಡೆಯುವುದಕ್ಕೆ ಏನು ಮಾಡಬಹುದೆಂದು ಇನ್ನು ಮುಂದೆ ಚರ್ಚೆ ಮಾಡೋಣ. ಸಲಹೆ ಕೊಡಿ, ಏನು ಸಾಧ್ಯವಿದೆ ಪ್ರಯತ್ನ ಮಾಡೋಣ.

ಶ್ರೀ ಸಿದ್ದರಾಮಯ್ಯ: I am not questioning your intention ಅವರಿಗೆ ಒಳ್ಳೆಯದಾಗ ಬೇಕು ಎನ್ನುವ intention ಇದೆಯಲ್ಲ, I am not questioning it. What is the impact? ಪರಿಣಾಮಗಳೇನು? ದುಷ್ಪರಿಣಾಮ ನಿಲ್ಲಿಸಬೇಕೆಂಬುದೇ ತಾನೇ ನಿಮ್ಮ ಉದ್ದೇಶ. ಆ ದುಷ್ಪರಿಣಾಮಗಳು ಎಷ್ಟರ ಮಟ್ಟಿಗೆ, ಎಷ್ಟು Percentage ನಿಂತು ಹೋಗಿದೆ ಎಂಬುದು ಒಂದನೆಯದು. ಎರಡನೆಯದು, ಸರ್ಕಾರಕ್ಕೆ ಆದಾಯ ಹೋಗಲಿ, ಬೇರೆ ಇನ್ನಾವುದೋ ರೂಪದಲ್ಲಿ ಮಾಡಿಕೊಂಡು ಕೆಲಸಗಳನ್ನು ಸ್ವಲ್ಪ ಕಡಿಮೆ ಮಾಡೋಣ. ಜನರ ಆರೋಗ್ಯ ಸರಿ ಹೋಗುವುದಾದರೆ, ಹೆಣ್ಣು ಮಕ್ಕಳ ಕಷ್ಟ ತಪ್ಪಿಸಿ, ಕಣ್ಣೀರು ಒರೆಸುವುದಾದರೆ, ಬೇರೆ ಕಡೆ ಮಾಡೋಣ. ಅದಕ್ಕೆ ನನ್ನ ಬೆಂಬಲ ಕೂಡ ಇದೆ. ಒಂದು ಲಕ್ಷ ಜನ ಬೀದಿ ಪಾಲಾಗುತ್ತಾರೆ. ಇದರ ಮೇಲೆ ಅವಲಂಬನೆಯಾಗಿದ್ದವರು nearly one lakh people ಬೀದಿ ಪಾಲಾಗುತ್ತಿದ್ದಾರೆ. ಅವರಿಗೆ ಪರ್ಯಾಯವಾಗಿ ಉದ್ಯೋಗ ಒದಗಿಸಿ ಕೊಡುವುದಕ್ಕಾಗುತ್ತದೆಯೇ? ನೀವೇನು ಹೇಳಿದ್ದೀರಿ, ಅದ್ಯಾವುದೋ 65 ವರ್ಷ ಆದವರಿಗೆ 400 ರೂಪಾಯಿ ಕೊಡುತ್ತೇವೆ....

ಶ್ರೀ ಜೆ.ಸಿ.ಮಾಧುಸ್ವಾಮಿ: ತೆಂಗಿಗೆ ಇವತ್ತು ರೇಟ್ ಸಿಗುವುದಿಲ್ಲ. ನುಸಿ ಪೀಡೆ ಹೋಗುತ್ತಿಲ್ಲ. ಕೊಬ್ಬರಿಗೆ ಧಾರಣೆ ಇಲ್ಲ. ಎಷ್ಟು ಎಂದು subsidize ಮಾಡುತ್ತೀರಿ? ನೀರಾ ಕುಡಿಯುವುದಿಲ್ಲ ಬಿಡಿ. ಐ.ಪಿ. ಸೇಂದಿ ಏನಾದರೂ ನೀವು ತೆಂಗಿನಲ್ಲಿ ತೆಗೆದು ಮಾಡುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಟ್ಟರೆ ನಾವೆಲ್ಲ ತೆಂಗು ಬೆಳೆಗಾರರು ಬದುಕಿಕೊಳ್ಳುತ್ತೇವೆ. South Canara, ಗುಲ್ಬರ್ಗಾ ಇದೆ, ಉಡುಪಿ ಇದೆ, ಅವರ ಜಿಲ್ಲೆಯಲ್ಲಿದೆ.

ಶ್ರೀ ಜಯಪ್ರಕಾಶ್ ಹೆಗ್ಡೆ; ಉಡುಪಿ, ಮಂಗಳೂರಿನಲ್ಲೆಲ್ಲ ಸೇಂದಿ ಇದೆ. ಸೇಂದಿ ಸೊಸೈಟಿ ಮಾಡಿಬಿಟ್ಟು ಮಾರಾಟ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಉಡುಪಿ, ಮಂಗಳೂರಿನಲ್ಲಿದೆ. ಅದೆಲ್ಲ ಇದೆ. ಮಾಧುಸ್ವಾಮಿಯವರೆ, ಸೇಂದಿ ಗುಲ್ಬರ್ಗಾ, ರಾಯೂಚೂರಿನಲ್ಲಿತ್ತು. ಅವರೇನು ಮಾಡುತ್ತಿದ್ದರೆಂದರೆ, ರಾಯೂಚೂರು, ಗುಲ್ಬರ್ಗಾದಲ್ಲಿ ತೆಂಗು ಬೆಳೆಯುವುದಿಲ್ಲ. ಈಚಲು ಮರದಿಂದ ಮಾಡುತ್ತೇವೆ. ನಾನೊಂದು ಸಾರಿ ಹೋಗಿ ನೋಡಿಕೊಂಡು ಬಂದೆ. ಅಲ್ಲಿ ಈಚಲು ಮರಗಳೇ ಇಲ್ಲ. ಈಚಲು ಮರ ಇಲ್ಲದೇ ನೀವು ಹೆಂಡ ಹೇಗೆ ಮಾಡುತ್ತೀರಿ ಎಂದರೆ, ಅವರು ಮಾಡುತ್ತಿದ್ದುದು ಏನೆಂದರೆ, Florohydric ಅನ್ನು ಹಾಕಿ ಜನರನ್ನು ಸಾಯಿಸುತ್ತಿದ್ದರು. ಅದಕ್ಕೆ ನಾನು ಅದನ್ನು ಬಂದ್ ಮಾಡಿಬಿಟ್ಟೆ. ಮಾಡುವುದಕ್ಕಾಗುವುದಿಲ್ಲವೆಂದು ನಿಲ್ಲಿಸಿ ಬಿಟ್ಟೆ. ನನಗೆ ಬಹಳ

ಒತ್ತಡ ಬಂತು. ದುಡ್ಡು ಕೊಡುತ್ತೇವೆಂದು ಎಲ್ಲ ಬಂದಿದ್ದರು. 4-5 ಕೋಟಿ ರೂಪಾಯಿ ತೆಗೆದುಕೊಳ್ಳಿ ಎಂದು ಬಂದಿದ್ದರು. ನಾನು ಅದಕ್ಕೆ ಒಪ್ಪಿಕೊಳ್ಳುವುದಕ್ಕೆ ಹೋಗಲಿಲ್ಲ.

ಶ್ರೀ ಎನ್. ರಾಜೆಂದ್ರನ್: ನಮ್ಮ ಊರಿನಲ್ಲಿ ಅದು ಓಪನ್ ಸೇಲ್ ಸಾರ್.

ಶ್ರೀ ಸಿದ್ದರಾಮಯ್ಯ: Florohydric ಹಾಕಿಬಿಟ್ಟು ಕುಡಿಸಿ ಸಾಯಿಸುತ್ತಾರೆ ಎಂದು ಹೇಳುತ್ತಾರೆ. ಅದರಿಂದ ಹೆಂಡ ಎನ್ನುವುದರ ಇದರ ಬಗ್ಗೆ ಮತ್ತೆ ಗಂಭೀರವಾಗಿ ವಿಚಾರ ಮಾಡಬೇಕು. ಮಾಧುಸ್ವಾಮಿಯವರು ಸಲಹೆ ಕೊಟ್ಟಿದ್ದಾರೆ. ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಹೆಂಡ ಬಿಟ್ಟು, ಇನ್ನ್ಯಾವುದೋ ಕುಡಿಸುವುದಕ್ಕೆ ಶುರು ಮಾಡಿದರೆ, ಭಾರೀ ಕಷ್ಟವಾಗುತ್ತದೆ. I leave it to you. But, according to me, it is not feasible. It is not advisable according to me. ಅದೇನೇ ಇರಲಿ, ಇಷ್ಟೆಲ್ಲ ಆದರೂ ಕೂಡ resources mobilize ಮಾಡಿಕೊಳ್ಳಲಿಕ್ಕೆ ನೀವು ಒಂದನ್ನು ಏನು ಹೇಳುತ್ತೀರೆಂದರೆ, ಜನ ಭೂಮಿ ಕಬಳಿಸಿಕೊಂಡು ಜಮಿನನ್ನು ಹರಾಜು ಮಾಡಿ ನಾವು ತುಂಬಿಕೊಳ್ಳುತ್ತೇವೆಂದು ಹೇಳುತ್ತೀರಿ. ನಿಮಗೆ 5-6 ಸಾವಿರ ಕೋಟಿ ರೂಪಾಯಿ.... ಇವರು ಈಗಾಗಲೇ ಹೇಳಿರತಕ್ಕಂಥಾದ್ದು, ಮಾಡಿರತಕ್ಕಂಥಾದ್ದಕ್ಕೆ ಎಲ್ಲಿಂದ ದುಡ್ಡು ತರುತ್ತೀರಿ? Either, ಈಗಾಗಲೇ plan size ಕಡಿಮೆಯಾಗಿದೆ. plan size ಕಳೆದ ವರ್ಷಕ್ಕೇ ಬಂದಿದೆ. ನಾನು ಅವತ್ತು ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. 17782 ಕೋಟಿ ರೂಪಾಯಿ plan size ನಲ್ಲಿ ನಂಜುಂಡಪ್ಪನವರ ವರದಿಗೆ 1571 ಕೋಟಿ ರೂಪಾಯಿ ತೆಗೆದು ಹಾಕಿದರೆ, plan size remains for the general plan schemes 16221 ಕೋಟಿ ರೂಪಾಯಿ. ಅಂದಮೇಲೆ, there will be no growth at all Absolutely, ಕಳೆದ ವರ್ಷದಲ್ಲಿದ್ದದ್ದು inflation ಸೇರಿಸಿದರೆ, ಕಳೆದ ವರ್ಷಕ್ಕಿಂತ plan size ಕಡಿಮೆಯಾಗುತ್ತದೆ. How can we expect growth? How can we expect growth in GDP? How can we expect 4% growth in agriculture sector? ಎಲ್ಲಿಂದ ಬರುತ್ತದೆ ಹೇಳಿ ನೋಡೋಣ. ಇವರು Agriculture policy ಇಲ್ಲಿ place ಮಾಡಿದ್ದಾರೆ. ಅದಕ್ಕೇನೂ ದುಡ್ಡು ಕೊಟ್ಟಿಲ್ಲ. ಹೊಸ Agriculture policy ಮಾಡಿ, agriculture ಗೆ ನಾವು 10% ಹಣ ಕೊಡುತ್ತೇವೆ ಎಂದು ಹೇಳಿದಿರಿ, ಅದಕ್ಕೇನೂ additional ಆಗಿ ದುಡ್ಡು ಕೊಟ್ಟಿಲ್ಲ, agriculture ಗೆ ಕಳೆದ ವರ್ಷಕ್ಕಿಂತ ಕಡಿಮೆ ಇದೆ.

ನೀರಾವರಿಗೆ ಕಡಿಮೆ ಇದೆ. ಪವರ್‌ಗೆ ಕಡಿಮೆ ಇದೆ. Social Sector ಗೆ ಕಡಿಮೆ ಇದೆ. ಇವೆಲ್ಲ ಇದ್ದೂ ನೀವು ಕೂಡ ತೆಗೆದುಕೊಂಡು ಹೋಗಿ, ಯಡಿಯೂರಪ್ಪನವರೇ ಇದು ನಿಮ್ಮ ಮನಸ್ಸಿಗೆ ಒಪ್ಪುತ್ತದೆಯೇ ಹೇಳಿ ನೋಡೋಣ? ಎಲ್ಲ ತೆಗೆದುಕೊಂಡು ಹೋಗಿ ಹರದನಹಳ್ಳಿ ಗ್ರಾಮ ಮಾಡುತ್ತೇವೆಂದು 2 ಕೋಟಿ 85 ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಬೇರೆ ಗ್ರಾಮಗಳಿಲ್ಲವೇ? Why 2002, ಅದೊಂದಕ್ಕೆ ಏಕೆ ಮಾಡುವುದಕ್ಕೆ ಹೋದಿರಿ? ಎಲ್ಲ ರಾಮನಗರಕ್ಕೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದೀರಿ. ನಾವು ಹುಟ್ಟಿರುವ ಊರುಗಳು ಸರಿ ಇಲ್ಲವೋ? ಕೆ.ಆರ್.ಪೇಟೆಯಲ್ಲಿ ನೀವು ಹುಟ್ಟಿರುವ ಊರುಗಳು ಸರಿ ಇಲ್ಲವೋ? ನಿಮ್ಮ ಊರಿಗೂ ಸಮುದಾಯ ಭವನ ಮಾಡುವುದಕ್ಕೆ 1 ಕೋಟ್ಟಿ ರೂಪಾಯಿ ಕೊಟ್ಟಿದ್ದಾರೆ. ನಮ್ಮ ಊರು ಏನು ಪಾಪ ಮಾಡಿತ್ತು? ಎಲ್ಲಿ ಹಣ ಕೊಟ್ಟಿದ್ದೀರಿ? ನಾವು ತರಹ ಕೊಚ್ಚಿಕೊಳ್ಳುವುದಕ್ಕೆ ಹೋಗಿಲ್ಲ. ನಾನು 6 ವರ್ಷ Finance Minister ಆಗಿದ್ದೆ. (ಗೊಂದಲ) ನೀವು ಕಮಿಟಿಯನ್ನೇ ಮಾಡಿಲ್ಲ ಕುಳಿತುಕೊಳ್ಳಿ ಸುಮ್ಮನೆ ಏಕೆ ಪದೇ ಪದೇ ಎದ್ದೇಳುತ್ತೀರಿ? ನೀವು ದೇವಸ್ಥಾನದಲ್ಲಿ ಗಂಟೆ ಅಲ್ಲಾಡಿಸುವುದಷ್ಟೇ. ಯಡಿಯೂರಪ್ಪನವರೇ, 3 ವರ್ಷಗಳಿಂದ ಆ ಕಮಿಟಿ ಮಾಡಿಲ್ಲ. ನೀವಾದರೂ ಸ್ವಲ್ಪ ಹೇಳಿ. ಆ ದುಡ್ಡು ಬಂದಿದೆಯೇ? ಇವರೇನು ಮಾಡಿದ್ದಾರೆಂದರೆ, ಬಿಜೆಪಿ ಇರುವ ಕಡೆಯಲ್ಲ ಸಮಿತಿ ಮಾಡಿದ್ದಾರೆ. ಕಾಂಗ್ರೆಸ್‌ನವರು ಇರುವ ಕಡೆ ಸಮಿತಿಗಳನ್ನು ಮಾಡಿಲ್ಲ. ಅವರೆಲ್ಲ ಕೇಳುತ್ತಾರೆ. ನಮ್ಮಲ್ಲಿ ಬಿಜೆಪಿ ಎಂಎಲ್ಎ ಶಂಕರಲಿಂಗೇಗೌಡರಿರುವ ಕಡೆ ಕಮಿಟಿ ಮಾಡಿದ್ದಾರೆ. ಅವರ ಪಕ್ಷದಲ್ಲಿ ಅವರು ದುಡ್ಡು ಹಂಚಿ ಬಿಟ್ಟರು ನೀವ್ಯಾಕೆ ಹಂಚಿಲ್ಲವೆಂದು ಕೇಳುತ್ತಾರೆ? ನಾನು ಒಂದು ಸಾರಿ ದಬಾಯಿಸಿ ಡಿ.ಸಿ.ಗೆ ಕಳುಹಿಸಿಕೊಟ್ಟೆ. ನಾನು ಆರಾಧನಾ ಸಮಿತಿಯ ಅಧ್ಯಕ್ಷನದ್ದೇನೆ ನೀವು ಅಪ್ರೂವಲ್ ಮಾಡಿ ಅವರೇನು ಕಮಿಟಿ ಮಾಡಲ್ಲವಂತೆ ಎಂದು ಕಳುಹಿಸಿಕೊಟ್ಟರೆ, ಅದಕ್ಕೆ ಆ ಡಿ.ಸಿ ಇಲ್ಲಾ ಸಾರ್ ಆ ಕಮಿಟಿ ಆಗುವವರೆಗೆ ಆಗುವುದಿಲ್ಲವೆಂದು ಗೋಗರೆಯುತ್ತಾನೆ. ಏನ್ರೀ ನೀವು ಮಾಡಿಕೊಡುತ್ತೇವೆಂದು ಹೇಳ್ರಿ, ಹಾಗಾದರೆ ನಮಗೆ ಒಪ್ಪಿಗೆ ಇಲ್ಲ ವಾಪಸ್ಸು ತೆಗೆದುಕೊಂಡುಬಿಡಿ. Why should we give approval to it? ನಮಗೇಕೆ ಅಪ್ರೂವಲ್ ಕೊಡಬೇಕು? ನಮ್ಮ ಕಮಿಟಿಗಳನ್ನು ಮಾಡದೇ ಹೋದರೆ ಹೇಗೆ? ನಾವು ಮಾಡಬಾರದೇ? ಮೂರು ವರ್ಷಗಳಿಂದ ಹಾಗೆಯೇ ಇದೆ. ಜನಗಳೆಲ್ಲ ನಮ್ಮನ್ನು ಕೇಳುತ್ತಾರೆ ನಾವು ದುಡ್ಡು ಕೊಡಬೇಕೋ ಇಲ್ಲವೋ? ಯಾವಾಗ ಮಾಡುವುದು? 18 ತಿಂಗಳಾಯಿತು ಇದುವರೆಗೆ ಮಾಡಿಲ್ಲವೆಂದರೆ ಯಾವಾಗ ಮಾಡುತ್ತೀರಿ? ನಾನು ಅದಕ್ಕೆ

ಹೇಳುವುದು ನೀವು ಮಧ್ಯೆ ಮಧ್ಯೆ ಏಳಬೇಡಿ, ಅದನ್ನು ಮಾಡಿಬಿಟ್ಟು ನೀವು ಏದ್ದೇಳಿ. ಇವರಿಗೆ ಎಲ್ಲಿಂದ resources ಬರುತ್ತದೆ ಹೇಳಲಿ. ಎಲ್ಲಿ ಬರುತ್ತದೆ ನೀವು ಇವತ್ತಿನವರೆಗೆ ಹರಾಜಿನಿಂದ ಮುನ್ನೂರು ಕೋಟಿ ರೂಪಾಯಿ ಬಂದಿದೆ ಎಂದು ಹೇಳುತೀರಿ. ಎಂಟು ಸಾವಿರ ಎಕರೆ ನಾವೀನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ, ಇದಕ್ಕೆಲ್ಲಾ ಹಂಚಿ ಬಿಟ್ಟಿದ್ದೇವೆ, ಮೂರು-ನಾಲ್ಕು ಸಾವಿರ ಎಕರೆ ಉಳಿದಿದೆ ಎಂದು ಹೇಳುತ್ತೀರಿ. ನಿಮಗೆ ಎಲ್ಲಿಂದ ದುಡ್ಡು ಬರುತ್ತದೆ? ಯಡಿಯೂರಪ್ಪನವರೇ ನೀವು ಕಷ್ಟಕ್ಕೆ ಸಿಲುಕಿ ಹಾಕಿಕೊಳ್ಳುತ್ತೀರಿ. ನೀವು ಹಣಕಾಸಿನ ಮಂತ್ರಿಗಳಾಗಿ ಕರ್ನಾಟಕದ ಇತಿಹಾಸದಲ್ಲಿ ಕೆಟ್ಟ ಹೆಸರು ತೆಗೆದುಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ಈಗೇನು ನಾವು ಸರಿ ಮಾಡಿದ್ದೇವೆ, revenue deficit ಎಲ್ಲಾ ತೆಗೆದು ಹಾಕಿ fiscal deficit control ತಂದು ಸಾಲದ ಹೊರೆಯನ್ನು ಕಡಿಮೆ ಮಾಡಿ, ಕೇಂದ್ರ ನಮಗೆ ಇವತ್ತು incentive ಕೊಡಬೇಕಾದರೆ ಇವನ್ನೆಲ್ಲಾ ಮಾಡಿದ್ದಕ್ಕೆ. 948 ಕೋಟಿ ರೂಪಾಯಿ incentive ನಮ್ಮ ರಾಜ್ಯಕ್ಕೆ ಬಂದಿದೆ. ನೀವು ಬೆಳೆ ಸಾಲ ಮನ್ನಾ ಮಾಡುವುದಕ್ಕೆ 750 ಕೋಟಿ ಕೊಡಿ ಎಂದು ಕೇಳಿದ್ದೀರಿ. ಇನ್ನು 800 ಕೋಟಿ ಉಳಿಯುತ್ತದೆ. ಎಲ್ಲಿಂದ ಕೊಡುತ್ತಾರೆ? ಆ 800 ಕೋಟಿಯನ್ನು, 200 ಕೋಟಿ ತರಹ ಮೂರು ವರ್ಷದಲ್ಲಿ ಕೊಡುತ್ತಾರಂತೆ. ಸೊಸೈಟಿಗಳು ಮುಳುಗಿ ಹೋದವೋ? ಅಲ್ಲಿ ಸಾಲ ಸಿಗುವುದಿಲ್ಲವೋ? ನಬಾರ್ಡ್ norms ಪ್ರಕಾರ ನಿಮಗೆ refinance ಕೊಡುವುದಿಲ್ಲವೆ? ಮತ್ತೆ ರೈತರಿಗೆ ಹೊಸ ಸಾಲ ಸಿಕ್ಕುವುದಿಲ್ಲ. ರೈತರಿಗೆ ಸೊಸೈಟಿಗಳ ಮೂಲಕ ಸಾಲ ಸಿಕ್ಕದೇ ಹೋದರೆ, ರೈತರು ಸಾಲ ತೆಗೆದುಕೊಳ್ಳುವುದಕ್ಕೆ ಎಲ್ಲಿಗೆ ಹೋಗಬೇಕು? ಮತ್ತೆ ಖಾಸಗಿ ಲೇವಾದೇವಿಯವರ ಹತ್ತಿರ ಹೋಗಬೇಕು. ತಿಂಗಳಿಗೆ 2 ರಿಂದ 5 ರೂಪಾಯಿವರೆಗೆ ಬಡ್ಡಿ ಕೊಡಬೇಕು. ಒಂದು ಕಡೆ ರೈತರನ್ನು ಉದ್ದಾರ ಮಾಡುತ್ತೇವೆಂದು ಹೇಳಿ, ಇನ್ನೊಂದು ಕಡೆ ರೈತರನ್ನು ನೀವು ಮತ್ತೆ ಖಾಸಗಿ ಲೇವಾದೇವಿಯವರ ಹತ್ತಿರ ತಳ್ಳುತ್ತಿದ್ದೀರಿ. ನಿಮಗೆ ರೈತರ ಬಗ್ಗೆ ನಿಜವಾದ ಕಾಳಜಿ ಇದ್ದಿದ್ದರೆ ಈ ತರಹದ ಕಾರ್ಯಕ್ರಮವನ್ನು ನೀವು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ನಿಮ್ಮ ಕೈಯಲ್ಲಿ ಎಷ್ಟು ಶಕ್ತಿ ಇರುತ್ತದೆ, ಇವರು ಕೊನೆಗೆ ಏನು ಮಾಡುತ್ತಾರೆಂದರೆ, ಪುನಃ ಸಾಲದ ಮೊರೆಗೆ ಹೋಗಬೇಕಾಗುತ್ತದೆ. ಕೃಷ್ಣ ಜಲಭಾಗ್ಯ ನಿಗಮ, ಕಾವೇರಿ ಜಲ ಭಾಗ್ಯ ನಿಗಮ, ಕರ್ನಾಟಕ ನೀರಾವರಿ ನಿಗಮ, ಈ ನಿಗಮಗಳಲ್ಲಿ ಸಾಲ ತೆಗೆದುಕೊಳ್ಳುವುದು ಕಡಿಮೆಯಾಗಿತ್ತು. 2008ನೇ ಇಸ್ವಿಯ ಹೊತ್ತಿಗೆ ಸಾಲ ತೆಗೆದುಕೊಳ್ಳುವುದನ್ನು ಕಡಿಮೆ ಮಾಡಿ ಬಜೆಟರಿ ಸಪೋರ್ಟ್‌ಗಳಿಲ್ಲದೇ

ಇವುಗಳನ್ನು ನಡೆಸಬೇಕೆನ್ನುವುದು ಕೂಡ ಇತ್ತು. ಇದನ್ನು Fisical Responsibility Act ನಲ್ಲಿ ಹೇಳಿರುವುದು. ಕಾನೂನನಲ್ಲಿ ನಾವು ಒಪ್ಪಿರುವುದು. ಒಂದು ವೇಳೆ ನೀವು resources mobilization ಮಾಡದೇ ಹೋದರೆ, ಈಗಾಗಲೇ ಹೇಳಿರುವ ಕಾರ್ಯಕ್ರಮವನ್ನು ನಿಲ್ಲಿಸಬೇಕಾಗುತ್ತದೆ. plan amount ಅನ್ನು cut ಮಾಡಬೇಕಾಗುತ್ತದೆ. ಬೇರೆ ಕಾರ್ಯಕ್ರಮಗಳಿಗೆ ದುಡ್ಡು ಕೊಡುವುದಕ್ಕೆ ಇರುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳು ಏನು ಹಾಸ್ಟೆಲ್‌ನಲ್ಲಿ ಓದುತ್ತಿರುತ್ತಾರೆ ಒಂದು ತಿಂಗಳಿಗೆ ಆ ಹುಡುಗರಿಗೆ ಊಟದ ಖರ್ಚು 150 ರೂಪಾಯಿ ಹೆಚ್ಚು ಮಾಡಿ ಎಂದರೆ, ಅದರ ಬಗ್ಗೆ ನಿಮ್ಮ ಕೈಯಲ್ಲಿ ಇಲ್ಲಿ ಹೇಳುವುದಕ್ಕೆ ಆಗಿಲ್ಲ. ಬಡವರ ಮಕ್ಕಳಿಗೆ ಕೊಡಲಿಕ್ಕೆ ಆಗಿಲ್ಲ. ಎಸ್‌ಸಿ ಎಸ್‌ಟಿ ಹಾಸ್ಟೆಲ್‌ಗಳಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇನ್ನು ಹಾಸ್ಟೆಲ್‌ಗಳು ಇದ್ದರೆ ಇನ್ನು ಹುಡುಗರು ಸೇರುತ್ತಾರೆ. ಮೈಸೂರು ನಗರದಲ್ಲಿಯೇ ಇನ್ನು ಹತ್ತು ಹಾಸ್ಟೆಲ್ ಕೊಟ್ಟರೂ ಬೇಕಾಗುತ್ತದೆ, ಎಲ್ಲಾ ಅಲ್ಲಿಗೆ ಓದಲಿಕ್ಕೆ ಬರುತ್ತಾರೆ, ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್‌ಗಳಿಗೆ ಬಂದು ನಮಗೆ ಒಂದೇ ಒಂದು ಸೀಟು ಕೊಡಿಸಿ ಸಾರ್ ಎಂದು ನಮಗೆ ಹಿಂಸೆ ಮಾಡಿ ಗೋಗರೆಯುತ್ತಾರೆ. ನಾವು ಬೇರೆ ಮೆರಿಟ್ ಮೇಲೆ ಕೊಡುತ್ತೇವೆ. ಜೊತೆಗೆ ಒಂದೊಂದು ರೂಮಿನಲ್ಲಿ 20 ರಿಂದ 30 ಮಕ್ಕಳನ್ನು ಮಲಗಿಸುತ್ತಾರೆ. ಹೊರಗಡೆಯಿಂದ ಬಂದು ಊಟ ಮಾಡಿಕೊಂಡು ಹೋಗಿ ಎಂದು ನಾವು ಹೇಳುತ್ತೇವೆ. ಆ ಎಸ್‌ಸಿ ಎಸ್‌ಟಿ ಮಕ್ಕಳಿಗೆ ಒಬ್ಬರಿಗೆ 150 ರೂಪಾಯಿ ಹೆಚ್ಚು ಮಾಡಿ ಎಂದರೆ, ಅದಕ್ಕೆ ಇವರಿಗೆ ಸಂಪ್ಲಿಮೆಂಟರಿ ಬಜೆಟ್‌ನಲ್ಲಿ ಒಪ್ಪಿಕೊಂಡು ತರುವುದಕ್ಕೆ ಇಷ್ಟವಿಲ್ಲ. ಷೆಡ್ಯೂಲ್ಡ್ ಕಾಸ್ಟ್ ಜನಗಳ ಮೇಲೆ ಇವರಿಗೆ ಪ್ರೀತಿನೇ ಇಲ್ಲ. ಆದರೆ ಹೇಳುವುದು ಮಾತ್ರ ಬದ್ಧತೆ. We are committed to causes of scheduled caste. ನಾವು ಎಷ್ಟು ದುಡ್ಡು ಕೊಟ್ಟಿದ್ದೇವೆ ನೋಡಿ ಎಂದು ಹೇಳುತ್ತಾರೆ. ಇವರು ಕೊಟ್ಟಿರುವ ದುಡ್ಡೆಲ್ಲಾ ಬರೀ ಕಾಗದದ ಮೇಲೆ. ಏಕೆ ಹೇಳುತ್ತೇನೆಂದರೆ ನೀವು ಸ್ವಲ್ಪ ಕೇಳಿ. ನೀವು ಹೋಗಿ Social Welfare Department ಅಧಿಕಾರಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡಿಬಿಟ್ಟು ನನಗೆ ನಂತರ ನೀವು ಹೇಳಿ. ಅವರು ನಗುತ್ತಾ "ಇಲ್ಲ ಇಲ್ಲ" ಎಂದು ತಲೆ ಅಲ್ಲಾಡಿಸುತ್ತಿದ್ದಾರೆ. ರವೀಂದ್ರನಾಥ್‌ರವರೆ, ಕುಡಿಯುವ ನೀರಿಗಾಗಿ ಬೋರ್‌ವೆಲ್‌ಗೆ ಎಷ್ಟು ಸಾಲ ಕೊಟ್ಟಿದ್ದೀರಿ ನೀವೇ ಹೇಳಿ. ಇಲ್ಲ ಕೊಟ್ಟಿಲ್ಲ ಸುಮ್ಮನೆ ಏಕೆ ಹೇಳುತ್ತೀರಿ. ನಾನು Social Welfare Minister ಅನ್ನು ಕೇಳಿದೆ, ನಿಮಗಷ್ಟು pooled amount ಬಂದಿದೆ ಎಂದು ಕೇಳಿದೆ. 153 ಕೋಟಿ ಅವರಿಗೆ ಹೋಗಿರುವುದು. ಏಕೆಂದರೆ, planning commission ನವರು

ಹೇಳಿದ್ದಾರೆ, ಆದ್ದರಿಂದ ಇವರು ಈ ಇಲಾಖೆಯಲ್ಲಿ ಇಷ್ಟು ಪೂಲ್ ಮಾಡಿದ್ದೇವೆಂದು ಹೇಳಿ 2000 ಕೋಟಿಗಿಂತ ಹೆಚ್ಚಿಗೆ ಇಟ್ಟುಬಿಟ್ಟಿದ್ದೇವೆ, ಹಿಂದಿನ ಸರ್ಕಾರ ಇಟ್ಟಿರಲಿಲ್ಲ, ಎಂದು ಹೇಳಿದ್ದೀರಿ. ಹಾಗಾದರೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಆ ಎಸ್‌ಸಿ ಎಸ್‌ಟಿ ಯವರಿಗೆ, ಹಿಂದುಳಿದವರಿಗೆ, ಮೈನಾರಿಟಿಗೆ, ಅದರ ಅಂದಾಜು ಒಂದು ಲಕ್ಷಕ್ಕಿಂತ ಜಾಸ್ತಿಯಾದರೆ ಅದನ್ನು ಮಾಡಬೇಡಿ ಎಂದು ಏಕೆ ಹೇಳಿದಿರಿ? ಅದಕ್ಕೆ ದುಡ್ಡು ಕೊಡಿ. ಅವರು ಬಡವರಲ್ಲವೇ? ದಲಿತವರ್ಗದಿಂದ ಬಂದವರಲ್ಲವೇ? ಅತ್ಯಂತ ಕೆಳವರ್ಗದ ಜನ ಅಲ್ಲವೇ? ಅವರಿಗೆ ಪ್ರಿಯಾರಿಟಿ ಮೇಲೆ ಸಾಮಾಜಿಕ ನ್ಯಾಯ ಕೊಡಬೇಕಾಗಿರುವುದಲ್ಲವೇ? ಅವರಿಗೆ ಇಲ್ಲ. ಹರದನಹಳ್ಳಿಗೆ 2 ಕೋಟಿ 85 ಲಕ್ಷ ಕೊಡುತ್ತಾರಂತೆ. ಅದನ್ನು ಏನು ಮಾಡುವುದಕ್ಕೋ ಗೊತ್ತಿಲ್ಲ, ಅದನ್ನು ಏನು ಮಾಡಿದಿರಿ? ಹರದನಹಳ್ಳಿ ಮಾದರಿ ಗ್ರಾಮ. 27 ಸಾವಿರ ಹಳ್ಳಿಗಳಲ್ಲಿ ಹರದನಹಳ್ಳಿ ಒಂದೇನಾ ನಮಗೆ ಸಿಕ್ಕುದ್ದು? ಬೇರೆ ಯಾವುದೇ ಹಳ್ಳಿಗಳು ನಮಗೆ ಸಿಕ್ಕಲಿಲ್ಲವೇ? ವಿಶ್ವೇಶ್ವರಯ್ಯನವರು ಹುಟ್ಟಿದ ಊರಾದ ಮುದ್ದೇನಹಳ್ಳಿಯನ್ನು ಮಾದರಿ ಗ್ರಾಮವನ್ನಾಗಿ ಮಾಡಬಹುದಾಗಿತ್ತಲ್ಲವೇ? ಯಡಿಯೂರಪ್ಪನವರು ಮಾದರಿಯಾಗಬೇಕು. ಶಿಕಾರಿಪುರಕ್ಕೆ 17 ಕೋಟಿ ತೆಗೆದುಕೊಂಡು ಹೋಗಿ, ಮೋರಿ ತೊಡಿಸುವ ಕೆಲಸಕ್ಕೆ ಹಾಕಿದ್ದೀರಲ್ಲ ಇದು ಸರಿ ಯಡಿಯೂರಪ್ಪನವರೆ? 17 ಕೋಟಿ ತೆಗೆದುಕೊಂಡು ಹೋಗಿ, ಅದನ್ನು ಯಾರಿಗೆ PWD minister ಕೊಟ್ಟಿದ್ದೀರಿ. ಇದು ಯಾವ ತರಹ? 17 ಕೋಟಿ ಶಿಕಾರಿಪುರಕ್ಕೆ ಖರ್ಚು ಮಾಡಿದರೂ ನಮಗೆ ಸಮಾಧಾನವಾಗಲಿಲ್ಲ. ದೇವಸ್ಥಾನಕ್ಕೆಂದು ಎರಡು ಕೋಟಿ ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿಕೊಂಡಿರಿ. ಬೇರೆ ಯಾವುದೋ ತೆಗೆದುಕೊಂಡು ಅಲ್ಲಿಗೆ ಹಾಕಿಕೊಂಡಿರಿ. ರಾಮನಗರ ಅಲ್ಲಿಗೆ, ಕಾಲೇಜುಗಳು ಅಲ್ಲಿಗೆ, ಎಲ್ಲಿ ನೋಡಿದರೂ ಅಲ್ಲಿಗೆ. ಎಲ್ಲವೂ ಶಿಕಾರಿಪುರಕ್ಕೆ. ನೀವು ಇಲ್ಲಿ ಹೇಳಬೇಕು, ಶಿಕಾರಿಪುರಕ್ಕೆ ಇಲ್ಲಿಯವರೆಗೆ ನೀವು ಹಣಕಾಸಿನ ಮಂತ್ರಿಯಾದ ಮೇಲೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂದು ಹೇಳಬೇಕು. ನೀವು ಈ ರೀತಿ ಮಾಡುವುದಕ್ಕೆ ನಾವು ಒಪ್ಪಿಗೆ ಕೊಡಬೇಕೇ? ಇದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ರಾಮನಗರಕ್ಕೆ ಸಾವಿರ ಕೋಟಿ ರೂಪಾಯಿ.

ಶ್ರೀ ಎಸ್.ರಾಜೇಂದ್ರನ್: 400 ಕೋಟಿ ರೂಪಾಯಿಗಳು ನಮ್ಮ DY.C.M. ರವರ ಕ್ಷೇತ್ರಕ್ಕೆ ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ: 400 ಕೋಟಿ. ನಮ್ಮ ರಾಜೇಂದ್ರನ್ ಹೇಳಿದ್ದೇ ಹೇಳಿದ್ದು, ರಾಜೇಂದ್ರ ನೀನು ಒಂದು ತಪ್ಪು ಮಾಡಿದೆ, ರಸ್ತೆಗಳು ಚೆನ್ನಾಗಿವೆ ಎಂದು ಹೇಳಿಬಿಟ್ಟೆ. ನೀನ್ಯಾಕೆ ರಸ್ತೆಗಳು ಚೆನ್ನಾಗಿದೆ ಎಂದು ಹೇಳಿದೆ?

ಶ್ರೀ ಬಸವರಾಜ ರಾಯರೆಡ್ಡಿ: ಇವರೇನು ಕೊಟ್ಟಿದ್ದಾರೆ ಇದು ಕಾನೂನು ಬಾಹಿರ. ಏಕೆ ಗೊತ್ತೆ? ಶಿಕಾರಿಪುರಕ್ಕೆ ಎಸ್‌ಸಿ ಎಸ್‌ಟಿ ಕಾಲೋನಿ ಮಾಡುವುದಕ್ಕೆ 5054 ನಲ್ಲಿ ಹಣ ಕೊಟ್ಟಿದಾರೆ. 5054 ರಲ್ಲಿ ಎಲ್ಲಿ ಕೊಡುವುದಕ್ಕೆ ಬರುತ್ತದೆ? only PWD road ಇದ್ದರೆ ಮಾತ್ರ ಕೊಡುವುದಕ್ಕೆ ಬರುತ್ತದೆ. it is not PWD road. ಆ 5054 ರ ಶೀರ್ಷಿಕೆಯಲ್ಲಿ ಕೊಟ್ಟಿರುವುದು ಕಾನೂನು ಬಾಹಿರ.

ಶ್ರೀ ಸಿದ್ದರಾಮಯ್ಯ: ಇರಲಿ ಬಿಡಿ, ನೀವು ಹೇಳುವುದು ಕರೆಕ್ಟ್ ನಾನು ಒಪ್ಪಿಕೊಂಡೆ. ಈಗ ಇವರು ಕಾನೂನು ಬಿಟ್ಟು 18 ತಿಂಗಳಾದವು. ಈಗ ನೀವು ಏಕೆ ಹೇಳುತ್ತೀರಿ. ಬಜೆಟ್ ಮಂಡಿಸಿದಾಗಲೇ ಕಾನೂನು ಬಿಟ್ಟಿದ್ದಾರೆ, ಈಗ ನೀವು ಮತ್ತೆ ಹೇಳಿದರೆ ಏನು ಪ್ರಯೋಜನ? ಇವರು ಕಾನೂನು ಬಿಟ್ಟು ಬಹಳ ದಿನವಾಯಿತು. ಬಜೆಟ್ಟಿನ ಪಾವಿತ್ರ್ಯತೆ ಹಾಳು ಮಾಡಿ ಬಹಳ ದಿನವಾಯಿತು. ಬಜೆಟ್ಟಿನ ಪಾವಿತ್ರ್ಯ ಇಲ್ಲ. ಕಾನೂನು ಇಲ್ಲ, ಕಾನೂನು ಬಿಟ್ಟೆ ಮಾಡುತ್ತಿದ್ದಾರೆ. ಹೋಗಲಿ ಇವರು ಕಾನೂನು ಬಿಟ್ಟು ವಾಸ್ತವಿಕ ಪ್ರಪಂಚದಲ್ಲಿ ಈ ರೀತಿ ಮಾಡಿ ಮತ್ತೆ ನೀವು revenue deficit ಗೆ ಹೋಗುತ್ತೀರಿ. ಮೊನ್ನೆ, ನಾವು ಎಲ್ಲಾ ಸರಿ ಮಾಡಿಬಿಟ್ಟೆದ್ದೇವೆ, ಎಲ್ಲಾ ಸರಿ ಹೋಗಿದೆ, ನಿಮ್ಮ ಕಾಲದಲ್ಲಿ ಹದಗೆಟ್ಟಿತ್ತು ಎಂದು ಹೇಳಿದಿರಿ. ನಮ್ಮ ಕಾಲದಲ್ಲಿ ಚೆನ್ನಾಗಿದ್ದಿದ್ದರಿಂದಲೇ, ನಾವೆಲ್ಲ ನಿಮ್ಮ ಟ್ರಜರಿ ತುಂಬಿಸಿ ಕೊಟ್ಟಿರುವುದರಿಂದಲೇ ನೀವು ಈಗೆಲ್ಲಾ ಮಾಡುವುದಕ್ಕೆ ಸಾಧ್ಯವಾಗುತ್ತಿರುವುದು ಇದು ನಿಮಗೆ ಗೊತ್ತೆ? ನಮ್ಮ ಕಾಲದಲ್ಲಿ ತೆರಿಗೆಯ growth 30% ಇತ್ತು. ಇವರು ಬಂದ ಮೇಲೆ 14.58%ಕ್ಕೆ ಇಳಿದಿದೆ. Commercial tax growth 30.02%, highest No.1 in the country in 2004-05. Now it is slipped down to 14.58% in tax growth. ಸಿ.ಎಂ. ಏನು ಹೇಳಿದರು, ಇಲ್ಲಾ ನಾವು vat ಜಾರಿ ಮಾಡಿಬಿಟ್ಟೆವು, ಅದಕ್ಕೋಸ್ಕರವಾಗಿ ಹೀಗೆ ಆಗಿ ಹೋಯಿತು ಎಂದು ಕಾರಣ ಕೊಡುತ್ತಾರೆ. vat ಜಾರಿ ಮಾಡಿದ ಮೊದಲ ವರ್ಷ 100% ಆಯಿತು ತುಂಬಿ ಕೊಟ್ಟರು. 2005-06 ರಲ್ಲಿ ನಿಮಗೆ ಎಷ್ಟು ನಷ್ಟ ಬಂತು, ಅಷ್ಟು ತುಂಬಿಕೊಟ್ಟರು. 2006-07 ರಲ್ಲಿ 75% ನಷ್ಟವನ್ನು ತುಂಬಿ ಕೊಟ್ಟರು. ಈ ವರ್ಷ 50% ನಷ್ಟ ತುಂಬಿಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ನಿಮಗೆ ಅದನ್ನೆಲ್ಲಾ protect ಮಾಡಿ ಕೊಟ್ಟಿದ್ದಾರೆ. ಜೊತೆಗೆ 948 ಕೋಟಿ ರೂ.ಗಳು

incentives ಬಂದಿದೆ. ಇದೆಲ್ಲಾ ಕೇಂದ್ರ ಸರ್ಕಾರದಿಂದ ಬಂದಿದ್ದು. ಕೇಂದ್ರ ಸರ್ಕಾರದಿಂದ grants ಜಾಸ್ತಿ ಬಂತು. ನಮ್ಮ ಪಾಲಿನ ತೆರಿಗೆ grants ಜಾಸ್ತಿ ಬಂತು. ಇಷ್ಟೆಲ್ಲಾ ಆದರೂ ಕೂಡ ಮತ್ತೆ ನೀವು ಕಳೆದ ವರ್ಷ development expenditure ಮಾಡಲಿಲ್ಲ. 0.05 negligible amount developmentಗೆ ಇವರು expenditure ಖರ್ಚು ಮಾಡಿದ್ದು. Non development expenditure ಜಾಸ್ತಿಯಾಯಿತು. Non-plan expenditure ಜಾಸ್ತಿಯಾಯಿತು. ಇವರು ಈಗಾಗಲೇ ದಾರಿ ತಪ್ಪಿ ಹೋಗಿದ್ದಾರೆ. Indiscipline ಕಡೆ ಹೊರಟ್ಟು ಬಿಟ್ಟಿದ್ದಾರೆ. ಇವರು fiscal consolidation ಗಟ್ಟಿ ಮಾಡಬೇಕಾಗಿತ್ತು. Consolidate ಮಾಡಬೇಕಾಗಿತ್ತು. ಅದರ ಬದಲು ಇದನ್ನು ಮಾಡಿದ್ದಾರೆ. ಇವರಿಗೆ Fiscal Responsibility Act ಆ ಬಗ್ಗೆ ಏನು ಗೌರವವಿಲ್ಲ. ಅದಕ್ಕೆ ಬದ್ಧತೆ ಇಲ್ಲ. ಇಲ್ಲಿ ಪಾಸ್ ಮಾಡಿರತಕ್ಕಂಥ ಕಾನೂನು, ಮತ್ತು ಇವರಿಗೆ ಇಷ್ಟ ಬಂದಂತೆ ಕೊಡುವುದು, ರಾಮನಗರಕ್ಕೆ ಎಷ್ಟು ದುಡ್ಡು ಬೇಕಾದಷ್ಟು ತೆಗೆದುಕೊಳ್ಳಿ, ಚಿಕ್ಕಬಳ್ಳಾಪುರಕ್ಕೆ ಮತ್ತು ರಾಮನಗರಕ್ಕೆ ಹೊಸ ಜಿಲ್ಲೆಗಳನ್ನು ಮಾಡಲಿಕ್ಕೆ ತಲಾ 30 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಚಾಮರಾಜನಗರಕ್ಕೆ ಎಷ್ಟು ಕೊಟ್ಟಿದ್ದಾರೆ, ಅದು ಎಲ್ಲಾ ಮುಗಿದು ಹೋಯಿತಾ? ಜಿಲ್ಲಾ ಮಟ್ಟದಲ್ಲಿ ಅಲ್ಲಿ ಏನೇನು development ಆಗಬೇಕು ಎಲ್ಲಾ ಮುಗಿದು ಹೋಯಿತಾ? 6 ಹೊಸ ಜಿಲ್ಲೆಗಳು ಹಿಂದೆ ಆದವು, ಅವುಗಳಿಗೆ ಯಾವುದಕ್ಕೂ ಒಂದು ರೂಪಾಯಿ ಕೊಟ್ಟಿಲ್ಲ. ಮೊದಲು priority ಯಾವುದಕ್ಕೆ ಕೊಡುವುದು. ಚಾಮರಾಜನಗರ ಅಥವಾ ರಾಮನಗರ, ಹರದನಹಳ್ಳಿನಾ? ಮಾನ್ಯ ಯಡಿಯೂರಪ್ಪನವರೆ, ನೀವು ವಿರೋಧ ಪಕ್ಷದಲ್ಲಿ ಇದ್ದವರು ನೀವು ಈ ತರಹ ಆದರೆ, ನೀವು ರೈತರ ಪರವಾಗಿ ಹೋರಾಟ ಮಾಡಿದವರು, ವಿರೋಧ ಪಕ್ಷದಲ್ಲಿದ್ದುಕೊಂಡು ನೀವು ಏನು ಹೇಳಿದ್ದೇ ಹೇಳಿದ್ದು, ಈಗ ಆ ದಾರಿ ಏಕೆ ಬಿಟ್ಟು ಬಿಟ್ಟಿರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಅವರು ಈ ಕಡೆ ಮೊದಲು ಕುಳಿತಿರಲಿಲ್ಲವೆ? ಈಗ ಅವರು ಆ ತರಹ ಇಲ್ಲವೆ? He has totally changed. ಆ ಸೀಟ್ ಹಾಗೆಯೇ? ನಾವೇನು ಆ ತರಹ change ಆಗಿರಲಿಲ್ಲ. But ನಾವೇನು ಅಷ್ಟು change ಆಗಿರಲಿಲ್ಲ. ನಾನು ಕೂಡ ಹಣಕಾಸಿನ ಮಂತ್ರಿಯಾಗಿ ನಾನು ನನ್ನ ಕ್ಷೇತ್ರಕ್ಕೆ 6 ವರ್ಷಗಳಲ್ಲಿ 5–6 ಕೋಟಿ ರೂ.ಗಳಿಗಿಂತ ಜಾಸ್ತಿಯಾಗಿ ಕೊಟ್ಟಿದ್ದರೆ ನಾನು ಇವರು ಹೇಳಿದಂತೆ ಕೇಳುತ್ತೇನೆ. ಆದರೆ ನಾನು ಇರುವಾಗ ಹೊಳೆನರಸಿಪುರಕ್ಕೆ ಕೊಟ್ಟದ್ದಾದರೂ ತೋರಿಸಲಿ ನೋಡೋಣ ನಿಮಗೆ ಏನು ಒತ್ತಡ, ಏಕೆ ಮುಲಾಜು ನಿಮ್ಮ ಆಗ್ರಿಮೆಂಟ್ ನಮಗೆ ಕೊಟ್ಟರೆ ಮಾತ್ರ ಆಗಿದೆಯಾ? Chief Minister ಗೆ ಕೊಡುತ್ತೇನೆಂದು, ನೀವೇ ಹೇಳಿ

ನೋಡೋಣ. ಆ ತರಹ ಇದ್ದರೆ ಸ್ವಂತಕ್ಕೆ ಕೊಡಲಿ ನೋಡೋಣ. ನಮ್ಮದೇನು ತಕರಾರು ಇಲ್ಲ. ಆದರೆ ಇಲ್ಲಿ ರಾಜ್ಯದ ತೆರಿಗೆ ಹಣ ಈ ತರಹ ಖರ್ಚು ಮಾಡುವುದು ಇದೆಯಲ್ಲ this is too bad ನೀವು ತೆಗೆದು ನೋಡಿ ನಾನು 6 ವರ್ಷದ ಬಜೆಟ್ ಮಂಡಿಸಿದ್ದೇನಲ್ಲಾ ನಮ್ಮ ಕ್ಷೇತ್ರಕ್ಕೆ ಎಷ್ಟೆಷ್ಟು ದುಡ್ಡು ಕೊಟ್ಟಿದ್ದೇನೆ. ನನಗೂ ಕೊಟ್ಟುಕೊಳ್ಳಲಿಕ್ಕೆ ಬರುತ್ತಿರಲಿಲ್ಲವೇ? ನಾನು ಕೊಡುತ್ತೇನೆಂದು ಹೇಳಿದ್ದರೆ ಅಧಿಕಾರಿಗಳು ನನ್ನ ಮಾತನ್ನು ಕೇಳುತ್ತಿರಲಿಲ್ಲವೇ? ಹಾಗೆ ಕೊಡಬಾರದು. ನೀವು ಇಡೀ ರಾಜ್ಯದ ಸಮಾನ ಬೆಳವಣಿಗೆಯನ್ನು ನಿರೀಕ್ಷೆ ಮಾಡುವವರು ನಂಜುಂಡಪ್ಪನವರ ವರದಿಯನ್ನು ಜಾರಿಗೆ ಮಾಡುತ್ತೇವೆ ನಮಗೆ ಬದ್ಧತೆ ಇದೆ ಎನ್ನುವವರು ಈ ತರಹ ಮಾಡಬಾರದು ಮಾಡಕೂಡದು. ಇದನ್ನು ಮಾಡಿದ ಅಪವಾದಕ್ಕೆ ಒಳಗಾಗುವುದಿಲ್ಲವೇ? ಮೌನಕ್ಕೆ ಶರಣಾಗಿದ್ದೇನೆ, ಶರಣಾಗಿದ್ದೇನೆಂದರೆ ಆಗಿ, ನಮ್ಮದೇನು ತಕರಾರು ಇಲ್ಲ. ಶರಣಾಗಿದ್ದಕ್ಕೆ ನಿಮಗೆ ಅಧಿಕಾರ ಸಿಕ್ಕರೆ ನಮಗೆ ಬಹಳ ಸಂತೋಷ. ಯಾರ್‍ಯಾರೋ ಆಗುತ್ತಾರೆ ನೀವೂ ಆಗಿ ನಮ್ಮದೇನು ತಕರಾರು ಇಲ್ಲ, ಬಹಳ ಸಂತೋಷ, ಪಾಪ ಬಹಳ ವರ್ಷದಿಂದ ಇದ್ದೀರಿ, ನೀವು ಆದರೆ ನಮಗೆ ಯಾವ ತೊಂದರೆ ಇಲ್ಲ. but ನಮಗೆ ಏನು ಎಂದರೆ, ಅವರು ಮಾತನಾಡುವ ರೀತಿ ನೀತಿಗಳನ್ನು ನೋಡಿದರೆ ಅವರು ಕೊಡುವುದಿಲ್ಲವೆಂದು ನಮಗೆ ಸಂಶಯವಿದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಮಗೆ ಸಂತೋಷವಾಗುತ್ತದೆ ಎಂದು ಹೇಳುತ್ತೀರಾ? ಬೈಯ್ಯುವುದು ಕಡಿಮೆ ಮಾಡುತ್ತೀರೆಂದರೆ ಅದನ್ನು ಕಡಿಮೆ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಈ ತರಹ ನೀವು ಹೇಳಿದರೆ, ನೀವು ಬೈಯ್ಯುತ್ತೀರಿ ನಾನು ಬೈಯ್ಯಬಾರದೇ?

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಾನು ಬೈದಿದ್ದೇನಾ ಕೇಳಿ. ಪಾಪ ಅವರಿಗೆ ಒಳ್ಳೆಯದು ಆಗಲಿ ಎಂದಿದ್ದೇವೆ.

ಶ್ರೀ ಸಿದ್ದರಾಮಯ್ಯ: ಯಾರಾದರೂ ಈ ಹೌಸ್‌ನಲ್ಲಿ ರಮೇಶ್‌ಕುಮಾರ್‌ರವರಷ್ಟು ಚುಚ್ಚು ಮಾತುಗಳನ್ನು ಆಡುವವರಿದ್ದರೆ, ಇವರು ಒಬ್ಬರೇ ಅಲ್ಲವೇ? ಎಂತಹ ಸತ್ಯಮಾತನ್ನು ಹೇಳಿದಿರಿ, ನಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಚುಚ್ಚು ಮಾತನಾಡುವ ಕಲೆ ಅಲ್ಲಿಂದಲೇ percolate ಆಗಿರುವುದು.

ಶ್ರೀ ಸಿದ್ದರಾಮಯ್ಯ: ಅದು ನಿಮ್ಮ ಕಡೆಗೆ ಹರಿಯುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಯಾವ ಕಡೆಗಾದರೂ ಹರಿಯಲಿ ಹರಿದು ಬಿಟ್ಟಿದೆಯಲ್ಲಾ?

ಉಪಾಧ್ಯಕ್ಷರು: ಎಲ್ಲರೂ ಮಾತನಾಡಲಿ ರಾತ್ರಿ ಎರಡು ಗಂಟೆಯಾಗಲಿ ಏನಾಗಬೇಕಾಗಿದೆ.

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ ನಾನು ಮುಖ್ಯಮಂತ್ರಿಯಾದಾಗ ಪ್ರತ್ಯೇಕವಾಗಿ ಜೇವರ್ಗಿ ತಾಲ್ಲೂಕಿಗೆ ಹೆಚ್ಚಿನ ಹಣವನ್ನು ಕೊಡಿ ಎಂದು ಹೇಳುವುದಕ್ಕೆ ಹೋಗಿದ್ದೆ. ಈಗಾಗಲೇ ತಾವು ಚರಂಡಿ ದುರಸ್ತಿಗೆ 16.84 ಕೋಟಿ ರೂ.ಗಳನು ಕೊಟ್ಟಿದ್ದೀರಿ. ಮಹಿಳಾ ಪಾಲಿಟೆಕ್ನಿಕ್ ಕಾಲೇಜಿಗೆ ತಾವು 8 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ನನ್ನ constituency ಬಗ್ಗೆ ನಿಮಗೆ ಸಾಕಷ್ಟು ಸಲ ಹೇಳಿ ಹೇಳಿ ಸಾಕಾಗಿ ಹೋಯಿತು. ಸಿದ್ಧಯ್ಯನವರಿಗೂ ಹೇಳಿದೆ, ನೀವು ಕೊಡುವುದಿಲ್ಲವೆಂದು ಗೊತ್ತಾಯಿತು. ITI College ಗೆ 20 ಲಕ್ಷ ಹೋದ ವರ್ಷ ಇಟ್ಟು ಈ ವರ್ಷ ಏನೂ ಕೊಟ್ಟಿಲ್ಲ. ಬಂಜಾರ ಸಮಾಜಕ್ಕೆ ಎಲ್ಲಾ ಕಡೆಗೆ ಹೋದರು, ನೀವು ಕೂಡ ಹೋದಿರಿ, 14 ಕೋಟಿ ರೂ.ಗಳನ್ನು ಬಂಜಾರ ಸಮಾಜದ ಕಲ್ಯಾಣಕ್ಕೆ ಇಟ್ಟುಕೊಂಡು ಅದಕ್ಕೆ ಬಿಡುಗಡೆ ಮಾಡಿದ ಹಣ ಎಷ್ಟು? 5 ಕೋಟಿ ರೂ.ಗಳು. ಏಕೆ ನೀವು ಆ ಜನಾಂಗಕ್ಕೆ ಇವತ್ತಿನ ದಿವಸ ವಂಚನೆಯನ್ನು ಮಾಡುತ್ತಿದ್ದೀರಿ? ಸುಮ್ಮನೆ ಹೇಳತಕ್ಕಂಥದ್ದು ಅಲ್ಲ. ಬಜೆಟ್‌ನಲ್ಲಿಟ್ಟಿರುವ ದುಡ್ಡನ್ನು ಸರಿಯಾದ ರೀತಿಯಲ್ಲಿ ನೀವು ಬಿಡುಗಡೆ ಮಾಡುವುದನ್ನು ಕಲಿಯಬೇಕು.

ಶ್ರೀ ಸಿದ್ದರಾಮಯ್ಯ: ಅವರು ಮುಖ್ಯಮಂತ್ರಿಯಾಗಿದ್ದರು ಆದರೆ ಒಂದು ದಿವಸ ಕೂಡ additional ಆಗಿ ಜೇವರ್ಗಿಗೆ ದುಡ್ಡು ಕೊಡಿ ಎಂದು ಕೇಳಲಿಲ್ಲ. ಒಂದು ರೂಪಾಯಿಗಳನ್ನು ಕೇಳಲಿಲ್ಲ. ನಾನು ಒಂದು ಸಲ ನಮಗೆ ದುಡ್ಡು ಕೊಡಿ ಎಂದು ಕಾಗದವನ್ನು ಕೊಟ್ಟೆ ಹರಿದು ಎಲ್ಲಿ ಎಸೆದಿರಿ ಏನೋ ಗೊತ್ತಾಗಲಿಲ್ಲ. ನೀವು ಕೊಟ್ಟಿದ್ದೀರಾ ಹೇಳಿ ನೋಡೋಣ. ಕೊಟ್ಟಿಲ್ಲ ಬಿಡಿ, ನೀವು ಅಸತ್ಯವನ್ನು ಹೇಗೆ ಹೇಳುವುದಕ್ಕಾಗುತ್ತದೆ? ನೀವು ಯಾವಾಗಲೂ ಸತ್ಯವನ್ನು

ಹೇಳುವವರು, ಅಸತ್ಯವನ್ನು ಹೇಗೆ ಹೇಳಿ ಬಿಡುತ್ತೀರಿ? ನಾನು ಒಂದು letter ಕೊಟ್ಟೆ. ನಾನು ಹಣಕಾಸು ಮಂತ್ರಿಯಾಗಿರುವಾಗ ನಮ್ಮ constituency ಗೆ ಹಣ ಕೊಟ್ಟಿದ್ದೇನೆ. Leader of Opposition ಇದ್ದಾರೆ, ಪಾಪ ಅವರ ಮಾತನ್ನು ತಳ್ಳಿ ಹಾಕಬಾರದೆಂದು ಹೇಳಿ ನಿಮಗೆ 3 ಕೋಟಿ ರೂ.ಗಳನ್ನು ಕೊಟ್ಟೆ. ನಾನು ಒಂದು letter ಕೊಟ್ಟರೆ ಅದನ್ನು ಹರಿದು ಎಸೆದು ಬಿಟ್ಟಿದ್ದೀರಲ್ಲಾ ಅದು ಸರಿಯಾ? ನಾನು ಏಕಪ್ಪಾ ಇವರು ಹಣ ಕೊಡಲಿಲ್ಲವೆಂದು ವಿಚಾರ ಮಾಡಿದರೆ ಕುಮಾರಸ್ವಾಮಿಯವರು ಒಪ್ಪಲಿಲ್ಲವೆಂದು ಅಂದು ಬಿಟ್ಟರು. ಇದು ಯಾವ ತರಹ ನೀವು ನನಗೆ ಹೇಳಲಿಲ್ಲ, ಈ ವಿಚಾರ ನನಗೆ ಗೊತ್ತಾಯಿತು. ನೀವು ಮಾತೇ ಆಡಲಿಲ್ಲ ನೀವು ಮೌನವಾಗಿದ್ದೀರಿ. ಈಗ ಇದ್ದೀರಿ ಅಲ್ಲಾ ಆ ರೀತಿ ಮೌನ. ನಾನು ಅಲ್ಲಿ ಕುಳಿತಾಗ ನಮಗೆ ಒಂದು ಚೀಟಿ ಬರೆದು ಕಳುಹಿಸಿದೆ, ಆ ಚೀಟಿ ಹರಿದು ಎಸೆದು ಬಿಟ್ಟಿದ್ದಾರೆ, ಅದಕ್ಕೆ ಏನು ಉತ್ತರ ಕೊಡಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು 80 ಲಕ್ಷ ರೂಗಳನ್ನು ಪಾರ್ಕ್ ಸಲುವಾಗಿ ಕೇಳಿ 6 ತಿಂಗಳಾಯಿತು ಇನ್ನೂ ಕೊಡಲಿಲ್ಲ.

ಶ್ರೀ ಸಿದ್ದರಾಮಯ್ಯ: ಹೋಗಲಿ ಬಿಡಿ ಪಾಪ. ಎಷ್ಟು ಕೋಟಿ ರೂ.ಗಳನ್ನು ತೆಗೆದುಕೊಂಡು ಹೋಗಿ ಹೊಳೆನರಸೀಪುರಕ್ಕೆ ಕೊಟ್ಟಿದ್ದೀರಿ ಲೆಕ್ಕಾ ಹಾಕಿ. Medical College, Agriculture College, ಆಮೇಲೆ ಇನ್ನೊಂದು ಯಾವುದೋ College, Court, Buildings, Roads, Historical Place ಗೆ ಕೊಟ್ಟಿರುವುದು. 200 ಕೋಟಿ ರೂ.ಗಳು ಶ್ರವಣಬೆಳಗೋಳ ಮಹಾಮಸ್ತಕಾಭಿಶೇಕಕ್ಕೆ ನಮ್ಮ ಕಾಲದಲ್ಲಿ ಕೊಟ್ಟಿರುವುದು. ಅದರ ಜೊತೆಗೆ ಇನ್ನು ಇವೆಲ್ಲಾ, Historical event ಮಾಡಿದ್ದು ಆಯಿತು. ಪಾಪ ವಾಟಾಳ್ ನಾಗರಾಜ್ ನಿಮ್ಮ ಪರವಾಗಿ ಅಷ್ಟೊಂದು ವಕಾಲತ್ತು ಹಾಕುತ್ತಾರೆ, ಅವರಿಗೆ ಒಂದು ರೂಪಾಯಿ ಇಲ್ಲ, ಮಾಧುಸ್ವಾಮಿಗೆ ಇಲ್ಲ. ನಾನು ಹೇಳುತ್ತೇನೆ, ಹರದನಹಳ್ಳಿಗೆ ಮಾಡುತ್ತೀರಲ್ಲಾ, ಎಲ್ಲಾ ಮುಖ್ಯಮಂತ್ರಿಗಳು ಹುಟ್ಟಿದ ಊರಿಗೆ ಮಾಡಿ. ಕಲ್ಲಳ್ಳಿಗೆ ಮಾಡಿ, ಆ ಕಲ್ಲಳ್ಳಿಗೆ ನಾನು ಹಣ ಕೊಟ್ಟೆ. ನಿಜಲಿಂಗಪ್ಪನವರ ಊರಿಗೆ ಮಾಡಿ, ಕೆಂಗಲ್ ಹನುಮಂತಯ್ಯನವರ ಊರಿಗೆ ಮಾಡಿ, ಕೆ.ಸಿ.ರೆಡ್ಡಿಯವರ ಊರಿಗೆ ಮಾಡಿ, ವೀರೇಂದ್ರ ಪಾಟೀಲ್‌ರವರು ಹುಟ್ಟಿದ ಊರಿಗೆ ಮಾಡಿ, ರಾಮಕೃಷ್ಣ ಹೆಗಡೆಯವರು ಹುಟ್ಟಿದ ಊರಿಗೆ ಮಾಡಿ, ಅವರು ಯಾರು, ಈ ರಾಜ್ಯಕ್ಕೆ ಏನು ಕೆಲಸವನ್ನು ಮಾಡಲಿಲ್ಲವೇ? ರಾಜ್‌ಕುಮಾರ್‌ರವರ ಸ್ಮಾರಕ ಮಾಡಬೇಕೆಂದು ನಮಗೆ ಗೊತ್ತಾಗಲಿಲ್ಲವೇ?ಬಜೆಟ್‌ನಲ್ಲಿ ಆಗಲೇ ಸೇರಿಸಬೇಕೆಂದು ನಮಗೆ ಗೊತ್ತಾಗಲಿಲ್ಲವೇ? ಈಗ ಕೊಟ್ಟಿದ್ದೀರಿ. Is Rajkumar so unimportant person?

ರಾಜ್‌ಕುಮಾರ್‌ರವರ ಸ್ಮಾರಕ ಮಾಡಬೇಕೆಂದು ನಿಮ್ಮ ತಲೆಗೆ ಯಾವಾಗ ಬಂದಿದ್ದು? ನೀವು ಯಾವಾಗ ಘೋಷಣೆ ಮಾಡಿದ್ದು? Can you call it as unforeseen expenditure? ದಯವಿಟ್ಟು ನೀವು ಹಣವನ್ನು ಈ ರೀತಿ ಚೆಲ್ಲುವುದಕ್ಕೆ ಹೋಗಬೇಡಿ. ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಮತ್ತೆ ಕೆಟ್ಟು ಹೋಗುತ್ತದೆ. ಆಗಲೇ ಮಾನ್ಯ ಕುಮಾರಸ್ವಾಮಿಗಳವರು ಹೇಳುತ್ತಿದ್ದರು. ನಾನು ಇರಲಿಲ್ಲ ಆದರೆ ಕೇಳಿಸಿಕೊಳ್ಳಲಿಲ್ಲ. ಸಿದ್ಧರಾಮಯ್ಯನವರ ಕಾಲದಲ್ಲಿಯೇ ದಾರಿ ತಪ್ಪಿತು ಎಂದರು... ಇಲ್ಲಿ ಹೇಳಲಿಲ್ಲವೇ? ನಾನು ಪತ್ರಿಕೆಗಳಲ್ಲಿ ಹೇಳಿಕೆ ನೋಡಿದೆ. ಹತ್ತು ವರ್ಷಗಳ ಹಿಂದೆ ಏಕೆ ಆಯಿತು ಎಂದು ಹೇಳಿದಿರಾ? ಅವರು ಆ ರೀತಿ ಹೇಳಬೇಕಾದರೆ ಉದ್ದೇಶ ಏನು?

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಿಮಗೇನು ರೆಫರ್ ಮಾಡಲಿಲ್ಲ ಅವರು ಆ ರೀತಿ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ: ಹೇಳಲಿಲ್ಲವೇ? ಪತ್ರಿಕೆಗಳಲ್ಲಿ ನೋಡಿದೆ. ಅದು ಇರಲಿ ಬಿಡಿ. ಯಾವುದೋ ಪತ್ರಿಕೆಯಲ್ಲಿ ಆ ರೀತಿ ಬಂತು, ನಾನು ಓದಿದೆ. ನಾವು 2005–06 ನೇ ಇಸ್ವಿಯಲ್ಲಿ revenue deficit ಅನ್ನು ತೆಗೆದು revenue surplus ಬರುವುದನ್ನು 2004–05 ನೇ ಇಸ್ವಿಯಲ್ಲಿ ಅಂದರೆ ಒಂದು ವರ್ಷ ಮುಂಚಿತವಾಗಿ ತಲುಪಿದ್ದೇವೆ. fiscal deficit 3% 2005–06 ಮಾರ್ಚಿ ಒಳಗಡೆ ತಲುಪಬೇಕಾಗಿರುವುದನ್ನು 2004–05 ರಲ್ಲಿ 2.83%ಕ್ಕೆ ಬಂದಿದ್ದೇವೆ. ಈಗ ನೀವು ಮತ್ತೆ 3% ಹತ್ತಿರಕ್ಕೆ ಹೋಗಿದ್ದೀರಿ. ಮುಂದಿನ ವರ್ಷಕ್ಕೆ ನೀವು 4% ಕ್ರಾಸ್ ಮಾಡಿಬಿಡುತ್ತೀರಿ. ನೀವು ಈ ರೀತಿಯಾಗಿ ಹೋಗುವ ರೀತಿ ನೋಡಿದರೆ, ಮುಂದಿನ ವರ್ಷಕ್ಕೆ revenue deficit ಆಗುತ್ತೆ; fiscal deficit ಕೂಡ you will cross 3%, barrowings ಜಾಸ್ತಿಯಾಗುತ್ತದೆ. ನೀವು ನಿಮಗೆ ಇಷ್ಟು ದುಡ್ಡನ್ನು ಹೇಗೆ ಸರಿಮಾಡಿಕೊಳ್ಳುತ್ತೀರಿ? ನೀವು ಹೇಗೆ resources mobilization ಮಾಡಿಕೊಳ್ಳುತ್ತೀರಿ ಎಂಬುದನ್ನು ನಮಗೆ ಹೇಳಬೇಕು. ನೀವು ಹೇಳುವ ಪ್ರಕಾರ ಸುಮಾರು 5 ರಿಂದ 6 ಸಾವಿರ ಕೋಟಿ additional expenditure ಆಗುತ್ತದೆ ಅಲ್ಲವೇ? ಇದಕ್ಕೆ ಏನು ಮಾಡಿಕೊಳ್ಳುತ್ತೀರಿ ಎಂಬುದನ್ನು ಹೇಳಿ. ನೀವು ಇದಕ್ಕೆ ಉತ್ತರ ಕೊಟ್ಟರೆ ನಾವು ಒಪ್ಪಿಗೆ ಕೊಡಲಿಕ್ಕೆ ತಯಾರಾಗಿದ್ದೇವೆ. ನಮಗೆ ನೀವು ಕನ್‌ವಿನ್ಸ್ ಮಾಡಿ. ಇಲ್ಲದಿದ್ದರೆ ನಾವು ಹೇಗೆ ಒಪ್ಪಿಗೆ ಕೊಡುವುದು? ಹರದನಹಳ್ಳಿಗೆ ರಾಮನಗರಕ್ಕೆ ಶಿಕಾರಿಪುರಕ್ಕೆ ಹೊಳೆನರಸೀಪುರಕ್ಕೆ ಕೆಲಸ ಮಾಡುವುದಕ್ಕೆ ನಾವು ಇಲ್ಲಿ ಒಪ್ಪಿಗೆ ಕೊಡುವುದಕ್ಕೆ ಇರುವುದೆ? ನಮಗೇನು

ಜನ ಓಟು ಕೊಟ್ಟು ಕಳುಹಿಸಲಿಲ್ಲವೇ? ನಿಮಗೆ ಅಷ್ಟೇ ಜನಕ್ಕೆ ಮಾತ್ರ ಜನರು ಆಶೀರ್ವಾದ ಮಾಡಿರುವುದು? ಎಷ್ಟು ಸಾರಿ ಚರ್ಚೆ ಮಾಡಿದ್ದೇವೆ. ಹೈಸ್ಕೂಲ್‌ಗಳನ್ನು ಸರಿಮಾಡಿಕೊಡುತ್ತೇವೆಂದಿರಿ, ಅದನ್ನು ಸರಿ ಮಾಡಲಿಲ್ಲ. ರಸ್ತೆಗಳನ್ನು ಸರಿಮಾಡಿಕೊಡುತ್ತೇವೆಂದಿರಿ ಅದನ್ನು ಸರಿಮಾಡಿಕೊಡಲಿಲ್ಲ. ಯಾರ್‍ಯಾರಿಗೆ ಕಾಲೇಜ್‌ಗಳು ಸಿಕ್ಕಿಲ್ಲ ಅವರಿಗೆ ಕೊಡುತ್ತೇವೆಂದಿರಿ ಅವುಗಳನ್ನು ನಂಜುಂಡಪ್ಪನವರ ವರದಿ ಪ್ರಕಾರ ಕೊಡುತ್ತೇವೆಂದಿರಿ ಅದನ್ನು ಕೊಡಲಿಲ್ಲ. ಹಾಸ್ಟೆಲ್‌ಗಳನ್ನು ಕೊಡುತ್ತೇವೆಂದಿರಿ ಹಾಸ್ಟೆಲ್‌ಗಳನ್ನು ಕೊಡಲಿಲ್ಲ. ಮತ್ತೆ ನೀವು ಯಾವುದನ್ನು ಮಾಡುವುದು? ಪ್ರಕಾಶ್‌ರವರು ಇಲ್ಲ. ಆ ಪೋಲಿಸ್ ಇಲಾಖೆಗೆ ನಾವು ಎಲ್ಲಾ ಇಲ್ಲಿ ಲೆಕ್ಕಮಾಡಿ ದುಡ್ಡು ಕೊಡಬೇಕು. ನನ್ನ ಮೇಲೆ ಐದು ಸುಳ್ಳು ಕೇಸ್ ಹಾಕಿಬಿಟ್ಟರು. COD Report ಆಯಿತು, ಸರ್ಕಾರಕ್ಕೆ COD Report ಬಂದಿದೆ. 15 ದಿನಗಳಲ್ಲಿ COD Report ಮಾಡಿಸುತ್ತೇವೆಂದು ಹೇಳಿದರು. ಅವನು ಯಾವನೊಬ್ಬ DY.SP ಇನ್ನು ಅಲ್ಲಿಯೇ ಕುಳಿತಿದ್ದಾನೆ. ಅವನನ್ನು ರಜದ ಮೇಲೆ ಕಳುಹಿಸುತ್ತೇನೆಂದು ಹೇಳಿದಿರಿ. ನಮ್ಮ ಸರ್ಕಾರ ಅಸೆಂಬ್ಲಿಯಲ್ಲಿ ಹೇಳಿಕೆ ಕೊಟ್ಟಿರುವುದಕ್ಕೆ ಅದಕ್ಕೆ ಗೌರವಿಸಬೇಕು ಎನ್ನುವುದಾದರೂ ಇದೆಯೇ? ಇವತ್ತಿಗೂ ಅವನು DY.SP ಆಫೀಸ್‌ನಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿದ್ದಾನೆ. ಯಾರಿಗೆ ನಾಚಿಕೆಯಾಗಬೇಕೆಂದು ನೀವು ಹೇಳಿ. ನಾವು ಇಲ್ಲಿ ಹೇಳಿದರೆ ನಿಮಗೆ ಕೋಪ ಬಂದು ಬಿಡುತ್ತದೆ. ಆ ದಿವಸ ಒಳಗಡೆ ಸಭಾಧ್ಯಕ್ಷರ ಎದುರುಗಡೆ, ಚರ್ಚೆ ಮಾಡಿ ಅವನನ್ನು ರಜದ ಮೇಲೆ ಕಳುಹಿಸುತ್ತೇವೆ ಎನ್ನುವ ತೀರ್ಮಾನವಾಯಿತು. ಆಗ ನೀವು ಕೂಡ ಇದ್ದೀರಿ. ಇಲ್ಲಿಗೆ ಪ್ರಕಾಶ್‌ರವರು ಬಂದು ಹೇಳಿಕೆ ಕೊಟ್ಟರು. 15 ದಿವಸದಲ್ಲಿ COD Report ತರಿಸುತ್ತೇವೆಂದು ಹೇಳಿದರು. COD Report ಇವತ್ತು ಬಂದಿದ್ದರೂ ಅದು ಏನಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. there are five FIRs pending against me. All false cases, farbricated. ಪಿತೂರಿ, ಇಂಥ ಪೋಲಿಸ್‌ನವರಿಗೆ ನಾವು ಇಲ್ಲಿ ಹಣ ಕೊಡುವುದಕ್ಕೆ ಪಾಸ್ ಮಾಡಿಕೊಡಬೇಕೆ? ಅವರು ಸಂಬಳ ತೆಗೆದುಕೊಳ್ಳುವದಕ್ಕೂ ಕೂಡ ನಾಲಾಯಕ್. ಅವರು ಕೆಲಸದಲ್ಲಿರುವುದಕ್ಕೆ ನಾಲಾಯಕ್. ರಾಜಕೀಯವಾಗಿ ಯಾರಿಗೆ ಆಗುವುದಿಲ್ಲ ಅವರ ಮೇಲೆ ಸುಳ್ಳು ಕೇಸ್ ಹಾಕಿ ಮುಗಿಸಲಿಕ್ಕೆ ಆಗುತ್ತದೆಯೇ? ಸಾಧ್ಯವೇ ಇಲ್ಲ. ಪೋಲಿಸ್‌ನವರಿಗೆ ಹೆದರಿಕೊಂಡು ನಾವು ಇಲ್ಲಿ ರಾಜಕೀಯ ಮಾಡುವುದಕ್ಕೆ ಬರುತ್ತವೆಯೇ? ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ನಾನು ಇವತ್ತಿನವರೆಗೆ ಅಸೆಂಬ್ಲಿ ಶುರುವಾದಾಗಿಂದ ಮಾತನಾಡಿಲ್ಲ, ಏಕೆಂದರೆ ಅವರು ಹೇಳಬಹುದು ಎಂದು

ಕಾದಿದ್ದೆ. ಇದನ್ನು ಹೇಳಿಕೊಳ್ಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ. ಇಷ್ಟು ವರ್ಷ ನೀವು ಇದ್ದೀರಲ್ಲ ನೀವು ಆದರೂ ಹೇಳಿ. ನನ್ನ ಮೇಲೆ ಐದು ಕೇಸುಗಳು, FIR, ಸಭಾಧ್ಯಕ್ಷರಿಗೆ ಪತ್ರ ಬರೆದಾದ ಮೇಲೆ ಕೇಸ್‌ಗಳನ್ನು ಹಾಕಿದರು. ಎಲ್ಲಾದರೂ ಉಂಟೇ? I have not come across such cases. ಈ ತರಹದ ಪೋಲಿಸ್‌ನವರನ್ನು ಇಟ್ಟುಕೊಂಡು ಕಾನೂನು ಸುವ್ಯವಸ್ಥೆಯನ್ನು ಕೊಡುತ್ತೇವೆ, ನ್ಯಾಯ ಒದಗಿಸಿ ಕೊಡುತ್ತೇವೆ, ಸಾಮಾಜಿಕ ನ್ಯಾಯ ಒದಗಿಸಿ ಕೊಡುತ್ತೇವೆ, ನಿಶಕ್ತರಿಗೆ, ಆಸಕ್ತರಿಗೆ, ರಕ್ಷಣೆ ಕೊಡುತ್ತೇವೆ ಎಂದು ಹೇಳಿದರೆ ಅದರಲ್ಲಿ ಏನಾದರೂ ಸ್ವಲ್ಪ ಸತ್ಯವಿದೆಯೆ? ಇದನ್ನು ನೀವು ಆದರೂ ಹೇಳಬೇಕು. ಇವತ್ತು ಪ್ರಕಾಶ್‌ರವರು ಬರುತ್ತೇನೆಂದು ಹೇಳಿದ್ದರು, ಆದರೆ ಅವರು ಬರಲಿಲ್ಲ. ನನ್ನೆ ತಾವು ಇದ್ದಾಗ ನಾನು ಇದನ್ನು ರೈಸ್ ಮಾಡುತ್ತೇನೆಂದು ಹೇಳಿದ್ದೆ. ಪ್ರಿವಿಲೆಜ್ ಕಮಿಟಿಗೆ ಹೋಗಿರುವುದು ಬೇರೆ. COD enquiry ಆಗಿದೆ ಯಡಿಯೂರಪ್ಪನವರೆ. ಆ ದಿವಸ ಮೂರು ತೀರ್ಮಾನವಾಯಿತು. DY.SP should go on leave till COD reports come. (2) ಪ್ರಿವಿಲೆಜ್ ಕಮಿಟಿಗೆ ರೆಫರ್ ಮಾಡಬೇಕು (3) COD enquiry ಆಗಬೇಕು. ಈ ಮೂರು ಬಗ್ಗೆ ಹೇಳಿಕೆ ಕೊಟ್ಟರು. ಸರ್ಕಾರವೇ ಹೇಳಿದಂಥ ಹೇಳಿಕೆಗೆ ನಿಮ್ಮ ಪೋಲಿಸ್‌ನವರು ಕೇಳುತ್ತಾ ಇಲ್ಲವೋ? ಅಥವಾ ನೀವೇ ಇಲ್ಲ ಇಲ್ಲ ನಾವು ಸುಮ್ಮನೆ ಹೇಳಿದ್ದೇವೆ ನೀವು ಅಲ್ಲಿ ಇರಬೇಕೆಂದು ಹೇಳಿದ್ದೀರಾ? ಅಲ್ಲಿ ಕುಳಿತಿರುವ DY.SP ಏನು ಮಾಡುತ್ತಿದ್ದಾನೆಂದರೆ, ಮುಂದಿನ ಚುನಾವಣೆಯಲ್ಲಿ ಸಿದ್ಧರಾಮಯ್ಯನವರ ವಿರುದ್ದ ನಾನು ನಿಂತುಕೊಳ್ಳುತ್ತೇನೆಂದು ಅಲ್ಲಿರುವ ಪೋಲಿಸ್ ಠಾಣೆಯಲ್ಲಿ ಹೇಳುತ್ತಿದ್ದಾನೆ. ಆ ರೀತಿ ನಿಮಗೆ ಆಗಿದ್ದರೆ? ಟಿಕೇಟು ನಮ್ಮದೋ ಅವರದೋ ಗೊತ್ತಿಲ್ಲ. ನಮ್ಮ ಹತ್ತಿರಕ್ಕೆ ಬರುವುದಿಲ್ಲ ಆ ಕಡೆಗೆ ಹೋಗುತ್ತಾರೆ. ದಿನ ಆಫೀಸ್‌ನಲ್ಲಿ ಹೇಳುತ್ತಿದ್ದಾನಂತೆ. ಅದು ಯಾರ ಟಿಕೇಟ್ ಮೇಲೆ ನಿಂತುಕೊಳ್ಳುತ್ತಾನೋ ಗೊತ್ತಿಲ್ಲ. ನಾನು ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯನವರ ವಿರುದ್ದ ನಿಂತುಕೊಳ್ಳುತ್ತೇನೆಂದು ಅಲ್ಲಿರುವ ಪೋಲಿಸ್ ಠಾಣೆಯಲ್ಲಿ ಹೇಳುತ್ತಿದ್ದಾನಂತೆ. ನಾನು ಈಗಲೇ ಯೂನಿಫಾರಂ ಬಿಚ್ಚಿ ಹಾಕಿ ನಿಂತುಕೊಳ್ಳುವುದಕ್ಕೆ ಬಾ ಎಂದು ಹೇಳಿದೆ. ಯೂನಿಫಾರಂ ಹಾಕಿಕೊಂಡು ನಿಂತುಕೊಳ್ಳುವುದಕ್ಕೆ ಆಗುತ್ತದೆಯೇ? ಇದು ನಾಚಿಕೆಗೇಡು. ಇದು ಸರ್ಕಾರ ನಡೆಸುವ ರೀತಿಯೇ? ಏನು ಮಾಡಬೇಕು? ಇದಕ್ಕೆಲ್ಲಾ ಹಣ ಖರ್ಚು ಮಾಡಬೇಕು, ನೀವು ಒಪ್ಪಿಗೆ ಕೊಡಿ ಎಂದರೆ ಯಡಿಯೂರಪ್ಪನವರೆ ಹೇಗೆ ಒಪ್ಪಿಗೆ ಕೊಡಬೇಕು ನೀವು ಹೇಳಿ. ಇವರಿಗೆಲ್ಲಾ ಸಂಬಳ ಕೊಡುವುದಕ್ಕೆ ನಾವು ಒಪ್ಪಿಗೆ ಕೊಡಬೇಕೆ? ಇವರೆಲ್ಲ rascals. ಇದಕ್ಕೆ

ಒಪ್ಪಿಗೆ ಕೊಡಬೇಕೆ? ನಾನು ಯಾವಾಗಲೂ ನೋಡಿರಲಿಲ್ಲ. ನನ್ನ ಮೇಲೆ ಐದು ಸುಳ್ಳು ಕೇಸ್. ಈಗೇನು ತರಾತುರಿಯಲ್ಲಿ ಅಲ್ಲಿರುವ ಯಾರೋ ಒಬ್ಬ ಐ.ಜಿ., ಅವರ ಮೇಲೆ ಚಾರ್ಜ್‌ಸೀಟ್ ಹಾಕಿರಿ ಎಂದು ಹೇಳುತ್ತಿದ್ದಾನಂತೆ. What a nonsense! Is it for false complaint, false FIR? ಇದೆಲ್ಲಾ ರಾಜಕೀಯ. It is too much. ಇದನ್ನು ಯಾರೂ tolerate ಮಾಡಿಕೊಳ್ಳಕೂಡದು. ಯಡಿಯೂರಪ್ಪನವರೆ ಅಧಿಕಾರ ಬರುತ್ತದೆ, ಅಧಿಕಾರ ಹೋಗುತ್ತದೆ, ಅಧಿಕಾರ ಶಾಶ್ವತವಲ್ಲ. ನೀವು ಅಲ್ಲಿ ಕುಳಿತಿರಬಹುದು. ನಾವು ಇಲ್ಲಿ ಕುಳಿತಿರಬಹುದು. ನಾನು ಎರಡು ವರ್ಷದ ಹಿಂದೆ ನಿಮ್ಮ ಸ್ಥಾನದಲ್ಲಿದ್ದೆ. ನೀವು ಪಾಪ ಸುಮಾರು 25 ವರ್ಷಗಳಿಂದ ಇಲ್ಲಿ ಕುಳಿತಿದ್ದೀರಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: Manipulation ಹೇಗೆ ಮಾಡುತ್ತಾರೆಂದರೆ, ನನ್ನ ಮೇಲೆ forest land encroach ಮಾಡಿದೆನೆಂದು ಕೇಸ್ ನಡೆಯುತ್ತಿದೆ. Forest department ಆಡಳಿತ ವ್ಯವಸ್ಥೆಯಲ್ಲಿ ಯಡಿಯೂರಪ್ಪನವರೆ ಒಂದು circular ಇದೆ. encroachment ಅದು ಆಗಿ ಇದ್ದರೆ ಅದು quarterly meeting ಆಗುತ್ತದೆ. ಆ meeting ನಲ್ಲಿ ಮಾಡಬೇಕು. concerned officers report ಇವರೇನು ಮಾಡಿದರು? ನಾನು ಆ circular ಪ್ರಕಾರ, under the Right to Information Act ಮಾಹಿತಿ ಕೇಳಿದೆ. ನನ್ನ ಮೇಲೆ ಈ ಕೇಸ್ ಹಾಕಿದ್ದಿರಲ್ಲಾ ಆ ದಿವಸ ನಾನು encroachment ಮಾಡಿರುವ ಬಗ್ಗೆ ರಿಪೋರ್ಟ್ ಮಾಡಿದ್ದೀರಾ ಎಂದು ಕೇಳಿದೆ. ಅವರು ಮಾಡಿಲ್ಲ. ಅದಕ್ಕೇನು ಮಾಡುತ್ತಾರೆಂದರೆ, 2003ರಲ್ಲಿ ನಾನು encroachment ಮಾಡಿದೆ ಎಂದು, ಮೊನ್ನೆ Prosecute ಮಾಡಿದರು. ರಾಷ್ಟ್ರಪತಿ ಚುನಾವಣೆಯ ದಿವಸ ನಾನು ಕೋರ್ಟಿಗೆ ಹಾಜರಾಗಬೇಕಾಗಿತ್ತು, warrant against me, ನಾನು ಇಲ್ಲಿ ಚುನಾವಣೆ ಮುಗಿಸಿಕೊಂಡು ಮಾರನೇ ದಿವಸ ಹೋಗಿ I enlarged myself on bail. I am supposed to have encroached the forest land in 2003. ಅದಕ್ಕೆ prosecution ಯಾವಾಗ ಎಂದರೆ, 2007ನಲ್ಲಿ. ಪಾಪ ನೀವು ಇಲ್ಲಿರುವವರು ಮಂತ್ರಿಗಳು, ಮುಖ್ಯಮಂತ್ರಿಗಳು, ಹೇಳುತ್ತೀರೋ ಹೇಳುವುದಿಲ್ಲವೋ ಮಧ್ಯೆ ಯಾರು ಮಾಡುತ್ತಾರೋ over enthusiastic ಇವರೆಲ್ಲ ಇರುತ್ತಾರೆ ನೋಡಿ. They do all this. ಸಾಹೇಬ್ರಿಗೆ ಇದು ಹೊಸದು. ಜಮ್ ಎಂದು ಉಪ ಮುಖ್ಯಮಂತ್ರಿಗಳಾಗಿ ಹಣಕಾಸು ಕೈಯಲ್ಲಿ ಹಿಡಿದುಕೊಂಡು ದರ್ಬಾರು

ಮಾಡಿದವರು. ನಾನು ಯಾವಾಗಲೂ ಕೇಸ್‌ಗಳಲ್ಲಿ ಇದ್ದವನು, ಅದೇನು ಹೊಸ ವಿಷಯ ಅಲ್ಲ. ಅವರು ಐದು ಕೇಸ್‌ಗಳಿಗೆ, FIR ಗೆ ಹೆದರಿ ಬಿಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಹೆದರಿದ್ದೇನೆಯೇ?ನೋ.

ಶ್ರೀ ಕೆ.ಆರ್.ರಮೇಶ್‌ಕುಮಾರ್: At least ಇಷ್ಟು ಗಾಬರಿಯಾಗಿದ್ದೀರಿ. FIR ಗೆ ಹೆದರಿದ್ದಾರೆ. ನನ್ನ ಮೇಲೆ ಆ double murder case. ಅದು ಎಷ್ಟು ದಿವಸಗಳಾದ ಮೇಲೆ, murder ಆಗಿ ಒಂದು ವರ್ಷ ಎಂಟು ತಿಂಗಳಿಗೆ. ಇದೇನಿದು? ಇವೆಲ್ಲಾ ಮಾಡುತ್ತಾರೆ, ಅದಕ್ಕಾಗಿ ಕೆಲವರು ಇರುತ್ತಾರೆ. ಅವರು ಹೇಳಿದ ಹಾಗೆ ನಾವು ಹುಷಾರಾಗಿರಬೇಕು. ಏಕೆಂದರೆ, ಇದು ರಿಸರ್ವ್ ಆಗಬಹುದಲ್ಲವೆ?

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ): ಮಾನ್ಯ ಉಪಾಧ್ಯಕ್ಷರೆ, ನಾನು ಪೋಲೀಸ್‌ನವರು ಕೇಸ್ ಹಾಕುತ್ತಾರೆಂದು ಹೆದರಿಕೊಳ್ಳುವವನು ಅಲ್ಲ. ಆದರೆ ನಿರಪರಾಧಿಯಾಗಿ ಕೋರ್ಟಿಗೆ ಹೋಗುವುದಕ್ಕೆ ಹೆದರಿಕೆಯಾಗಬಹುದಷ್ಟೇ. ಮಾನ ಮರ್ಯಾದೆ ಇರುವವರು ಸುಮ್ಮ ಸುಮ್ಮನೆ ಕೋರ್ಟಿಗೆ ಹೋಗಬೇಕಲ್ಲ. ತಪ್ಪು ಮಾಡಿಬಿಟ್ಟು ಕೋರ್ಟಿಗೆ ಹೋದರೆ," ಆಯಿತಪ್ಪಾ ತಪ್ಪು ಮಾಡಿದ್ದೆ ಕೋರ್ಟಿಗೆ ಹೋಗೋಣ" ಎಂದು ಹೇಳಬಹುದು. ನಿರಪರಾಧಿಗಳಾಗಿ ಕೋರ್ಟಿಗೆ ಹೋಗಿ ನಿಂತುಕೊಳ್ಳಬೇಕಲ್ಲಾ? ಅದಕ್ಕಾಗಿ ಮಾನ ಮರ್ಯಾದೆಯಿರುವವರು ಹೆದರಿಕೊಳ್ಳುತ್ತಾರೆಯೇ ಹೊರತು ಬೇರೆ ಯಾವುದಕ್ಕೂ ಕೂಡ ಹೆದರಿಕೊಳ್ಳುವುದು ಇಲ್ಲ. ಪೊಲೀಸ್‌ನವರಿಗೆ ಹೆದರಿಕೊಂಡು ರಾಜಕೀಯ ಮಾಡುವುದಕ್ಕಾಗುವುದಿಲ್ಲ. ನಾವು ಹಿಂದೆ ಎಲ್ಲಾ ಹೋಗಿದ್ದೇವೆ. it is a very petty matter according to me. ಸರ್ಕಾರ ಇಲ್ಲಿ ಏನು ಹೇಳಿಕೆಯನ್ನು ಕೊಡುತ್ತದೆ, ಅದಕ್ಕೆ ಬದ್ಧತೆ ಇರಬೇಕಲ್ಲವೇ? ಜನಗಳು ನಗುವುದಿಲ್ಲವೇ DY.SP ಆಫೀಸಿನಲ್ಲಿಯೇ ಮುಂದುವರಿಯುತ್ತಾನೆಂದರೆ, ನಿಮ್ಮ ಬಗ್ಗೆ ಜನರು ನಗುತ್ತಾರೆ ನನ್ನದೇನು ಇಲ್ಲ. ಇವರು ಅಸೆಂಬ್ಲಿಯಲ್ಲಿ ಹೇಳಿಕೆಯನ್ನು ಕೊಟ್ಟಿರುವುದಕ್ಕೆ ಮರ್ಯಾದೆ ಇಲ್ಲವೆಂದರೆ ಜನರು ನಗುತ್ತಾರೆ. ಅಧಿಕಾರಿಗಳು ಇವರ ಮಾತನ್ನು ಕೇಳುವುದಿಲ್ಲವೆಂದು ನಗುತ್ತಾರೆ. My point is, 1955 ಕೋಟಿ ರೂಪಾಯಿಗಳನ್ನು ಇವತ್ತು ಕೇಳುತ್ತಿದ್ದಾರಲ್ಲಾ, ಮತ್ತೆ it is again an additional burden Already 5000 ಕೋಟಿ ರೂಪಾಯಿಗಳಷ್ಟು additional burden ಇದೆ. ಅದಕ್ಕಾಗಿ ಇವರು resources ಹೇಗೆ ಮಾಡಿಕೊಳ್ಳುತ್ತೇವೆಂದು ಹೇಳುತ್ತಿಲ್ಲ. ಮತ್ತೆ it is again, ಇನ್ನು 2000 ಕೋಟಿ ರೂಪಾಯಿಗಳು burden ಆಗುತ್ತದೆ. ಈ ತರಹ ಆದರೆ ರಾಜ್ಯದ

ಪರಿಸ್ಥಿತಿ ಏನಾಗುತ್ತದೆ? Finance ಏನಾಗುತ್ತದೆ? ಇವರು plan size reach ಆಗುವುದಕ್ಕಾಗುತ್ತದೆಯೇ? ಎಲ್ಲಾ ಕಾರ್ಯಕ್ರಮಗಳಿಗೆ ಇವರು ದುಡ್ಡು ಮಾಡುವುದಕ್ಕಾಗುತ್ತದೆಯೇ? ಇದನ್ನಾದರೂ ಮಾಡಿ ಘೋಷಣೆಗಳನ್ನು ಮಾಡಿ ತರಬೇಕಾಗಿತ್ತು. ಆ ಬಡವರ ಮಕ್ಕಳಿಗೆ, ದಲಿತರ ಮಕ್ಕಳಿಗೆ, ಹಿಂದುಳಿದವರ ಮಕ್ಕಳಿಗೆ ಹಾಸ್ಟೆಲ್‌ಗಳಲ್ಲಿ 150 ಕೋಟಿ ರೂ.ಗಳನ್ನು ಜಾಸ್ತಿ ಮಾಡಿ ಎಂದು ಹೇಳಿ. ಅವರ ಫೀ 75 ರೂಪಾಯಿಗಳು ಹಾಸ್ಟೆಲ್‌ಗಳಿಗೆ ಹೋಗದೇ ಇದು 25 ವರ್ಷಗಳಿಂದಲೂ ಕೂಡ ಇದೆ. ಅದನ್ನು ಹೆಚ್ಚು ಮಾಡುತ್ತೇವೆಂದು ಹೇಳಬೇಕು. 25–75–100 ರೂಪಾಯಿಗಳನ್ನು ಹೆಚ್ಚು ಮಾಡುತ್ತೇವೆಂದು ಹೇಳಬೇಕು. ಗಂಗಾಕಲ್ಯಾಣ ಸ್ಕೀಮ್‌ನವರಿಗೆ 1 ಲಕ್ಷಕ್ಕಿಂತ ಹೆಚ್ಚಾದರೆ ನಾವು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ, ಅದನ್ನು ಮಾಡುತ್ತೇವೆಂದು ಹೇಳಬೇಕು. ಅಲ್ಲಿ ದಲಿತರು ಮತ್ತು ಹಿಂದುಳಿದವರು, ಅಲ್ಪಸಂಖ್ಯಾತರು ಇರುವಂತಹದ್ದು. ಮನೆ ಕಟ್ಟುವವರಿಗೆ 11% ಬಡ್ಡಿಯನ್ನು ಹಾಕುತ್ತೇವೆಂದು ಹೇಳಿದ್ದೀರಿ.

ಶ್ರೀ ಹೆಚ್. ಆಂಜನೇಯ: ಸಾರ್ ಅಲ್ಲಿ ಗಂಗಾಕಲ್ಯಾಣದ್ದು ಆಗಿದೆ.

ಶ್ರೀ ಸಿದ್ದರಾಮಯ್ಯ: ಇರಲಿ ತಾವು ಕುಳಿತುಕೊಳ್ಳಿ. ಅದು ಆಗಿದ್ದರೆ ಅದು ನನಗೆ ಗೊತ್ತಿಲ್ಲ. ಆ ಕೆಲಸ ಆಗಿದ್ದರೆ ಸಂತೋಷ. ಅದನ್ನು welcome ಮಾಡೋಣ. ನಾನು ಏನು ಹೇಳುತ್ತೇನೆಂದರೆ, 11% interest ಇದೆ ಮಾನ್ಯ ಯಡಿಯೂರಪ್ಪನವರೆ, ಆಶ್ರಯ ಮನೆಗಳ ಮೇಲೆ ಅವರಿಗೆ 50% ಸಾಲ, 50% ಸಬ್ಸಿಡಿ. ಅದರಲ್ಲಿ 11% ಬಡ್ಡಿ ಇದೆ. ಅದನ್ನು ತಾವು ತೆಗೆದುಹಾಕಿ. 4% ಟ್ಯಾಕ್ಸ್ ಇದೆ ಅದನ್ನು ಸಹ ತೆಗೆದುಹಾಕಿ. ಇದಕ್ಕೆ ತಾವು ದುಡ್ಡು ಮಾಡಿಕೊಳ್ಳುವುದನ್ನು ಬಿಟ್ಟು ಹರದನಹಳ್ಳಿಗೆ, ರಾಮನಗರಕ್ಕೆ ಅದಕ್ಕೆ ಮತ್ತು ಇದಕ್ಕೆ ಕೊಡುತ್ತೇವೆಂದು ಹೇಳಿದರೆ ಇದಕ್ಕೆ ಯಾರೂ ಕೂಡ ಒಪ್ಪಿಗೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ನಾನು ಹಿಂದೆ ಹಣಕಾಸಿನ ಮಂತ್ರಿಯಾಗಿ ನನ್ನ ಲೆಕ್ಕಾಚಾರದ ಪ್ರಕಾರ ನೀವು ದಾರಿಯನ್ನು ತಪ್ಪಿದ್ದೀರಿ. Indiscipline ಪ್ರಾರಂಭವಾಗಿದೆ. ಒಂದು ಸಾರಿ ಈ ತರಹ ಆದರೆ ಅದನ್ನು ಸರಿಪಡಿಸುವುದಕ್ಕೆ ಕಷ್ಟವಾಗುತ್ತದೆ. 11th Finance Commission, 12th Finance Commission, ಕೇಂದ್ರ ಸರ್ಕಾರವು ಈ ಎಲ್ಲಾ problemsಗಳನ್ನು identify ಮಾಡಿ ನಾವೆಲ್ಲರೂ ಕಸರತ್ತು ನಡೆಸಿ ಮಾಡಿದ್ದಕ್ಕಾಗಿ finance ಸರಿಹೋಯಿತು. Incentiveಗಳನ್ನು ಕೊಟ್ಟರು. Debt swap scheme ತೆಗೆದುಕೊಂಡು ಬಂದರು. ಇವೆಲ್ಲವನ್ನು ಮಾಡಿರುವುದರಿಂದ ನಾವು ಕಷ್ಟದಿಂದ

ಪಾರಾದೆವು. ಈಗ ಮತ್ತೆ ಕಷ್ಟಕ್ಕೆ ಹೋಗಬೇಡಿ. ನಾನು ಈ ಕಾರಣಗಳಿಗೋಸ್ಕರವೇ ವಿರೋಧ ಮಾಡುತ್ತೇನೆ. Normally, Supplementary Estimateಗೆ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವರು ಬಹಳ ಅವಾಸ್ತವಿಕವಾಗಿ, indisciline ಕಡೆಗೆ ಹೋಗುತ್ತಿರುವುದರಿಂದ ಇಷ್ಟೊಂದು ಹಣವನ್ನು ಇವರು resources mobilize ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇವರು ಅದನ್ನು ಹೇಗೆ ಮಾಡುತ್ತೇವೆಂದು ಹೇಳದೇ ಇರುವುದರಿಂದ ಇದನ್ನು ನಾವು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ. ಇಷ್ಟೊಂದು ಹಣವನ್ನು ಮಂಜೂರು ಮಾಡುವುದಕ್ಕೆ ಸಾಧ್ಯವೇ ಇಲ್ಲ.

ಉಪಾಧ್ಯಕ್ಷರು: ಮಾನ್ಯ ಸಿಂಧ್ಯಾರವರೆ ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಸಿಂಧ್ಯಾರವರೆ ತಮ್ಮನ್ನು ಕರೆಯುತ್ತಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಪೂರಕ ಅಂದಾಜುಗಳ ಪ್ರತಿವರ್ಷ ಇದು ಬರತಕ್ಕಂತಹದ್ದು. ಅನೇಕ ಪೂರಕ ಅಂದಾಜುಗಳಲ್ಲಿ ಅನೇಕ ಬಾಬುಗಳಿಗೆ ಹಣವನ್ನು ಬಿಡುಗಡೆ ಮಾಡಿಕೊಂಡಿದ್ದಾರೆ. ಈಗ ಅದರಲ್ಲಿ ನನಗನಿಸುತ್ತದೆ, ಈ ಪೋಲಿಸ್ ಇಲಾಖೆಯ ಬಗ್ಗೆ ಅನೇಕರು ಈ ಸಾರಿ ಪೋಲಿಸರ ಬಗ್ಗೆ ಚರ್ಚೆ ಮಾಡಿದ್ದಾರೆ. ಮಾನ್ಯ ರಮೇಶ್‌ಕುಮಾರವರು, ಇವತ್ತು ಮಾನ್ಯ ಸಿದ್ದರಾಮಯ್ಯನವರು ಮಾತನಾಡಿದ್ದಾರೆ. ನಾನು ಸಹ ಮಾತನಾಡಿದ್ದೇನೆ. ASI ಮತ್ತು PSI ಇವರಿಗೆ ಜನವರಿ ತಿಂಗಳಲ್ಲಿ 15 ದಿವಸದ ಸಂಬಳವನ್ನು ಕೊಡುತ್ತಾರೆ. ಅದರ ಬದಲಾಗಿ ಬಹಳ ವರ್ಷದ ಬೇಡಿಕೆಯಾಗಿ 1 ತಿಂಗಳ ಸಂಬಳವನ್ನು ಕೇಳುತ್ತಿದ್ದಾರೆ. ASI ,PSI ಮತ್ತು HC ಗಳ ಮುಂಬಡ್ತಿ ಬಗ್ಗೆ ಸಂಬಂಧಪಟ್ಟ ಕಡತಗಳು ಬಹಳ ದಿನಗಳಿಂದ ಕಸದ ಬುಟ್ಟಿಯಲ್ಲಿವೆ. ಅದನ್ನು ಏನಾದರೂ ಮಾಡಿ ಉಪಮುಖ್ಯಮಂತ್ರಿಯವರು ತರಿಸಿಕೊಂಡು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ 25-30 ವರ್ಷಗಳಿಂದ ಬಡ್ತಿಯನ್ನು ಕೊಟ್ಟಿಲ್ಲ. ಇದನ್ನು ತಾವು ತರಿಸಿಕೊಳ್ಳಿ. ಈ ಬಗ್ಗೆ ಮಾನ್ಯ ಗೃಹ ಸಚಿವರು ಕುಳಿತುಕೊಂಡು ಮಾತನಾಡಿ ಅದರ ಬಗ್ಗೆ ತೀರ್ಮಾನವನ್ನು ಮಾಡಬೇಕು. ಇನ್ನು ಬಹಳ ಪ್ರಾಮುಖ್ಯವಾಗಿ ಈ ತೆಲಗಿ ಕೇಸ್ ಪ್ರಪಂಚದ ಇತಿಹಾಸದಲ್ಲಿಯೇ ಅತಿ ದೊಡ್ಡಕೇಸು. ಇದನ್ನು

ಹಿಡಿದುಕೊಟ್ಟವರು ಯಾರು? ಬೆಳಗಾವಿ ಜಿಲ್ಲೆಯ ಕಿಣೇಕರ್‌ರವರು. ಇವರು ಒಳ್ಳೆಯ ಸಮಾಜ ಸುಧಾರಕರು ಆಗಿದ್ದಾರೆ. ಕಿಣೇಕರ್‌ರವರು ಹಿಡಿದುಕೊಟ್ಟ ಮೇಲೆ ಅವರಿಗೆ ಗೌರವ ಕೊಡುತ್ತೇವೆ. ಪ್ರಶಸ್ತಿನ್ನು ಕೊಡುತ್ತೇವೆಂದು ಹೇಳಿ ಅವರ ಬಗ್ಗೆ ಎಲ್ಲಾ ರೀತಿಯ ಪತ್ರ ವ್ಯವಹಾರಗಳು ಆಗಿ ಇವತ್ತಿನವರೆಗೂ ಅವರಿಗೆ ಒಬ್ಬ ಸಾಮಾನ್ಯ ಗೌರವವನ್ನು ಸೂಚಿಸುವುದಿಲ್ಲ. ಇವರು ಸ್ವಲ್ಪ ಹೆಚ್ಚು ಕಡಿಮೆ ವಿಶ್ವಮಟ್ಟದಲ್ಲಿಯೇ ಬೆಳೆದಿದ್ದಾರೆ, ತೆಲಗಿ ಕೇಸ್, ಇದು ವಿಶ್ವದ ಮಾಧ್ಯಮಗಳಲ್ಲಿಯೂ ಬಂತು. ಯಾರಪ್ಪಾ ಇವರನ್ನು ಹಿಡಿಸಿಕೊಟ್ಟವರೆಂದರೆ ಕಿಣೇಕರ್ ಎಂದು ಹೇಳಿ. ಅವರು ಬೆಳಗಾವಿ ಜಿಲ್ಲೆಯವರಾಗಿದ್ದಾರೆ. ಅವರು ಅಲ್ಲೆಲ್ಲಿ ಅಲೆಯುತ್ತಿದ್ದಾರೆ. ಅವರ ರಕ್ಷಣೆಗೆ ಪೊಲೀಸ್‌ನವರು ಇಬ್ಬರು ಇರುವುದು ಮಾತ್ರ ಬಿಟ್ಟರೆ, ಅವರು ಎಲ್ಲೆಲ್ಲಿಯೂ ಅಲೆಯುತ್ತಿದ್ದಾರೆ. ಅವರಿಗೆ ಏನಾದರೂ ಮಾಡಿ, ಅವರಿಗೆ ಗೌರವ ಸೂಚಿಸುವುದಕ್ಕೆ ಅವರಿಗೆ ಹಣವನ್ನು ಒದಗಿಸಿರುವುದಿಲ್ಲ.

ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಅಧಿಕಾರಿಗಳ ಬಗ್ಗೆ ತಮ್ಮ ಕ್ಷೇತ್ರದ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ಒಬ್ಬ ಡಿವೈಎಸ್‌ಪಿ ಅವರ ಮೇಲೆ ನಡೆದಿರುವಂತಹ ರಾಜಕಾರಣ, ಅವರ ಮೇಲೆ ರಾಜಕೀಯಕ್ಕೋಸ್ಕರ ಹಾಕಿರುವಂತಹ ಮೊಕದ್ದಮೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ನಾವೆಲ್ಲರೂ ಇದ್ದೆವು. ಗೃಹ ಸಚಿವರಿಗೆ ಹೇಳುತ್ತಿದ್ದರು. ಅಲ್ಲಿ ಸಲಹಾ ಸಮಿತಿಯ ಸಭೆಯಲ್ಲೂ ಪ್ರಾಮಾಣಿಕವಾಗಿ ಆ ವ್ಯಕ್ತಿಯನ್ನು ರಜದ ಮೇಲೆ ಕಳುಹಿಸಿ ಎಂದು ಹೇಳಿದರು. ಇತ್ತೀಚಿನ ದಿನಗಳದಲ್ಲಿ ಈಗಾಗಲೇ ಮಾತನಾಡುತ್ತಿದ್ದೆವು, ಜಿ.ವಿ.ಕೆ.ರಾವ್, ರೆಬೆಲ್ಲೋ, ಆ ಕಾಲದಲ್ಲಿ, ಮುಖ್ಯ ಕಾರ್ಯದರ್ಶಿ ಎಂದರೆ ಅವರೆಲ್ಲಾ ಸರ್ಕಾರಕ್ಕೆ ಯಾರೂ ಮಣೆ ಹಾಕುತ್ತಿರಲಿಲ್ಲ, ಸರ್ಕಾರಕ್ಕೆ ನಮಸ್ಕಾರ ಹಾಕುತ್ತಿರಲಿಲ್ಲ. ಮುಖ್ಯಮಂತ್ರಿಗಳು ಹೇಳಿದ ಮಾತನ್ನು ಸಹ ಕೇಳುತ್ತಿರಲಿಲ್ಲ. ಅಂದರೆ ಯಾವುದು ನ್ಯಾಯವಾಗಿದೆ, ಕಾನೂನು ಬದ್ಧವಾಗಿದೆ ಒಂದು ಕಾಲದಲ್ಲಿ ಅದನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ಕೇಳುತ್ತಿದ್ದರು. ಅದನ್ನು ನಾನು ನೋಡಿದ್ದೇನೆ. 1967 ರಿಂದ 1972ರವರೆಗೂ ಮಾನ್ಯ ಹೊರಟ್ಟಿಯವರೆ, ಅಧಿಕಾರಿಗಳು ಪಕ್ಷ ರಹಿತವಾಗಿದ್ದರು. ಆಗ ಜಲಿಂಗಪ್ಪನವರು ಇದ್ದಾಗ, ಬಿ.ಡಿ. ಜತ್ತಿಯವರು ಇದ್ದಾಗ ಪಕ್ಷ ರಹಿತವಾಗಿದ್ದರು. ಈಗ ಪಕ್ಷದ ಕಾರ್ಯಕರ್ತರಾಗಿದ್ದಾರೆ. ಮುಖ್ಯಕಾರ್ಯದರ್ಶಿಯಿಂದ ಹಿಡಿದು ಸಾಮಾನ್ಯದವರೆಗೂ ಅಧಿಕಾರಿಗಳು ಪಕ್ಷದ ಕಾರ್ಯಕರ್ತರಾಗಿದ್ದಾರೆ. ಅದರಲ್ಲಿ ಏನು ಅನುಮಾನಗಳು ಇಲ್ಲ. ಇದು ಸ್ಪಷ್ಟ.

ಶ್ರೀ ಬಸವರಾಜ ಹೊರಟ್ಟಿ: ಇದಕ್ಕೆ ನೀವು ಕಾರಣಗಳನ್ನು ಇಟ್ಟು ಹೇಳಬೇಕು. ಆ ಅಧಿಕಾರಿಗಳಿಗೆ ಯಾವ ರೀತಿಯಾಗಿ ಪರಿಸ್ಥಿತಿ ಏನು ನಿರ್ಮಾಣವಾಗಿದೆ ಎಂಬುದನ್ನು ಸಹ ಹೇಳಬೇಕು.

ಶ್ರೀ ವಾಟಾಳ್ ನಾಗರಾಜು: ತಾವು ಹೇಳುವುದು correct. ಅಂದರೆ ಅದಕ್ಕೆ ಕಾರಣವೇನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಂದರೆ ನೀವು ಅಧಿಕೃತವಾಗಿ ಒಪ್ಪುತ್ತೀರಾ?

ಶ್ರೀ ಬಸವರಾಜ ಹೊರಟ್ಟಿ: ಅನೇಕ ಜನ ಅಧಿಕಾರಿಗಳನ್ನು ಆ ಪರಿಸ್ಥಿತಿಗೆ ತಂದಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹೌದು ಸಾರ್. ಹಾಗಾದರೆ ನೀವು ಅಧಿಕಾರಿಗಳ ಪರವಾಗಿ ಒಪ್ಪುತ್ತಿದ್ದೀರಿ. ಕಾರಣಗಳು ಮಾತ್ರ ಗೊತ್ತಾಗಬೇಕಾಗಿದೆ. ಇವರಿಗೆ ಗೊತ್ತಾಗಿಬಿಟ್ಟಿದೆ. ಪಕ್ಷದ ಕಾರ್ಯಕರ್ತರಾಗಿ ಬಿಟ್ಟಿದ್ದಾರಂತೆ. ಏಕಾಯಿತು ಎಂದು ಕಾರಣಗಳು ಹೇಳಬೇಕಂತೆ. ಕಾರಣಗಳು ನಾವು ಹೇಳಬೇಕು. ಪಕ್ಷದ ಕಾರ್ಯಕರ್ತರು ಇವರಿಗೆ ಬೇಕು.

ಶ್ರೀ ಬಸವರಾಜ ಎಸ್ ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಆ ಅಧಿಕಾರಿಗಳು ಈ ರೀತಿ ಆಗಬೇಕೆಂದರೆ ಯಾವ ಪರಿಸ್ಥಿತಿ ನಿರ್ಮಾಣವಾಗಿದೆಯೆಂಬುದಕ್ಕೆ ಕಾರಣಗಳನ್ನು ಸಹಿತ ನೀವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜು:- Correct. ಅಂದರೆ ಅದಕ್ಕೆ ಕಾರಣವೇನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಅಂದರೆ ಅಧಿಕಾರಿಗಳು ಹಾಗಿದ್ದಾರೆಂದು ನೀವು ಅಧಿಕೃತವಾಗಿ ಒಪ್ಪುತ್ತೀರಿ.

ಶ್ರೀ ಬಸವರಾಜ ಎಸ್ ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಅನೇಕ ಜನ ಅಧಿಕಾರಿಗಳನ್ನು ಆ ಪರಿಸ್ಥಿತಿಗೆ ತಂದಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಹೌದು, ಅದಕ್ಕೆ ಅಧಿಕಾರಿಗಳು ಪಕ್ಷದ ಕಾರ್ಯಕರ್ತರಾಗಿದ್ದಾರೆ, ಅದನ್ನು ನೀವು ಒಪ್ಪುತ್ತಿದ್ದೀರಿ, ಈಗ ಅದಕ್ಕೆ ಕಾರಣಗಳಷ್ಟೇ ಗೊತ್ತಾಗಬೇಕು. ಅಧಿಕಾರಿಗಳು ಪಕ್ಷದ ಕಾರ್ಯಕರ್ತರಾಗಿದ್ದಾರೆಂದು, ಇವರಿಗೆ ಗೊತ್ತಾಗಿಬಿಟ್ಟಿದೆ, ಆದರೆ ಅವರು ಆ ರೀತಿ ಆದರು ಎಂಬುದಕ್ಕೆ ನಾವು

ಕಾರಣಗಳು ಹೇಳಬೇಕು. ಯಾವ ಸರ್ಕಾರದವರೂ ಆಗಲಿ, ನಾನು ನಿಮ್ಮ ಸರ್ಕಾರ ಎಂದು ಹೇಳಿಲ್ಲ.

ಶ್ರೀ ಬಸವರಾಜ ಎಸ್ ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಪಕ್ಷದ ಕಾರ್ಯಕರ್ತರಾಗಿದ್ದಾರೆಂದರೆ, ಯಾವ್ಯಾವ ಸರ್ಕಾರ ಬಂದಿರುತ್ತವೆ, ಆಯಾಯ ಸರ್ಕಾರದಂತೆ ಪರಿಸ್ಥಿತಿ ನಿರ್ಮಾಣವಾಗಿದೆಯೆಂದು ಹೇಳಿದೆ.

ಉಪಾಧ್ಯಕ್ಷರು:- ಶ್ರೀರಾಮರೆಡ್ಡಿಯವರೇ ಏತಕ್ಕೆ ಸುಮ್ಮನೆ ಚರ್ಚೆ, ಸುಮ್ಮನೆ ಅದನ್ನೇ ಮಾತನಾಡಬೇಡಿ. ಬಿಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಅಂದರೆ ನಿಮ್ಮ ಲೆಕ್ಕದಲ್ಲಿ 1972 ನಂತರ ಬಂದಂಥ ಎಲ್ಲಾ ಸರ್ಕಾರಗಳು ಹಾಗೇ ಆಗಿದ್ದಾರೆ. ಅದಕ್ಕೆ ಕಾರಣವನ್ನು ನಾವು ಹೇಳಬೇಕು.

ಶ್ರೀ ಬಸವರಾಜ ಎಸ್ ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಹೆಚ್ಚು ಕಡಿಮೆ ಹಾಗೆ ಆಗಿದೆ

ಶ್ರೀ ವಾಟಾಳ್ ನಾಗರಾಜ್:- ನಾನು ಅಧಿಕಾರಿಗಳನ್ನು ವೈಯಕ್ತಿಕವಾಗಿ ದೂಷಣೆ ಮಾಡುತ್ತಿಲ್ಲ. ನಾನು ಅದಕ್ಕೆ ಒಪ್ಪಿದೆ. ಪರಿಸ್ಥಿತಿ ಹಾಗಿದೆ.

(ಗೊಂದಲ)

ಶ್ರೀ ಹೆಚ್.ಆಂಜನೇಯ:- ಈಗ ಒಂದು ಪಕ್ಷದ ಕಾರ್ಯಕರ್ತರಾಗಿ ಅಧಿಕಾರಿಗಳು ಇದ್ದಾರೆಂದು ಅವರ ನೈತಿಕ ಬಲವನ್ನು ಕುಗ್ಗಿಸಬೇಡಿ, ಅದು ಹೇಗಾಗುತ್ತದೆ? ಯಾವುದೋ ಪಕ್ಷದ ಕಾರ್ಯಕರ್ತರು ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್:- ಈಗ ನಡೆಯುತ್ತಿರುವುದು ಸತ್ಯವಲ್ಲವೇ, ಸತ್ಯವನ್ನು ಮುಚ್ಚಿಡಲಿಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಬಸವರಾಜ ಎಸ್ ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-ಈಗ ನಾವು honest ಆಗಿ ಮಾತನಾಡಬೇಕಾಗುತ್ತದೆ. ಏನೆಂದರೆ ಯಾವುದೇ ಸರ್ಕಾರ ಬರಲಿ, ಆ ಸರ್ಕಾರದ ಒತ್ತಡಕ್ಕೆ ಒಂದೊಂದು ಸಾರಿ ಅವರ ಪರಿಸ್ಥಿತಿ ಅವರ conscienceಗೆ ವಿರುದ್ಧವಾಗಿ ಪಕ್ಷದ ಕಾರ್ಯಕರ್ತರಾಗಿ ಕೆಲಸ ಮಾಡುತ್ತಾರೆಂಬ ಭಾವನೆ ಎಲ್ಲಾ ಸರ್ಕಾರಗಳಲ್ಲಿದೆಯೆಂದು ನಾನು ಹೇಳಿದ್ದೇನೆ. ಅದನ್ನೆ ಮತ್ತೆ, ಗೊತ್ತಿದೆ ಅಂದ ಮೇಲೂ ಪುನಃ ಏಕೆ ಅದನ್ನು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ಇವತ್ತಿನ ಪರಿಸ್ಥಿತಿ ಆ ರೀತಿ ಹೇಳುತ್ತಿದೆ. ಇದಕ್ಕೆ ಕಾರಣ ನಾವೇ ರಾಜಕಾರಣಿಗಳು, ನಮ್ಮಲ್ಲಿ ಯಾವ್ಯಾವ ಸರ್ಕಾರ ಬರುತ್ತದೆ? ಯಾರ್‍ಯಾರು ಆಡಳಿತಕ್ಕೆ ಬರತ್ತೇವೆ, ನಾವು ಆ ಮಟ್ಟದಲ್ಲಿ ಅಧಿಕಾರಿಗಳ ದಕ್ಷತೆಯನ್ನು ಗುರುತಿಸಿದ್ದೇವೆ, ಅವರ ಸ್ಥೈರ್ಯವನ್ನು ಗುರುತಿಸಿದ್ದೇವೆ. ಮಾನಸಿಕವಾಗಿ ಅವರನ್ನು ಅಧಃ ಪತನಕ್ಕೆ ತಳ್ಳಿದ್ದೇವೆ. ಆದ್ದರಿಂದ ಪರಿಸ್ಥಿತಿ ಅಲ್ಲಿಗೆ ಬಂದಿದೆ. ಅದರಲ್ಲೇನು ಬೇರೆ ಮಾತಿಲ್ಲ. ಪಕ್ಷದ ಒಂದು ಕಾರ್ಯಾಲಯದಲ್ಲಿ ಆಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಅಧ್ಯಕ್ಷರೇ, ನಿಜಲಿಂಗಪ್ಪನವರ ಸ್ಮಾರಕಕ್ಕೆ 1.00 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಅದು ರಾಷ್ಟ್ರೀಯ ಸ್ಮಾರಕವಾಗಬೇಕು. ನಿಜಲಿಂಗಪ್ಪನವರು ಈ ದೇಶದ ಮಹಾನ್ ವ್ಯಕ್ತಿ. ಅದರಲ್ಲಿ ಎರಡನೆ ಅಭಿಪ್ರಾಯವಿಲ್ಲ. ನಾವೆಲ್ಲಾ ಇಲ್ಲಿ ಕುಳಿತಿರಬೇಕಾದರೆ, ಕರ್ನಾಟಕದ ಏಕೀಕರಣವಾಗಬೇಕಾದರೆ, ಕರ್ನಾಟಕ ಏಕೀಕರಣಕ್ಕೆ ತ್ಯಾಗ ಮಾಡಿದವರು, ಏಕೀಕರಣ ಆಗುವವರೆಗೂ ಅಧಿಕಾರಕ್ಕೆ ಒಪ್ಪಿದವರು. ಅಂಥ ಮಹನೀಯರ ರಾಷ್ಟ್ರೀಯ ಸ್ಮಾರಕ ಆಗಬೇಕು. ನನಗೆ ಗೊತ್ತಿರುವಂತೆ ಬೆಂಗಳೂರಿನಲ್ಲಿ ಅವರದೇ ಒಂದು ನಿವೇಶನವಿಲ್ಲ. ಇದು ಅವರ ಆದರ್ಶವಾಗಿದೆ. ಅವರ ಕೊನೆಯ ದಿನಗಳಲ್ಲಿ ಅವರನ್ನು ಅನಾರೋಗ್ಯದ ಕಾರಣ ಬೌರಿಂಗ್ ಆಸ್ಪತ್ರೆಗೆ ಸೇರಿಸಿದಾಗ ನನ್ನ ಕೊನೆಯ ದಿನವನ್ನು ನನ್ನ ಸ್ವಂತ ಊರಿನಲ್ಲಿ ಕಳೆಯುತ್ತೇನೆಂದು ಬದುಕಿದ್ದಾಗಲೇ ಚಿತ್ರದುರ್ಗಕ್ಕೆ ಹೊರಟು ಹೋದರು. ಚಿತ್ರದುರ್ಗದಲ್ಲಿ ಕೆಲವರು ಅಭಿಮಾನಗಳು ಸೇರಿ ಒಂದು ಸ್ಮಾರಕವನ್ನು ಅವರ ಸಮಾಧಿ ಬಳಿ ಮಾಡಿದ್ದಾರೆ. ನಾನೇನು ಹೇಳುತ್ತೇನೆಂದರೆ ಯಡಿಯೂರಪ್ಪನವರೇ, ನಾವೆಲ್ಲಾ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗೋಣ. ಸ್ಥಳ ನೋಡಿ, ಅಲ್ಲಿ ನಿಜಲಿಂಗಪ್ಪನವರ ಸ್ಮಾರಕ, ಅದು ಇಡೀ ರಾಷ್ಟ್ರೀಯ ಸ್ಮಾರಕವಾಗಬೇಕು. ಅದಲ್ಲದೆ ಅಲ್ಲಿ ಲೋಕಸಭೆಯಲ್ಲಿ ಅವರ ಭಾವಚಿತ್ರ ಇರಬೇಕು. ಲೋಕಸಭೆಯಲ್ಲಿ ತಮಿಳುನಾಡು,

ಆಂಧ್ರದ ಮುಖಂಡರುಗಳ ಭಾವಚಿತ್ರ ಇದೆ. ಅದೇರೀತಿ ಕೆಂಗಲ್ ಹನುಮಂತಯ್ಯನವರದು ರಸ್ತೆಯಲ್ಲಿ ಹೋಗುವಾಗ ಅವರ ಸಮಾಧಿ, ಕಲ್ಲಳ್ಳಿಯಲ್ಲಿ ದೇವರಾಜ್ ಅರಸುರವರದು ಇದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅವರೆಲ್ಲರೂ ಈ ರಾಜ್ಯಕ್ಕೋಸ್ಕರವಾಗಿ ತ್ಯಾಗ ಮಾಡಿದಂಥ, ದುಡಿದಂಥ ಜನ. ಅವರ ಬಗ್ಗೆ ತಾವು ಗಮನ ಕೊಡಬೇಕು. ಇದನ್ನು ಏಕೆ ಹೇಳುತ್ತೇನೆಂದರೆ, ಮುಂದಿನ ಎಷ್ಟು ದಿನಗಳಲ್ಲಿ ನಿಮಗೆ ಅಧಿಕಾರ ಇರುತ್ತದೋ ಇಲ್ಲವೋ ಅದರ ಪ್ರಶ್ನೆ ಬೇರೆ. ಅದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿಲ್ಲ. ಹಾಗಾಗಿ ಈ ಅಂದಾಜುಗಳನ್ನು ನೀವು ಸರ್ಕಾರಕ್ಕೆ ಪಡೆದ ನಂತರ ಪ್ರಾಮಾಣಿಕವಾಗಿ ಒಂದು ವಾರ ಬಿಟ್ಟುಕೊಂಡು ನೀವೆಲ್ಲಾ ಸ್ವಲ್ಪ ಏನೇನು ಹೇಳಿದ್ದೀರಿ, ಏನೇನು ಮಾಡಬೇಕೆಂದಿದ್ದೀರಿ, ಸ್ಮಾರಕಗಳ ಪಟ್ಟಿಯನ್ನು ಕೊಟ್ಟಿದ್ದೀರಿ, ಇದನ್ನೆಲ್ಲಾ ಬಹಳಷ್ಟು ಬೇಗ ಮುಗಿಸುವುದು ಒಳ್ಳೆಯದು. ಡಾ: ರಾಜ್‌ಕುಮಾರ್‌ರವರ ಸ್ಮಾರಕದ ಸಲುವಾಗಿ ಸಹ 3.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. ಒಂದು ವರ್ಷ ಆಯಿತು, ಈಗ ಮಾಡಿದ್ದೀರಿ. ಆದರ ಬಗ್ಗೆ ಸ್ಮಾರಕ ಬೇಗ ಮಾಡುವುದಾಗಿ ಸ್ಪಷ್ಟವಾಗಿ, ನೇರವಾಗಿ ಎಷ್ಟು ಬೇಗನೆ ಮಾಡುತ್ತೀರೆಂದು ಹೇಳುವುದು ತಮ್ಮ ಕರ್ತವ್ಯ. ಇದರೊಂದಿಗೆ ಬೆಂಗಳೂರಿನಲ್ಲಿ ದೆಹಲಿಯುಲ್ಲಿರುವ ರಾಜ್‌ಘಾಟ್ ಮಾದರಿಯಲ್ಲಿ ಕನಿಷ್ಟ ನೂರು ಎಕರೆ ಪ್ರದೇಶವನ್ನು ಬೆಂಗಳೂರಿನಲ್ಲಿ ಪಡೆದು ಕರ್ನಾಟಕ ಏಕೀಕರಣಕ್ಕೋಸ್ಕರ ತ್ಯಾಗ ಮಾಡಿದಂಥ ನಿಜಲಿಂಗಪ್ಪನವರು ಸೇರಿದಂತೆ ಅನೇಕರ ಸ್ಮಾರಕಗಳು ಕರ್ನಾಟಕ ರಾಜಧಾನಿಯಲ್ಲಿ ನಿರ್ಮಾಣವಾಬೇಕು. ಅದರ ಬಗ್ಗೆ ಕೂಡ ತಾವು ಚಿಂತನೆ ಮಾಡಬೇಕು. 1.00,2.00 ಕೋಟಿ ರೂ.ಗಳನ್ನು ಕೊಡುವುದರ ಬದಲು ಕರ್ನಾಟಕ ರಾಜಧಾನಿಯಲ್ಲಿ ಅದಕ್ಕೆ ಪ್ರಾಮುಖ್ಯತೆ ಕೊಡಬೇಕಾದುದು ತಮ್ಮ ಕರ್ತವ್ಯ. ತಾವು ಬೂಕನಕೆರೆಗೆ ಕೊಟ್ಟಿದ್ದೀರಿ ಸಂತೋಷ, ನಮ್ಮದೇನು ಅಭ್ಯಂತರವಿಲ್ಲ, ಆದರೆ ನಮಗೂ ನೀವು ಕೊಡಬೇಕಾಗಿತ್ತು. ಬೂಕನಕೆರೆ ತಮ್ಮ ಜನ್ಮ ಸ್ಥಳ, ನಜಕ್ಕೂ ಅದನ್ನು ನೆನಪಲ್ಲಿ ಇಟ್ಟುಕೊಂಡು ಕೊಟ್ಟಿದ್ದೀರಿ. ಅದೇ ರೀತಿ ನಮ್ಮ ಕ್ಷೇತ್ರಗಳಿಗೂ ಆದ್ಯತೆ ಕೊಡಬೇಕು, ಆದರೆ ನಿಮ್ಮ ಮೈತ್ರಿ ಸರ್ಕಾರ ಬಂದ ಮೇಲೆ ನೀವು ಕೆಲವರಷ್ಟೇ ಹಂಚಿಕೊಳ್ಳುತ್ತಿದ್ದೀರಿ. ನಿಮ್ಮ ಆತ್ಮವನ್ನು ಮುಟ್ಟಿಕೊಂಡು ನೋಡಿ, ಇದು ನಮಗೆ ಸರಿಯೇ? ಇದು ನ್ಯಾಯವೇ? ನಾವೆಲ್ಲರೂ ಇಲ್ಲಿ ಸದಸ್ಯರಲ್ಲವೇ? ನಾವೇನು ಹೋರಾಟ ಮಾಡಿಲ್ಲವೇ? ನಮ್ಮ ನಮ್ಮ ಕ್ಷೇತ್ರಗಳಿಂದ ಬಂದಿಲ್ಲವೇ? ಆದ್ದರಿಂದ ಪಕ್ಷರಹಿತವಾಗಿ ನೀವು ಮಾಡಬೇಕಾದುದು ನಿಮ್ಮ ಕರ್ತವ್ಯ. ಈಗ ಆರಾಧನಾ ಸಮಿತಿ, ನಮ್ಮ ಮುಜರಾಯಿ ಮಂತ್ರಿಗಳು ಕೇಳಬೇಕು. ಆರಾಧನಾ

ಸಮಿತಿ ಮಾಡಿಲ್ಲ, ಏನು ನೀವು ನಿಮ್ಮ ದೇವರುಗಳಿಗೆ ಅನುಕೂಲ ಮಾಡಕೊಡಬೇಕೆಂದಿರುವಿರಾ? ಇದರಲ್ಲಿಯೂ ಮೈತ್ರಿ ಧರ್ಮವೇ ನಿಮ್ಮದು. ನಮ್ಮ ದೇವರುಗಳಿಗೇನೂ ಬೇಡವೇ? ನಮ್ಮ ಕಾಂಗ್ರೆಸ್ ಪಕ್ಷದವರು ಇರಬಹುದು, ನಾವಿರಬಹುದು. ಬೇರೆ ವಿರೋಧ ಪಕ್ಷದವರಿರಬಹುದು, ಇದನ್ನು ನೀವು ಕಡೆಗಣಿಸುವಂಥಾದ್ದು ಸರಿಯೇ? ದೇವರುಗಳಲ್ಲಿ ಪಕ್ಷಭೇದ ಏತಕ್ಕೆ ಮಾಡಬೇಕು? ದೇವರುಗಳ ಬಗ್ಗೆ ನಿಮ್ಮಲ್ಲಿ ಮೈತ್ರಿ ಸರ್ಕಾರ ಹೇಗೆ ತೀರ್ಮಾನ ತೆಗೆದುಕೊಳ್ಳಬೇಕು. ಪ್ರಾಮಾಣಿಕವಾಗಿ ಎಷ್ಟು ದಿವಸ ಆಯಿತು ನೀವು ಆರಾಧನಾ ಸಮಿತಿ ಮಾಡಿ?. ಏತಕ್ಕೆ ನೀವು ಆರಾಧನಾ ಸಮಿತಿಯನ್ನು ಮಾಡಿಲ್ಲ? ನಿಮ್ಮ ಕಾರ್ಯಾಲಯಕ್ಕೆ ದೇವರುಗಳ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ? ಏತಕ್ಕೆ ಅದನ್ನು ವಿಲೇವಾರಿ ಮಾಡಿಲ್ಲ. ಇದರ ಉದ್ದೇಶ ಏನು? ಕಾರಣವೇನು? ಇದು ಒಳ್ಳೆಯ ಸೂಚನೆಯಲ್ಲ, ಸರಿಯಾದ ಕ್ರಮವಲ್ಲವೆಂದು ಹೇಳಿ ನಾನು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ SDMC ಸಮಿತಿ ಬಗ್ಗೆ ತರಬಯಸುತ್ತೇನೆ, ಯಾರೂ ಶಾಲಾ ಕಟ್ಟಡಗಳಿಗೆ ದಾನವನ್ನು ಕೊಡುತ್ತಾರೆ, ಬಸವರಾಜ ಹೊರಟ್ಟಿಯವರೇ ಸ್ವಲ್ಪ ಕೇಳಬೇಕು, ತಮಗೆ ಸಂಬಂಧಪಟ್ಟಿದ್ದು. SDMC ಸಮಿತಿಯಲ್ಲಿ ಹೀಗೆ ದಾನ ಕೊಟ್ಟವರಿಗೆ ಯಾವುದಾದರೂ ಗೌರವ ಸ್ಥಾನವನ್ನು ಕೊಡಬೇಕಲ್ಲವೇ? ಯಾರಾದರೂ ಆಗಿರಲಿ, ಇಡೀ ಕರ್ನಾಟಕ ರಾಜ್ಯದಲ್ಲಿ ತಂದೆ ತಾಯಿಯವರ ಹೆಸರಿನಲ್ಲಿ, ಇನ್ನೊಬ್ಬರ ಹೆಸರಿನಲ್ಲಿ ಬೇರೆಯವರು ದಾನ ಕೊಟ್ಟಿರುತ್ತಾರೆ, ಅವರಿಗೆ ಆ SDMC ಸಮಿತಿಯಲ್ಲಿ ಅವರ ಹೆಸರಿನಲ್ಲಿ ಒಂದು ಗೌರವಾಧ್ಯಕ್ಷರು ಅಥವಾ ಸಲಹೆಗಾರರೋ ಅಥವಾ ಸದಸ್ಯರೋ ಏನಾದರೂ ಮಾಡಬೇಕಲ್ಲವೇ. ಅದನ್ನು ನೀವು ಮಾಡುವುದರಿಂದ ಇಡೀ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಾನ ಮಾಡಲಿಕ್ಕೆ, ಕಟ್ಟಡ ಕಟ್ಟಿಸಲಿಕ್ಕೆ ದಾನಿಗಳು ಬಹಳ ಜನ ಬರುತ್ತಾರೆ, ನೀವು ಏನು ಮಾಡಬೇಕು, ಕನಿಷ್ಠ ಅವರಿಗೆ ಒಂದು ಗೌರವ ಸ್ಥಾನ ಕೊಡಬೇಕು, ಯಾರೇ ದಾನವನ್ನು ಕೊಡಲಿ, ಅವರಿಗೆ ನಾವು SDMC ಯಲ್ಲಿ ಒಂದು ಗೌರವ ಸ್ಥಾನವನ್ನು ಕೊಡುತ್ತೇವೆಂದರೆ ಅವರಿಗೆ ಒಂದು ಶಕ್ತಿ ಬರುತ್ತದೆ.

ಶ್ರೀ ಬಸವರಾಜ್ ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಅದರಂತೆ ಅದನ್ನು ತಕ್ಷಣ ಮಾಡುತ್ತೇವೆ. ದಾನ ಕೊಟ್ಟಂಥವರ ಹೆಸರನ್ನು ಆ SDMC ಸಮಿತಿಯಲ್ಲಿ ಸೇರಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್:- ದಾನ ಕೊಟ್ಟವರನ್ನು ಅಧ್ಯಕ್ಷರನ್ನಾಗಿ ಮಾಡಿ. ಹೆಸರು ಹಾಕಬೇಡಿ.

(ಗೊಂದಲ)

ಶ್ರೀ ಬಸವರಾಜ್ ಎಸ್.ಹೊರಟ್ಟಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-ಅಧ್ಯಕ್ಷರೇ, ಈಗೇನಾಗಿದೆಯೆಂದರೆ, ಶಾಲೆಯಲ್ಲಿ ಓದುತ್ತಿರುವ ಮಕ್ಕಳ ತಂದೆ ತಾಯಿ ಆಗಿರಬೇಕು ಎಂದು ಕಾನೂನನಲ್ಲಿದೆ. ಹಾಗಾಗಿ ವಾಟಾಳ್ ನಾಗರಾಜ್‌ರವರು ಹೇಳಿದಂತೆ ದಾನಿಗಳನ್ನು ಖಾಯಂ ಸದಸ್ಯರನ್ನಾಗಿ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್:- ತಾವು ದಯವಿಟ್ಟು ಇದರ ಬಗ್ಗೆ ಆದೇಶವನ್ನು ಹೊರಡಿಸಿ ತಾವು ಆದೇಶವನ್ನು ಹೊರಡಿಸಿದರೆ ಅನುಕೂಲವಾಗುತ್ತದೆ. ಯಡಿಯೂರಪ್ಪನವರೇ ಇದೊಂದು ಒಳ್ಳೆಯ ಸೂಚನೆ, ನೀವು ಯಾವುದೇ ರೀತಿಯ ತಾರತಮ್ಯವನ್ನು ಯಾವಾಗಲೂ ಮಾಡಬೇಡಿ. ಈಗಾಗಲೇ ತಾರತಮ್ಯ ಆಗಿಹೋಗಿದೆ, ರಾಮನಗರ, ಚಿಕ್ಕಬಳ್ಳಾಪುರ ಇವೆರಡು ಜಿಲ್ಲೆಗಳಲ್ಲಿ ಆದವು, ನನಗೆ ಅರ್ಥವಾಗಲಿಲ್ಲ, ತಾವು ಮಾಡಿ ಒಪ್ಪುತ್ತೇವೆ. ಇದಕ್ಕೆ ನಮ್ಮ ವಿರೋಧವೇನಲ್ಲ. ನೀವು ಮಾಡಿ, ನಾವು ಒಪ್ಪುತ್ತೇವೆ. ನಮ್ಮದು ವಿರೋಧ ಇಲ್ಲ. ರಾಮ ನಗರಕ್ಕೆ ಆಗಲಿ ಬೇರೆಯದಕ್ಕೆ ವಿರೋಧ ಇಲ್ಲ. ಸರಾಸರಿಯಲ್ಲಿ ರಾತ್ರೋರಾತ್ರಿ ಜಿಲ್ಲೆ, ರಾತ್ರೋರಾತ್ರಿ ನಿಮಗೆ ಇಚ್ಛೆ ಬಂದ ಹಾಗೆ ಮಾಡಿದಿರಿ. ಇದೇನು ಸಚಿವ ಸಂಪುಟದ ಸಭೆಯಲ್ಲಿ ಅಥವಾ ನಿಮ್ಮ ಪಕ್ಷದ ಸಭೆಯಲ್ಲಿ ಅದಕ್ಕೆ ಇದಕ್ಕೇ ಆದ ತಜ್ಞರ ಸಮಿತಿ, ರಾಜ್ಯದ ತಿಳುವಳಿಕೆ, ರಾಜ್ಯದ ಚಿಂತೆನೆ ಏನೂ ಇಲ್ಲವೇ ಇದಕ್ಕೆ? ಯಾರೂ ಹೇಳುವವರು, ಕೇಳುವವರು ಇಲ್ಲವಾ ಇದಕ್ಕೆ? ಇದೇ ಮೈತ್ರಿ ಧರ್ಮವಾ? ಇದನ್ನೇ ಮೈತ್ರಿ ಧರ್ಮ ಎಂದು ಹೇಳುತ್ತೀರಾ? ಮಾನ್ಯ ಯಡಿಯೂರಪ್ಪನವರೇ ಹೇಳಿ. ಈ ಕಡೆ ತಾವು ಕುಳಿತಿದ್ದಿರಿ. ನಿಮ್ಮ ಬಗ್ಗೆ ಎಷ್ಟು ಗೌರವ. ನೀವು ಏಕೆ ಮೌನ ಆಗಿದ್ದೀರಿ. ಮೌನ ಏಕೆ? ಮೌನ ಮುರಿಯಿರಿ. ಹೊರಗಡೆ ಬನ್ನಿ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಅವರು ಮೌನವಾಗಿರುವುದು ನೀವು ಮೌನವಾಗಿಲ್ಲ ಎಂದು.

ಶ್ರೀ ವಾಟಾಳ್ ನಾಗರಾಜ್:- ಇಲ್ಲ.ಇಲ್ಲ. ನೀವು ಹೊರಗಡೆ ಬನ್ನಿ. ಏಕೆಂದರೆ ಇವೆಲ್ಲ ಬರುತ್ತವೆ, ಹೋಗುತ್ತವೆ. ಅಧಿಕಾರಕ್ಕೋಸ್ಕರವಾಗಿ ನಿಮಗೆ

ಒಂದು ವಿಚಾರ ಹೇಳುತ್ತೇನೆ. ಅಧಿಕಾರಕ್ಕಿಂತ ಭದ್ರವಾಗಿ ಆ ಕಡೆ ಚಿತ್ರ ನೋಡಿ. ಶ್ರೀ ಕೆಂಗಲ್ ಹನುಮಂತಯ್ಯನವರ ಚಿತ್ರ ಇದೆ. ಅವರು ಒಳಗಡೆ ಬರಲಿಕ್ಕೆ ಆಗಲಿಲ್ಲ. ಹೆದರಬೇಕಾಗಿಲ್ಲ. ಯಾವುದು ಇದೆ, ಹೇಳಿ. ಪ್ರಾಮಾಣಿಕವಾಗಿ ನೀವು ಹೊರಗಡೆ ಬನ್ನಿ. ಅದರಲ್ಲಿ ಏನಾಗುತ್ತದೆ? ನೋಡೋಣ. ಎಲ್ಲಿಗೆ ತಲುಪುತ್ತದೆ ಏಕೆ? ಏನು ಇದಕ್ಕೋಸ್ಕರನೇ ಅಂತಲಾ? ಇಲ್ಲದಾಗ ಎಷ್ಟು ಶಕ್ತಿಯುತವಾಗಿ ಭದ್ರವಾಗಿ ಮಾತನಾಡುತ್ತಿದ್ದಿರಿ, ವಿರೋಧ ಪಕ್ಷದ ನಾಯಕರಾಗಿ ಮಾತನಾಡುತ್ತಿದ್ದಿರಿ.

ಡಾ: ಕೆ. ಅನ್ನದಾನಿ:- ಏನು subject ಮಾತನಾಡುತ್ತಿದ್ದರೆಂದು ನಮಗೆ ಅರ್ಥ ಆಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ವಾರಸುದಾರರು ಇಲ್ಲ ಎಂದು ತಿಳಿದಿದ್ದೆವು.

ಡಾ:ಕೆ. ಅನ್ನದಾನಿ:- ಸಾರ್, ತಮ್ಮ subject ನಮಗೆ ಅರ್ಥ ಆಗುತ್ತಿಲ್ಲ. ಅದಕ್ಕೇ ಕೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ ಮುಗಿಸಿ ಬಿಡುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ನಾಗರಾಜ್ ಅವರೇ ಬೇಗ ಮುಗಿಸಿ. ಮುಗಿಸಿ ಎಂದರೆ ಏನು ಈ ತರಹ?

ಶ್ರೀ ವಾಟಾಳ್ ನಾಗರಾಜ್:- ಮುಂದಿನ ದಿನಗಳಲ್ಲಿ ರಾಜಕೀಯ ಯಾವ ಯಾವ ದಿಕ್ಕಿಗೆ ತಲುಪುತ್ತದೋ ಗೊತ್ತಿಲ್ಲ. ಎಲ್ಲೆಲ್ಲಿ ತಲುಪುತ್ತದೋ? ಯಾವ ಹಂತಕ್ಕೆ ತಲುಪುತ್ತದೋ ಗೊತ್ತಿಲ್ಲ. ಆದ್ದರಿಂದ ನಾನು ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತೇನೆ. ಅನೇಕ ಕಾರ್ಯಕ್ರಮಗಳನ್ನು ತಾರತಮ್ಯ ಇಲ್ಲದೇ ಯಾವ್ಯಾವ ಕ್ಷೇತ್ರಗಳಿಗೆ ಏನೇನು ಅನುಕೂಲಗಳು ಬೇಕು ಎನ್ನತಕ್ಕದ್ದನ್ನು ತಾವು ಪಕ್ಷರಹಿತವಾಗಿ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾನು ಐದೇ ನಿಮಿಷ ಮುಗಿಸಿ ಬಿಡುತ್ತೇನೆ.

ಶ್ರೀ ಎಸ್.ರಾಜೇಂದ್ರನ್:- ನನಗೆ ಒಂದು ಅವಕಾಶ ಕೊಡಬೇಕು.

ಉಪಾಧ್ಯಕ್ಷರು:- ಎಷ್ಟು ಹೊತ್ತು ಮಾತನಾಡುತ್ತೀರಿ? ರಾತ್ರಿ ಹತ್ತು ಗಂಟೆವರೆಗೂ ಮಾತನಾಡುತ್ತೀರಾ? ಎಷ್ಟು ಹೊತ್ತು ಮಾತನಾಡುತ್ತೀರಿ? ನೀವು ಮಾತನಾಡಿ, ಮಾನ್ಯ ಸಿಂಧ್ಯಾರವರೇ, ತಮ್ಮನ್ನು ಕರೆದಾಗ ಮಾತನಾಡಲಿಲ್ಲ.

ಎಲ್ಲ, 5–5 ನಿಮಿಷದಲ್ಲಿ ಮುಗಿಸಿ. ಜಾಸ್ತಿ ಹೋಗಬೇಡಿ, ಎಲ್ಲ ಮಾತನಾಡಿರುವುದೇ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಈ ಪೂರಕ ಅಂದಾಜುಗಳ ಬಗ್ಗೆ ಪದೇ ಪದೇ ಪ್ರಸ್ತಾಪ ಆಗುತ್ತಿದೆ. ಮಾನ್ಯ ಯಡಿಯೂರಪ್ಪನವರು ಇಲ್ಲಿ ಗಮನ ಕೊಡಬೇಕು. ಪೂರಕ ಅಂದಾಜುಗಳ ಬಗ್ಗೆ ನಾವು ಪದೇ ಪದೇ ಹೇಳಿದ್ದೇವೆ. ಹತ್ತಿರ ಹತ್ತಿರ ಎರಡು ಸಾವಿರ ಕೋಟಿ ರೂಪಾಯಿ ಕೇಳಿದ್ದೀರಿ. ಅಂದರೆ ನಮಗೆ ಏನೂ ಪ್ಲಾನೇ ಇಲ್ಲವಾ ಅಂತ. ಬಜೆಟ್ ಮಂಡನೆ ಮಾಡಿ 4 ತಿಂಗಳಾಯಿತು. 4 ತಿಂಗಳಲ್ಲಿ ಇಂತಹ ವಿಚಾರಗಳಿಗೆ ಯೋಜನೆ ಮಾಡಲಿಕ್ಕೆ ನಿಮಗೆ ಏನೂ ಪ್ಲಾನು ಇಲ್ಲವಾ? ಏಕೆ ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿದ್ದೀರಿ?. ಪೂರಕ ಅಂದಾಜುಗಳು ಎಂದರೆ ಏನು? ಅದರ ಅರ್ಥ ಏನು? Unforeseen expenditure ಮತ್ತೆ Emergency expenditures ಗೆ ಮಾತ್ರ ಪೂರಕ ಅಂದಾಜನ್ನು ತರಬೇಕಾಗಿರತಕ್ಕದ್ದು. It is the question of financial discipline. ನೀವು ಎಲ್ಲಾದರೂ ಕೆರೆ ಕಟ್ಟಲಿಕ್ಕೆ ಅಥವಾ ಹೂಳು ಎತ್ತಲಿಕ್ಕೆ, ಬಾವಿ ತೋಡಲಿಕ್ಕೆ ಎಲ್ಲದಕ್ಕೂ ನೀವು ಪೂರಕ ಅಂದಾಜುಗಳಲ್ಲಿ ತಂದು ಈ ಬಜೆಟ್‌ನ ಪಾವಿತ್ರ್ಯತೆಯನ್ನೇ ಹಾಳು ಮಾಡುತ್ತಿದ್ದೀರಿ ಎಂದು ನಾವು ಸುಮಾರು ಸಾರಿ ಹೇಳಿದ್ದೇವೆ. ಏಕೆ ಈ ರೀತಿ ಮಾಡುತ್ತಿದ್ದೀರಿ? ಏನು ಯೋಜನೆ ಮಾಡಲಿಕ್ಕೆ, ನಮ್ಮಲ್ಲಿ ಏನು ಸಮಸ್ಯೆ ಇದೆ ಎಂದು ಅರ್ಥ ಆಗುತ್ತಾ ಇಲ್ಲ ಕೃಷಿ ರಂಗದ ವಿಚಾರ. ಹಾಸನ ಕೃಷಿ ಕಾಲೇಜಿನ ಎರಡನೆ ಹಂತಕ್ಕೆ 30 ಕೋಟಿ ರೂಪಾಯಿ ಹಣ ಕೊಟ್ಟಿದ್ದೀರಿ. ಎಲ್ಲದಕ್ಕೂ ಕೊಟ್ಟಿದ್ದೀರಿ. ಕೋಲಾರದಲ್ಲಿ ಒಂದು ಕೃಷಿ ಕಾಲೇಜು ಇದೇ. ಅದನ್ನು ಏನು ಮರೆತೇ ಹೋಗಿ ಬಿಟ್ಟಿದೆಯೇ? ಅದು ನಿಮ್ಮ ಲಿಸ್ಟ್‌ನಲ್ಲಿ ಇಲ್ಲವಾ? ಅದಕ್ಕೇನೂ ಕೊಟ್ಟಿಲ್ಲ. ಅಲ್ಲಿ ಇವತ್ತು ಬಿಎಸ್‌ಸಿ ಅಗ್ರಿಕಲ್ಚರ್, ಸಿರಿಕಲ್ಚರ್ ಎಲ್ಲಾ ಇದೆ. ಒಳ್ಳೆಯ infrastructure, building ಎಲ್ಲಾ ಇದೆ. ಒಂದು ರೂಪಾಯಿ ಕೊಡಲು ನಿಮ್ಮ ಮನಸ್ಸಿಗೆ ಬಂದಿಲ್ಲವಲ್ಲಾ ಸಾರ್. ಎಲ್ಲಾ ಹಾಸನಕ್ಕೆ ಕೊಡಬೇಕಾ? ಕೃಷಿ ಕಾಲೇಜಿಗೆ ಕೊಡಬೇಕಾ? ದಯವಿಟ್ಟು ಅದಕ್ಕೆ ಹಣ ನಮಗೆ ಬೇಕು. ಮತ್ತೆ ಬಹಳ ಮುಖ್ಯವಾಗಿ last time revolving fund ಏನು ಕೊಟ್ಟಿದ್ದೀರಿ. ಕೃಷಿ ರಂಗದಲ್ಲಿ 12.5 ಕೋಟಿ ರೂಪಾಯಿ ಇದ್ದದ್ದು. ಅವರು ಬಿಡುಗಡೆ ಮಾಡಿದ್ದು 8 ಕೋಟಿ. ಇನ್ನು 4 ಕೋಟಿ ರೂಪಾಯಿಯನ್ನು revolving fundನಲ್ಲಿ ಬಿಡುಗಡೆ ಮಾಡಲಿಲ್ಲ. ಏನು ಕೃಷಿ ಬೆಳೆಯಲ್ಲಿ ನಷ್ಟವಾದರೆ revolving fund ನಲ್ಲಿ 12.5 ಕೋಟಿ ರೂಪಾಯಿ ತೆಗೆದು ಇಟ್ಟಿದ್ದೀರಲ್ಲ, ಎಲ್ಲಿ

ನೀವು ಹಣ ಕೊಟ್ಟಿರಿ? 8 ಕೋಟಿ ರೂಪಾಯಿ ಕೊಟ್ಟರಿ, ಉಳಿದದ್ದು ಕೊಡಲೇ ಇಲ್ಲ. ಇದರಲ್ಲಿ ಏಕೆ ಅದನ್ನು ತೆಗೆದು ಇಡಲಿಲ್ಲ? ಇಂತಹದೆಲ್ಲಾ ನಿಮಗೆ ಜ್ಞಾಪಕ ಬರುವುದಿದಲ್ಲವಾ? ಅದಕ್ಕೆ ಏನಾಗಿತ್ತು? ಮೊನ್ನೆ ಸರ್ವ ಪಕ್ಷಗಳ ಸಭೆ ಕರೆದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರು. ಸರ್ವ ಪಕ್ಷಗಳ ಸಭೆಗೆ ಆಶ್ವಾಸನೆ ಕೊಟ್ಟರು. ನೇತ್ರಾವತಿ ತಿರುವಿಗೆ ಬಾಕಿ ಕೊಡ ಬೇಕಾಗಿರುವಂತಹ ಹಣವನ್ನು ಕೊಟ್ಟು ಬಿಡುತ್ತೇವೆ. ವರದಿ ತರಿಸಿ ಕೊಡುತ್ತೇವೆಂದು ಹೇಳಿದರು. ಅವರೀಗ 12 ಕೋಟಿ ರೂಪಾಯಿ ಕೊಡಬೇಕು. ಇದರಲ್ಲಿ ನೀವು ಎಷ್ಟು ತೆಗೆದು ಇಟ್ಟಿದ್ದೀರಿ ಗೊತ್ತಾ? 4 ಕೋಟಿ ತೆಗೆದು ಇಟ್ಟಿದ್ದೀರಿ. ಏಕೆ ನೀವು ಸರ್ವ ಪಕ್ಷದ ಸಭೆಗೆ ಕೊಟ್ಟಂತಹ ಆಶ್ವಾಸನೆ ಏನಾಯಿತು? ಅದಕ್ಕೆ ತೆಗೆದು ಇಡಬೇಕೆನ್ನತಕ್ಕ ಪ್ರಶ್ನೆ ನಿಮ್ಮ ಹತ್ತಿರ ಇಲ್ಲವಾ? ಇದರಲ್ಲಿ ಹಣ ಏಕೆ ತೆಗೆದು ಇಡಲಿಲ್ಲ. ಮತ್ತೆ ಈ ಕೆರೆಗಳ ಹೂಳು ಎತ್ತುವುದಕ್ಕೆ ಏಕೆ ಹಣ ಇಡಲಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ನೀವು ಅಂದು ಕೊಂಡಿರುವುದು ಎಲ್ಲಾ ಜಲ ಸಂರಕ್ಷಣೆಯಲ್ಲಿ ಸೇರಿದೆ ಎಂದು. ಆದರೆ ಎಲ್ಲವೂ ಜಲ ಸಂರಕ್ಷಣೆಯಲ್ಲಿ ಸೇರಿಲ್ಲ. ಕೆಲವು ತಾಲ್ಲೂಕು ಮಾತ್ರ ಸೇರಿರತಕ್ಕದ್ದು. ಕೆಲವು ತಾಲ್ಲೂಕುಗಳನ್ನು ಹಾಗೆಯೇ ಬಿಟ್ಟಿದ್ದೀರಿ. ಕರ್ನಾಟಕ ಜಿಲ್ಲೆಯಲ್ಲಿ ಹೈಯೆಸ್ಟ್ ಕೆರೆಗಳು ಇರತಕ್ಕದ್ದು ನಮ್ಮ ಕೋಲಾರ ಜಿಲ್ಲೆಯಲ್ಲಿ. ಅದರಲ್ಲಿ ಕೆಲವು ಮಾತ್ರ ಸೇರಿದೆ, ಕೆಲವು ತಾಲ್ಲೂಕುಗಳು ಸೇರಿಲ್ಲ. ದಯವಿಟ್ಟು ಬೇರೆ ಕೆರೆಗಳಿಗೆ ಹಣ ತೆಗೆದು ಇಡುವುದಕ್ಕೆ ವ್ಯವಸ್ಥೆ ಆಗಬೇಕು ನೀವು ಮತ್ತೆ ಮಂಗಳೂರಿನಲ್ಲಿ ಕೃಷಿ ಸಹಕಾರ ಸಂಘಕ್ಕೆ revive ಮಾಡಲಿಕ್ಕೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹೌದಾ? ಮಾನ್ಯ ಯಡಿಯೂರಪ್ಪನವರೇ? ನಮ್ಮ ಇಡೀ ಜಿಲ್ಲೆಯ ಎಂಎಲ್‌ಎ ಗಳು ನಿಮ್ಮಲ್ಲಿ request ಮಾಡಿದರು. ನಮ್ಮ ಸೊಸೈಟಿಗಳು ಮುಳುಗಿ ಹೋಗಿವೆ. DCC Bank ಮುಳುಗಿ ಹೋಗಿದೆ. ನೀವು ಸಾಲ ಮನ್ನಾ ಏನು ಮಾಡಿದ್ದೀರಿ? ಅದು ನಮ್ಮ ಕೋಲಾರ ಜಿಲ್ಲೆಯ ರೈತರೊಬ್ಬರಿಗೂ ಅನ್ವಯ ಆಗುತ್ತಿಲ್ಲ. ಏಕೆಂದರೆ ಅಲ್ಲಿನ ರೈತರಿಗೆ ಎರಡು ವರ್ಷದಿಂದ ಸಾಲವನ್ನೇ ಕೊಟ್ಟಿಲ್ಲ. ಸೊಸೈಟಿಗಳು, ಬ್ಯಾಂಕುಗಳು ದಿವಾಳಿ ಎದ್ದು ಹೋಗಿ ಬಿಟ್ಟಿವೆ. ಹಾಗಾಗಿ ನಮ್ಮ 4% ಸಾಲ ಮನ್ನಾ ನಮ್ಮ ರೈತರಿಗೆ ಅಪ್ಲೈ ಆಗಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಅರ್ಥ ಸಚಿವರು):- ಒಂದು World Bank ನಂದ ನಾವೇನು ವಿಶೇಷವಾಗಿ ಹೂಳು ತೆಗೆಯುತ್ತದ್ದೇವೆ ಕೋಲಾರ ಜಿಲ್ಲೆಯಲ್ಲಿ ಯಾವ ತಾಲ್ಲೂಕು ಬಿಟ್ಟು ಹೋಗಿದೆ? ಅದನ್ನು

ಸೇರಿಸಬೇಕೆಂದು ಈಗ ಕಳುಹಿಸುತ್ತಿರುವ ಪ್ರಪೋಸಲ್‌ನಲ್ಲಿ ಕಳುಹಿಸುತ್ತಿದ್ದೇವೆ. ಇದು ಒಂದು. ಎರಡನೆಯದು, ಹುಬ್ಬಳ್ಳಿ-ಧಾರವಾಡ, ಕೋಲಾರ ಈ ಕಡೆ ಏನು ಸಾಲ ಮನ್ನಾ ಯೋಜನೆ ಅನ್ವಯ ಆಗಲಿಲ್ಲ ಎಂದು ಹೇಳಿದರೆ ಅಲ್ಲಿ ಸಹಕಾರ ಕ್ಷೇತ್ರಕ್ಕೆ ಸಾಲವನ್ನೇ ಕೊಟ್ಟಿಲ್ಲ. ಅದಕ್ಕೆ ತಮಗೆ ಹೋದ ಸಾರಿನೂ ಭರವಸೆ ಕೊಟ್ಟಿದ್ದೇನೆ. ತಪ್ಪದೇ ಕೋಲಾರ ಜಿಲ್ಲೆ, ಧಾರವಾಡ ಜಿಲ್ಲೆಗಳಿಗೆ alternative ಏನು ಮಾಡಬಹುದು? ನೀವೂ ಸಲಹೆ ಕೊಡಿ. ಚರ್ಚೆ ಆಗಲಿ. ಯಾರೋ ಮಾಡಿದ ತಪ್ಪಿನಿಂದ ಸಹಕಾರಿ ಕ್ಷೇತ್ರ ಮುಳುಗಿ ಹೋಗಿದೆ ಎಂದು ಹೇಳಿ ಅಲ್ಲಿನ ರೈತರು ಸಫರ್ ಆಗಬಾರದು. ಅದಕ್ಕೆ ಏನು ಮಾಡಬಹುದು ಎನ್ನುವ ಬಗ್ಗೆ ನಿಮ್ಮ ಜೊತೆ ಕುಳಿತು ಬಿಚ್ಚು ಮನಸ್ಸಿನಿಂದ ಸಮಾಲೋಚನೆ ಮಾಡುತ್ತೇನೆ. ಏನಾದರೂ ಪರಿಹಾರ ಹುಡುಕೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾವು ಅದಕ್ಕೆ ಒಂದು ಸಲಹೆ ಕೊಡುತ್ತೇವೆ. ನಮ್ಮ ಜಿಲ್ಲೆಗೆ ಅನ್ವಯ ಆಗುವ ಹಾಗೆ 01.01.2002 ರಿಂದ ಸಾಲ ಮನ್ನಾ ಯೋಜನೆಯನ್ನು ಅಪ್ಲೈ ಮಾಡಿಸಿ 2006ನೇ ಸಾಲಿಗೆ ಅಪ್ಲೈ ಮಾಡಿದರೆ ಆಗುವುದಿಲ್ಲವೆಂದು ಹೇಳಿದ್ದೇವೆ. 01.01.2006 ಎಂದು ಹೇಳಿ ಏನು ಮಾಡಿದ್ದೀರಿ? ಅದನ್ನು 2004 ರಂದು ಮಾಡಿದರೆ ನಮ್ಮ ಜಿಲ್ಲೆಗೆ ಅಪ್ಲೈ ಆಗುತ್ತದೆ ಇಲ್ಲದಿದ್ದರೆ ಆಗುವುದಿಲ್ಲ ಎಂದು ನಾವು ಸಲಹೆ ಕೊಟ್ಟೆವು. ಅದನ್ನು ನೀವು ಮಾಡಲಿಲ್ಲ. ಮತ್ತೆ DCC Banks ಸಂಪೂರ್ಣವಾಗಿ ಮುಳುಗಿ ಹೋಗಿದೆ. ಕನಿಷ್ಠ ಒಂದು 20,25 ಕೋಟಿ ರೂಪಾಯಿಯನ್ನೋ ಕೊಟ್ಟು ಅದನ್ನು revive ಮಾಡಿ. ಅದು ಬದುಕಿದರೆ ನಮ್ಮ ರೈತರು ಬದುಕಿಕೊಳ್ಳುತ್ತಾರೆಂದು ನಾವು ಹೇಳಿದೆವು. ಅದಕ್ಕೆ ಒಂದು ರೂಪಾಯಿ ತೆಗೆದು ಇಟ್ಟಿಲ್ಲ. ನೀವು ಮಂಗಳೂರಿನ ಕೃಷಿ ಸಹಕಾರಿ ಕ್ಷೇತ್ರಕ್ಕೆ ತೆಗೆದು ಇಟ್ಟಿದ್ದೀರಿ. ಇದು ಸರಿಯಾದಂತಹ ಕ್ರಮ ಅಲ್ಲ. ಮತ್ತೆ ಇಷ್ಟೆಲ್ಲಾ ಹೇಳಿದ್ದೀರಿ. ನೀವೆಲ್ಲಾ ಬೋರ್ಡ್‌ಗಳಲ್ಲಿ ಜಾಹೀರಾತು ಹಾಕಿದ್ದೀರಿ. ಏನು ಹೇಳಿದ್ದೀರಿ ಎಂದರೆ ಮೈತ್ರಿ ಕೂಟದ ಸರ್ಕಾರ ಶಿಕ್ಷಣಕ್ಕೆ ಪ್ರಾಧಾನ್ಯತೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಕಾಲೇಜುಗಳನ್ನು ಮಾಡಿದ್ದೀರಿ. Staff ಇಲ್ಲ. ಈಗ First Grade College ಆಗಿದೆ. ನಾನು ಮಾನ್ಯ ಶಂಕರ್‌ಮೂರ್ತಿಯವರಿಗೆ ಅಭಿನಂದಿಸಬೇಕು. ಅವರು ಪಕ್ಷ ಭೇದ ಇಲ್ಲದೇ ಕಾಲೇಜುಗಳನ್ನು ಕೊಟ್ಟಿದ್ದಾರೆ. ಶ್ರೀ ಶಂಕರ್‌ಮೂರ್ತಿಯವರು ಪಕ್ಷ ಭೇದ ಇಲ್ಲದೇ ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಕಾಲೇಜುಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳು ಬೇಕು. ಬಿಲ್ಡಿಂಗ್ ಹಾಗೂ

ಹಣವನ್ನು ಕೊಟ್ಟಿದ್ದಾರೆ. ಆದರೆ Staff ಪೂರ್ತಿಯಾಗಿ ಇನ್ನೂ ಬಂದಿಲ್ಲ. ಅದೇ ಪಿಯು ಕಾಲೇಜುಗಳಿಗೆ ಕೆಲವು ಕಡೆ..

ಶ್ರೀ ಡಿ.ಎಚ್.ಶಂಕರ್‌ಮೂರ್ತಿ(ಮಾನ್ಯ ಉನ್ನತ ಶಿಕ್ಷಣ ಸಚಿವರು):- ಈಗ ಬಹಳ ಒಳ್ಳೆಯ ವಿಷಯ ಪ್ರಸ್ತಾಪ ಮಾಡಿದರು. ಆದರೆ Staff ಕೊಟ್ಟಿಲ್ಲ ಎನ್ನುವುದು ಸುಳ್ಳು. ನಿಮಗೆ ಮಾಹಿತಿ ಕೊಟ್ಟಿಲ್ಲ ಎನ್ನುವುದು ಸತ್ಯ. ಮಾಹಿತಿ ಏನು ಕೊಡುತ್ತಿದ್ದೇನೆಂದರೆ ಈಗಾಗಲೇ vacancies ಇರುವುದಕ್ಕಾಗಿ 611 ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಮುಗಿದಿದೆ. ಪೋಲೀಸ್ ವೆರಿಫಿಕೇಶನ್ ಆಗುವುದು ತಡ ಆಗುತ್ತಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಣಕಾಸು ಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಮಂಡಿಸಿರುವ ಪೂರಕ ಆಯವ್ಯಯದ ಮೇಲೆ ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿರುವ ನಿಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಡಾ:ನಂಜುಂಡಪ್ಪನವರ ವರದಿ ಆಧಾರದ ಮೇಲೆ 2,000 ಕೋಟಿ ರೂಪಾಯಿಗಳಷ್ಟು ಹಣವನ್ನು ಈ ವರ್ಷ ನಾವು ಬಿಡುಗಡೆ ಮಾಡುತ್ತೇವೆನ್ನುವ ಮಾತನ್ನು ವಿಧಾನ ಸಭೆಯೊಳಗೆ ಸಿಕ್ಕದಂತಹ ಎಲ್ಲ ಸಂದರ್ಭಗಳಲ್ಲೂ ತಾವು ಹೇಳಿಕೊಂಡು ಬಂದಿದ್ದೀರಿ. ಮತ್ತು ಡಾ: ನಂಜುಂಡಪ್ಪನವರ ವರದಿಯಲ್ಲಿ ಹೇಳಿರುವ 39 ಅತೀ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಹಣ ಕೊಡುತ್ತೇವೆನ್ನುವ ಮಾತನ್ನೂ ಹೇಳಿದ್ದೀರಿ. ನಂಜುಂಡಪ್ಪನವರ ವರದಿ ಈ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಇರುವ ಒಂದು ವರದಿಯಾಗಿದೆ. ಆದರೆ, ವಸ್ತುಸ್ಥಿತಿಯಲ್ಲಿ ತಾವು ಹೇಳುವುದೊಂದು ಮಾಡುವುದೊಂದು ಆಗಿದೆ. ತಮ್ಮ ಕಣ್ಮುಂದೆ ರಾಮನಗರ, ಹೊಳೆನರಸೀಪುರ, ಶಿಕಾರಿಪುರ ಅದು ಬಿಟ್ಟರೆ ಹಾಸನ. ಈ ನಾಲ್ಕು ಕ್ಷೇತ್ರಗಳನ್ನು ಬಿಟ್ಟರೆ ಬೇರಾವುದೂ ಸಹ ತಮ್ಮ ಕಣ್ಮುಂದೆ ಕಾಣುತ್ತಿಲ್ಲ. ಇದು ನಾಚಿಕೆಗೇಡಿನ ವಿಚಾರವಾಗಿದೆ. ಬಳ್ಳಾರಿ ಜಿಲ್ಲೆಯ ಪುರಸಭೆಗೆ ಹಣ ಬಿಡುಗಡೆ ಮಾಡಿದ್ದೀರಿ. ಅಲ್ಲಿ ಒಬ್ಬ ಮಂತ್ರಿಗಳು ಶಾಸಕರಾಗಿದ್ದರೂ ಅವರ ಗಮನಕ್ಕೇ ಬಂದಿಲ್ಲ. ಅಲ್ಲಿಯ ಪಕ್ಕದಲ್ಲಿರುವ ಕ್ಷೇತ್ರಕ್ಕೆ 2 ಲಕ್ಷ, 3 ಲಕ್ಷ, 5 ಲಕ್ಷ ರೂಪಾಯಿಗಳ ಕೆಲಸಗಳಿಗೆ ಅನುಮೋದನೆ ಕೊಟ್ಟಿರುವುದು ಒಬ್ಬ ಮಂತ್ರಿಗೆ ದೊಡ್ಡ ಅವಮಾನಕರವಾದ ವಿಚಾರ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ಈ ಸಂದರ್ಭದಲ್ಲಿ ತರಬಯಸುತ್ತೇನೆ. ಅಧಿಕಾರಕ್ಕೋಸ್ಕರ ತಾವು ಇರಬಾರದೆಂದು

ಹೇಳುತ್ತಿದ್ದಿರಿ. ನಾನು ನಿಮ್ಮನ್ನು ಒಬ್ಬ ಸಾಮಾನ್ಯ ಮನುಷ್ಯನೆಂದು ತಿಳಿದುಕೊಂಡಿಲ್ಲ. ಈ ಸದನದಲ್ಲಿ ಮೊದಲನೇ ಸಲ ಅಧಿಕಾರಕ್ಕೆ ಬಂದಾಗ 1983 ನೇ ಇಸವಿಯಲ್ಲಿ ನಿಮ್ಮ ಪಾರ್ಟಿಯಿಂದ 18 ಜನ ಶಾಸಕರಿದ್ದರು. ತಾವೂ ಇದ್ದಿರಿ. ಆದಾದ ನಂತರ, ನಾಲ್ಕು ಜನ ಆದಿರಿ. ನಾಲ್ಕು ಜನರಿಂದ ಎಂಬತ್ತು ಜನರವರೆಗೆ ತೆಗೆದುಕೊಂಡು ಹೋಗಿರುವ ಕೀರ್ತಿ ನಿಮ್ಮದಾಗಿದೆ. ಮತ್ತು ತಾವು ಅಲ್ಲಿ ಕುಳಿತಿದ್ದಾಗ ಏನೇನು ಮಾತನಾಡಿದ್ದೀರಿ, ಏನೆಲ್ಲ ಹೋರಾಟ ಮಾಡಿದ್ದೀರಿ, ಅದೆಲ್ಲವನ್ನೂ ತಾವು ನೆನೆಪಿಸಿಕೊಳ್ಳಿ. ತಾವು ಆಡಿರತಕ್ಕಂಥ ಮಾತುಗಳನ್ನು ಒಂದು ಸಲ ತಮ್ಮ ಆಪ್ತ ಕಾರ್ಯದರ್ಶಿಗೋ, ಯಾರಿಗಾದರೂ ಹೇಳಿ ತರಿಸಿಕೊಂಡು ಓದಿ. ಅದನ್ನು ಎಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ತರಲಾಗಿದೆ ಎಂಬುದನ್ನು ನನಗೆ ಹೇಳಿ. ಶಿಕಾರಿಪುರದ ಜನರನ್ನು ತಾವು ಅಭಿನಂದಿಸಬೇಕು. ಅದರಲ್ಲಿ ಸಂಶಯವೇನೂ ಇಲ್ಲ. ರಾಮನಗರದ ಕ್ಷೇತ್ರದ ಜನತೆಗೆ ಮುಖ್ಯಮಂತ್ರಿಗಳು ಅಭಿನಂದಿಸಬೇಕು. ಅದರಲ್ಲೇನೂ ಸಂಶಯವಿಲ್ಲ. ಮಂತ್ರಿಗಳಿರುವ ಸ್ಥಳಕ್ಕೆ ತಾವು ಶೇ 25 ರಷ್ಟು ಹಣ ತೆಗೆದುಕೊಂಡು ಹೋಗಿ. ನಮ್ಮದೇನೂ ತಕರಾರಿಲ್ಲ. ಆದರೆ, ನೀವು ಏನು ಮಾಡುತ್ತಿದ್ದೀರಿ ಎಂಬ ಪ್ರಶ್ನೆಯನ್ನು ತಮ್ಮ ಆತ್ಮಕ್ಕೆ ಹಾಕಿಕೊಳ್ಳಬೇಕು. ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ತಾವು ಏನು ಪ್ರಯತ್ನ ಮಾಡಿದ್ದೀರಿ ಎಂಬುದನ್ನು ತಾವು ದಯವಿಟ್ಟು ಸದನಕ್ಕೆ ತಿಳಿಸಬೇಕು. ಈ ಸಂದರ್ಭದಲ್ಲಿ ಆಗುವುದಿಲ್ಲ, ಸಮಯವಾಗಿದೆ. ಆದರ ಬಗ್ಗೆ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದನ್ನು ತಿದ್ದಿಕೊಳ್ಳಬೇಕೆಂಬ ಸಲಹೆಯನ್ನೂ ಈ ಸಂದರ್ಭದಲ್ಲಿ ನಾನು ಕೊಡಬಯಸುತ್ತೇನೆ. ನಾನು ಸಂಘ ಪರಿವಾರದಿಂದ ಬಂದಿರುವವನೆಂಬುದು ತಮಗೆ ಗೊತ್ತಿದೆ. 'ರೀ, ನನಗೆ 52 ಲಕ್ಷ ರೂಪಾಯಿಗಳನ್ನು ಕೊಡಿ' ಎಂದು ನಾನು ಕಾಡಿದ್ದೇನೆ, ನಮಗೆ ಬೇಡಿದ್ದೇನೆ, ಹಲವಾರು ಸಲ ನಮಗೆ ಹೇಳಿದ್ದೇನೆ. ಹಣಕಾಸು ಮಂತ್ರಿಗಳಾಗಿ 18 ತಿಂಗಳಾಯಿತು. ನಾನು ಈ ರಾಜ್ಯಕ್ಕೋಸ್ಕರ ದುಡಿದಿದ್ದೇನೆ. ಇಲ್ಲಿ ಬಂದು ಎಲ್ಲರೂ ಮಾತನಾಡಬೇಕಾದರೆ, ಸ್ವಾತಂತ್ರ್ಯದ ಮೌಲ್ಯಕ್ಕೋಸ್ಕರ 19 ತಿಂಗಳ ಕಾಲ ನಾನು ಜೈಲು ವಾಸ ಅನುಭವಿಸಿದ್ದೇನೆ. ನಮ್ಮ ತ್ಯಾಗದ ಮೇಲೆ ನೀವು ಅಧಿಕಾರಕ್ಕೆ ಬಂದಿದ್ದೀರಿ ಎಂಬುದು ನಮಗೂ ಸಹ ಗೊತ್ತಿದೆ. ಆದರೆ, ನಾನು 50 ಲಕ್ಷ ರೂಪಾಯಿಗಳವರೆಗೆ ಕಾಡಿದ್ದೇನೆ. ಪರಿಶಿಷ್ಟ ಕಾಲೋನಿಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಂಡೆ. ಹಿಂದಿನ ಮುಖ್ಯಮಂತ್ರಿಗಳು ಕೊಟ್ಟ 50 ಲಕ್ಷ ರೂಪಾಯಿಗಳಲ್ಲಿ 25 ಲಕ್ಷ ಮಾತ್ರ ಬಿಡುಗಡೆ ಮಾಡುವ ಕರುಣೆ ತೋರಿಸುವುದಕ್ಕೆ

ನಿಮಗೆ 18 ತಿಂಗಳಾದವು. ಇದು ಒಬ್ಬ ಮಾಜಿ ಹಣಕಾಸು ಮಂತ್ರಿ, ಸುಮಾರು ಆರು ಸಲ ಗೆದ್ದು ಬಂದಿರುವ ನನಗೆ ತಾವು ಕೊಟ್ಟಿರುವ ಕೀರ್ತಿ ಎನ್ನುವುದನ್ನು ಈ ಸಂದರ್ಭದಲ್ಲಿ ರಾಜ್ಯದ ಜನತೆಗಿಂತಲೂ ಕೊನೆ ಪಕ್ಷ ನನ್ನನ್ನು ಆರಿಸುವ ನನ್ನ ಕ್ಷೇತ್ರದ ಜನತೆ ಗಮನಕ್ಕೆ ಈ ಸರ್ಕಾರ, ರೈತರ ಮಕ್ಕಳ ಸರ್ಕಾರ ಏನು ಎಂಬುದು ಗೊತ್ತಾಗಬೇಕೆಂದು ಇವರಿಗೆ ತಿಳಿಸಬೇಕು. ನಮ್ಮ ಕ್ಷೇತ್ರ ರಾಮಕೃಷ್ಣ ಹೆಗಡೆಯವರನ್ನು ಗೆಲ್ಲಿಸಿದೆ. ನಮ್ಮ ಕ್ಷೇತ್ರ ದೇವೇಗೌಡರನ್ನು, ಅವರು ಸೋತು ಮನೆಯಲ್ಲಿದ್ದಾಗ 36,000 ದಷ್ಟು ಬಹುಮತಗಳಿಂದ ಗೆಲ್ಲಿಸಿಕೊಟ್ಟು ಲೋಕಸಭೆಗೆ ಕಳುಹಿಸುವ ಮೂಲಕ ಈ ಪಾರ್ಟಿಗೆ ಉಸಿರು ತಂದಿದೆ. ಇವರೆಲ್ಲಾ ದೇವೇಗೌಡರ ಹೆಸರನ್ನು ಹೇಳುತ್ತಾರೆ. ಆ ಜನರು ಏನು ಪಾಪ ಮಾಡಿದ್ದರು ಎಂಬುದು ನನಗೆ ಅರ್ಥವಾಗಿಲ್ಲ. ಜಗದೀಶ್ ಶೆಟ್ಟರ್‌ರವರು ನನ್ನ ಸ್ನೇಹಿತರು. ಅವರ ತಂದೆ ನನಗೆ ಬೇಕಾಗಿರುವವರು. ಅವರ ಮನೆಯಲ್ಲಿ ನಾನು ಊಟ ಮಾಡಿದ್ದೇನೆ. ಪ್ರಚಾರಕ್ಕಾಗಿ ಹೋಗಿದ್ದ ಸಂದರ್ಭದಲ್ಲಿ ವಾರಾನ್ನ ಮಾಡಿ ನಾನು ಜೀವನ ನಡೆಸಿರುವುದು ತಮಗೆ ಗೊತ್ತಿರುವ ವಿಚಾರವೇ ಆಗಿದೆ. ಬಗರ್‌ಹುಕುಂ ಸಾಗುವಳಿಗೆ ಸಂಬಂಧಿಸಿದಂತೆ ನಮ್ಮ ತಾಲ್ಲೂಕಿನಲ್ಲಿ ಒಂದು ಸಮಿತಿ ಮಾಡಿ ಎಂದು ಅವರನ್ನು ನಾನು ಕೇಳಿದೆ. ಅದಕ್ಕೆ ನಾಲ್ಕು ವರ್ಷಗಳು ಬೇಕೇ? 18 ತಿಂಗಳುಗಳಿಂದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಕಡತ ಇದೆಯೆಂದರೆ, ಏನು ಹೇಳುವುದು? ಆಶ್ರಯ ಸಮಿತಿಗಳು ರಚನೆಯಾಗಿಲ್ಲ. ಆ ಸಮಿತಿಯಲ್ಲಿ ಸಿಂಧ್ಯಾರವರು ಇರಬಾರದು! ನಾನು ಏನು ಮಾಡಿಬಿಡುತ್ತೇನೆ? ನಾನೊಬ್ಬ ಶಾಸಕನಲ್ಲವೇ? ಬಗರ್ ಹುಕುಂ ಸಾಗುವಳಿ ಸಮಿತಿ ಮತ್ತು ಆರಾಧನಾ ಸಮಿತಿಯಲ್ಲಿ ನಾನು ಇರಬಾರದು! ಮಾನ್ಯ ವಾಟಾಳ್ ನಾಗರಾಜ್‌ರವರು ನನ್ನ ತಂದೆಯಂತೆ. ಅವರು ನನ್ನ ಮದುವೆ ಮಾಡಿಸಿರುವವರು. ನಾನು ಇವತ್ತು ಏನು ಹೇಳಬಯಸುತ್ತಿದ್ದೇನೆಂದರೆ, ನಾಡಿದ್ದು ಗ್ರಾಮ ವಾಸ್ತವ್ಯಕ್ಕೆ ಸರ್ಕಾರಿ ಲೆಕ್ಕದಲ್ಲಿ ಮುಖ್ಯಮಂತ್ರಿಗಳು ಕನಕಪುರಕ್ಕೆ ಹೋಗುತ್ತಿದ್ದಾರೆ. ಕನಕಪುರದ ಹತ್ತಿರ ನಮ್ಮ ಸ್ವಂತ ಊರು ಇದೆ. ನಮ್ಮ ತಾಯಿಯವರ ಹೆಸರಿನಲ್ಲಿ ಅಲ್ಲಿರುವ ಬಡವರು ಒಂದು ಊರು ನಿರ್ಮಿಸಿದ್ದಾರೆ. ಆ ಊರಿನ ಹೆಸರು ಸರಸ್ವತಿ ನಗರ. ನಮ್ಮ ತಾಯಿಯ ಹೆಸರು ಸರಸ್ವತಿ. ಯಡಿಯೂರಪ್ಪನವರೇ, ಬಡವರೆಲ್ಲರೂ ಸೇರಿಕೊಂಡು ಒಂದು ಊರು ಕಟ್ಟಿಕೊಂಡಿದ್ದಾರೆ. ಅಲ್ಲಿ ಗ್ರಾಮ ವಾಸ್ತವ್ಯ ಮಾಡುತ್ತಾರೆ. ಇವರು ಗ್ರಾಮ ವಾಸ್ತವ್ಯ ಮಾಡುತ್ತಾರೆಂದು ಅಲ್ಲಿ ಟಾರು ಹಾಕುತ್ತಿದ್ದಾರೆ. ಅಲ್ಲಿರುವ ಎಲ್ಲರ ಮನೆಗಳಿಗೂ ಸಿಮೆಂಟ್ ಹಾಕುತ್ತಿದ್ದಾರೆ. ಒಳ್ಳೆಯ ರೀತಿಯಲ್ಲಿ ಸುಣ್ಣ-ಬಣ್ಣ ಹಚ್ಚುತ್ತಿದ್ದಾರೆ. ಲೈಟ್ ಹಾಕಿಸಿದ್ದಾರೆ, ಬಹಳ

ಸಂತೋಷ ನಾನು ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಖ್ಯಮಂತ್ರಿಗಳು ಕನಕಪುರಕ್ಕೆ ಬರುತ್ತಿದ್ದಾರೆ. ಅನೇಕ ನಮ್ಮ ಮಾಜಿ ಸಹೋದ್ಯೋಗಿಗಳನ್ನೂ ಸಭೆಗೆ ಕರೆದಿದ್ದಾರೆ. ಅವರಿಗೆ ಕನಕಪುರದ ಜನರ ಬಗ್ಗೆ ಬಹಳ ಪ್ರೀತಿ. 18 ತಿಂಗಳ ನಂತರ ಬರುತ್ತಿರುವ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಆದರೆ, ನಾನು ರಾಜ್ಯಾಂಗದ ಸಂಸದೀಯ ವ್ಯವಸ್ಥೆಯ ಪ್ರಕಾರವಾಗಿ ಒಬ್ಬ ಶಾಸಕ ಎನ್ನತಕ್ಕಂಥ ಕನಿಷ್ಠ ಗೌರವ ಈ ಮುಖ್ಯಮಂತ್ರಿಗಳಿಗೆ ಇಲ್ಲವೆಂದರೆ, ಈ ಸ್ಥಿತಿ ನನ್ನ ಸಹೋದ್ಯೋಗಿಗಳಿಗೆ ಬರಬಾರದೆಂದು ನಾನು ತಮ್ಮ ಮೂಲಕ ಈ ರಾಜ್ಯದ ಜನತೆಗೆ ತಿಳಿ ಹೇಳಬಯಸುತ್ತೇನೆ. ನನಗೆ ಗೊತ್ತಿದೆ. ಮಾಧ್ಯಮದವರು ಯಾರೂ ಇಲ್ಲ. ಎಲ್ಲರೂ ಹೊರಟು ಹೋಗಿದ್ದಾರೆ. ನನ್ನ ದುರಾದೃಷ್ಟಕ್ಕೆ ನನಗೆ ಯಾವಾಗಲೂ ಕೊನೆಯಲ್ಲಿಯೇ ಮಾತನಾಡಲು ಅವಕಾಶ ಸಿಗುವುದು! ನನಗೆ ನನ್ನ ಪರಿಸ್ಥಿತಿ ಏನೆಂಬುದು ಗೊತ್ತಿದೆ. ಆದರೂ ಸಹ ನಾನೂ ಹೇಳುತ್ತಿದ್ದೇನೆ. ನಾನು 36 ಸಾವಿರ ಬಹುಮತವನ್ನು ಕೊಡಿಸಿದ್ದೇನೆ. ಅವರು ಕಷ್ಟದಲ್ಲಿದ್ದಾಗಲ್ಲೆಲ್ಲಾ ಈ ಜನತಾ, ಬಿ.ಜೆ.ಪಿ. ಎನ್ನತಕ್ಕಂಥದ್ದು ಅಧಿಕಾರ ಇರಬೇಕಾದರೆ ನಾನು ತ್ಯಾಗ ಮಾಡಿದ್ದೇನೆ. 19 ತಿಂಗಳು ಜೈಲು ವಾಸವನ್ನು ನಾನು ಅನುಭವಿಸಿದ್ದೇನೆ. ನನಗೆ ನೀವು ಕನಷ್ಟ ಗೌರವ ಕೊಡುವುದು ಬೇಡವೆ? ನನಗೆ ತಿಳಿಸುವುದು ಬೇಡವೆ? ನಾನು ಬರುತ್ತಿದ್ದೇನೆಂದು ನನಗೆ ಹೇಳಿದರೆ ನಾನೂ ಕೂಡ ಬಂದು ನಿಮಗೆ ಒಂದು ಮಲ್ಲಿಗೆ ಹೂವಿನ ಹಾರ ಹಾಕದಿದ್ದರೂ ಚೆಂಡು ಹೂವಿನ ಹಾರವನ್ನಾದರೂ ನಾನು ನಿಮಗೆ ಹಾಕುತ್ತಿದ್ದೆ. ಆ ಕ್ಷೇತ್ರದ ಜನತೆಯ ಒಡಕನ್ನುಂಟು ಮಾಡುತ್ತೀರಲ್ಲ. ಬನ್ನಿ. ನಾನು ರಣವೀಳ್ಯದ ಸ್ವಾಗತವನ್ನು ಕೊಡುತ್ತೇನೆ. ನಾನು ಹೇಡಿಯಲ್ಲ. ನಾನು ಹೆದರಿಕೊಂಡು ಹೋಗತಕ್ಕಂಥವನಲ್ಲ. ಧೈರ್ಯವಾಗಿ ಯಾಚನೆಯನ್ನು ಮಾಡತಕ್ಕಂಥವನಲ್ಲ. ನನ್ನ ತಲೆಯನ್ನು ಬಗ್ಗಿಸಲಿಕ್ಕೆ ಸಾಧ್ಯವಿಲ್ಲ. ಕತ್ತರಿಸಬಹುದು ನೀವು. ಸಾಧ್ಯವಿದೆ. ನನ್ನ ಮನೆಗೆ ಬಂದಿದ್ದರು ಮುಖ್ಯಮಂತ್ರಿಗಳು, ಮಂತ್ರಿಗಳಾಗಿ ಎಂದು ಹೇಳಿದರು. ನಾನೊಂದು ತತ್ವ ಸಿದ್ಧಾಂತದ ಆಧಾರದ ಮೇಲೆ ನಾನು ಬರುವುದಿಲ್ಲ, ರಾಷ್ಟ್ರೀಯ ಸ್ವಯಂ ಸೇವಕದ ಹಿಂದೂವಾದ ಸರಿಯಲ್ಲ ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕೋಸ್ಕರ ನಾನು ಬರುವುದಿಲ್ಲ ಎಂದು ಹೇಳಿದೆ. ಅದಕ್ಕೋಸ್ಕರವಾಗಿ ನನ್ನನ್ನು victimize ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲೇ ಇದ್ದವನು ನಾನು. ಪ್ರಚಾರಕ ಆಗಿದ್ದೇರಿ. I was the All India Secretary of A.B.V.P. I am responsible for many things in your organization. I know it. ಆದರೆ I am not interested. I

am ideologically opposed. ನಾನು ಕಾಂಗ್ರೆಸ್‌ಗೆ ಸೇರಬಹುದಾಗಿತ್ತು. ಅಂದರೆ ತಾವು ನಮಗೆ ಕೊಡತ್ತಿರತಕ್ಕಂಥ ಅವಮಾನ ಮುಂದಿನ ದಿನಗಳಲ್ಲಿ ನಿಮಗಾಗದಿರಲಿ ಎನ್ನುವ ದೃಷ್ಟಿಯಿಂದಾಗಿ ಸ್ವಲ್ಪ ಎಚ್ಚರಿಕೆಯಿಂದಿರಬೇಕೆಂದು ಹೇಳಿ ನಾನು ತಮಗೆ ಈ ಸಂದರ್ಭದಲ್ಲಿ ಏನೋ ರಾಜಕೀಯ ಮಾಡಬೇಕೆಂದು ನಾನು ಬಯಸುತ್ತಿಲ್ಲ. ತಾವು ಮೌನವಾಗಿದ್ದೀರಿ. ನಿಮ್ಮಿಂದ ಉತ್ತರವನ್ನು ಕೂಡ ನಾನು ಬಯಸುವುದಿಲ್ಲ. ಈ ಅಸಮಾನತೆ ಎನ್ನುವುದು ಬಹಳ ಹೆಚ್ಚಾಯಿತು ಯಡಿಯೂರಪ್ಪನವರೆ. ಶಿಕಾರಿಪುರಕ್ಕೆ ಕೊಟ್ಟುಕೊಳ್ಳಿ, ಒಂದೈವತ್ತು ಕೋಟಿ ಕೊಟ್ಟುಕೊಳ್ಳಿ, ಒಂದುನೂರು ಕೋಟಿ ಕೊಟ್ಟುಕೊಳ್ಳಿ, ನನ್ನದೇನೂ ತಕರಾರಿಲ್ಲ. ರಾಮನಗರದ ಎಲ್ಲಾ ರೋಡ್‌ಗಳಿಗೂ ಸ್ಟೀಲ್ ಹಾಕಿ ಕಾಂಕ್ರೀಟ್ ರೋಡ್ ಆಗುತ್ತಿದೆ. ಬಹಳ ಸಂತೋಷ. ಸ್ಟೀಲ್ ಹಾಕಿ ಕಾಂಕ್ರೀಟ್ ರೋಡ್‌ಗಳನ್ನು ಮಾಡುತ್ತಿದ್ದಾರೆ. ಬಹಳ ಸಂತೋಷ. ಆದರೆ ಜನರು ಬಹಳ ಬುದ್ದಿವಂತರು. ನನಗೆ ಜ್ಞಾಪಕ ಇದೆ ಜ್ಞಾನೇಂದ್ರ. ನಾವು ಜೈಲಿನಂದ ಆಗತಾನೇ ಹೊರಗಡೆ ಬಂದಿದ್ದವು. ನಾನು ಮತ್ತು ಪ್ರಮೀಳಾ ನೇಸರ್ಗಿ ಕಾರ್ಪೋರೇಷನ್ ಮುಂದುಗಡೆ ನಿಂತುಕೊಂಡಿದ್ದವು. ಲಕ್ಷಾಂತರ ಜನರು ಶ್ರೀಮತಿ ಇಂದಿರಾಗಾಂಧಿಯವರು ರಾಯ್‌ಬರೇಲಿಯಲ್ಲಿ ಸೋತುಹೋದರಂತೆ ಎನ್ನುತ್ತಿದ್ದರು. ರಾಯ್‌ಬರೇಲಿಗೆ ಹದಿನೈದು ದಿನಗಳ ಮುಂಚೆ ಶ್ರೀಮತಿ ಇಂದಿರಾಗಾಂಧಿಯವರು ಹೋಗಿದ್ದರು. ಎಲ್ಲರ ಮನೆಗಳ ಮೇಲೂ ಕಾಂಗ್ರೆಸ್ ಬಾವುಟ. ಜನ ಬಹಳ ಬುದ್ಧಿವಂತರು. ಸ್ಟೀಲ್ ರಸ್ತೆಯನ್ನು ಮಾಡಲಿ ಎನ್ನುತ್ತಾರೆ. ಮನೆಗೆ ನಲ್ಲಿ ಹಾಕಿಕೊಡಿ. ಮನೆಯವರಿಗೆ ಕೆಲಸ ಕೊಡಿ. ಮನೆಗೆ ನಮ್ಮ ಕಳ್ಳ ದುಡ್ಡನ್ನೆಲ್ಲಾ ಕೊಡಿ ಎನ್ನುತ್ತಾರೆ. ಓಟ್ ಮಾತ್ರ ಹಾಕುವುದಿಲ್ಲ. ಮುಖ್ಯಮಂತ್ರಿಗಳು ಇವೊತ್ತು ಅಪ್ರಕೃತವಾಗಿ ರಾಮನಗರದಲ್ಲಿ ಜನ ನನ್ನನ್ನು ಗೆಲ್ಲಿಸುತ್ತಾರೆ ಎಂದು ಹೇಳಿದರು. ನೋಡೋಣ ಗೆಲ್ಲಿಸಲಿ. ನನ್ನದೇನೂ ತಕರಾರಿಲ್ಲ. ಆದರೆ ಬೇರೆಯವರನ್ನೂ ಗೆಲ್ಲಿಸಿದ್ದಾರೆ ಎನ್ನತಕ್ಕಂಥ ಕನಿಷ್ಟ ಸೌಜನ್ಯತೆ ನಿಮಗೆ ಇರಬೇಕು. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಶಂಕರಮೂರ್ತಿಗೆ ಶ್ರೀರಾಮರೆಡ್ಡಿಯವರ ಹಾಗೆ ನಾನೂ ಒಂದು ದೊಡ್ಡ ಸಲಾಮು ಹೊಡೆಯುತ್ತೇನೆ. ಅದೇನೋ ಬಹಳ ಕಷ್ಟಪಟ್ಟು ಎಕ್ಸರ್‌ಸೈಸ್ ಮಾಡಿ ಮಾಡಿ ನನ್ನ ಜೊತೆಯಲ್ಲಿ ಜೈಲಿನಲ್ಲಿದ್ದೆ ಎನ್ನುವ ಒಂದು ಅಭಿಮಾನದಿಂದ ಒಂದು ಫಸ್ಟ್ ಗ್ರೇಡ್ ಕಾಲೇಜನ್ನು ಹಾರೋಹಳ್ಳಿಗೆ ಕೊಟ್ಟುಬಿಟ್ಟರು. ಆ ಹೊರಟ್ಟಿ ಒಂದು ಹೈಸ್ಕೂಲ್ ಕೊಟ್ಟುಬಿಟ್ಟರು. ನಾಗರಾಜು ಶೆಟ್ಟರು ಒಂದು ಲಕ್ಷ ರೂಪಾಯಿ ಕೊಟ್ಟುಬಿಟ್ಟರು. ಇಷ್ಟೇ ನನ್ನ ಯೋಗ್ಯತೆ. ಈ ಸರ್ಕಾರದಿಂದ ಆಗಿರುವ ಕೆಲಸಗಳು. ಎಲ್ಲಾ ಕೆಲಸಗಳನ್ನು ಸ್ಟ್ರೈಟ್ ಆಗಿ

ತೆಗೆಯುತ್ತಿದ್ದೀರಿ. ನಾನು ಫೇಸ್ ಮಾಡುತ್ತೇನೆ ಜನಗಳನ್ನು. ಆದರೆ ಇದರಿಂದ ಕರ್ನಾಟಕದ ಅತ್ಯಂತ ಅತಿ ಹಿಂದುಳಿದಿರತಕ್ಕಂಥ 28 ತಾಲ್ಲೂಕುಗಳಲ್ಲಿ ಕನಕಪುರ ಮೊದಲನೆಯದು ಎಂದು ಹೇಳುವುದಕ್ಕೆ ಇದನ್ನೆಲ್ಲಾ ನಾನು ಹೇಳಿದೆ. ಇಲ್ಲದೇ ಹೋದರೆ ನಾನು ಹೇಳುತ್ತಲೇ ಇರಲಿಲ್ಲ. ಇನ್ನು ಎರಡನೆಯದಾಗಿ, ಮಾನ್ಯ ಯಡಿಯೂರಪ್ಪನವರೆ, ನೀವು ಏನಾದರೂ ಮಾಡಿ 20 ಕೆ.ಜಿ. ಅಕ್ಕಿಯನ್ನು ಬಿ.ಪಿ.ಎಲ್. ಕಾರ್ಡ್‌ನವರಿಗೆ ಹಂಚುವ ರೀತಿ ಮಾಡಿ. ಕಾರ್ಡ್‌ಗಳನ್ನು ಈ ರಾಜಕೀಯ ವ್ಯವಸ್ಥೆಯಲ್ಲಿ ಕರೆಕ್ಟಾಗಿ ಹಂಚುವುದಕ್ಕೆ ಆಗುವುದಿಲ್ಲ. ನನಗೆ ಗೊತ್ತಿದೆ ಅದರ ಅವ್ಯವಸ್ಥೆ ಏನು ಎಂಬುದು. ಆ ವಿಲೇಜ್ ಅಕೌಂಟೆಂಟ್‌ಗಳು, ಆ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ಪೊಲಿಟಿಕಲ್ ಪಾರ್ಟಿ ಕಾರ್ಯಕರ್ತರು, ಹೀಗೆ ಇಂಥ ಸಿಸ್ಟಂನಲ್ಲಿ ನಾವೇನೂ ಮಾಡುವುದಕ್ಕಾಗುವುದಿಲ್ಲ. ಇವೊತ್ತು 8 ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದಾರೆ. ಒಂದು ಕಡೆ ರೈತರಿಗೆ ನೀವು ಮಾಡಿರತಕ್ಕಂಥ ಕೆಲಸಗಳು. ಇನ್ನೊಂದು ಕಡೆ ಬಡವರಿಗೆ ಅಕ್ಕಿ ಸಿಗುತ್ತಿಲ್ಲ. ಎಂಟೇ ಕೆ.ಜಿ. ಅಕ್ಕಿಯನ್ನು ನೀವು ಕಾರ್ಡ್‌ಗೆ ಕೊಡುತ್ತಿರುವುದು. ಯಾರು ಬೇಕಾದರೂ ಹೋಗಿ ವೆರಿಫೈ ಮಾಡಿಕೊಳ್ಳಿ. ಇಡೀ ರಾಜ್ಯದಲ್ಲಿ ಈ ರೀತಿ ವ್ಯವಸ್ಥೆ ಇದೆ. ಇದನ್ನು ತಾವು ಸರಿ ಮಾಡಬೇಕು. ಆಮೇಲೆ ಈಗ ಮಳೆಯಾಗಿದೆ, ಬೆಳೆಯಾಗಿ ಹೋಯಿತು. ಇನ್ನೂ ಯಾವಾಗ ರೈತರಿಗೆ ಸಾಲ ಸಿಗುವುದು? ತಾವೇ ಹೇಳಿ. ಯಾವಾಗ ಸಾಲ ಸಿಗುವುದು ಎಂಬುದು ನಮಗಂತೂ ಅರ್ಥವಾಗುತ್ತಿಲ್ಲ. ಸಾಲ ನಾವು ಮನ್ನಾ ಮಾಡಿದ್ದೇವೆ ಮನ್ನಾ ಮಾಡಿದ್ದೇವೆಂದು ಡಂಗುರ ಸಾರಿದ್ದೀರಿ. ಜನ ಏನು ಹೇಳುತ್ತಿದ್ದಾರೆಂದರೆ, ನಾವು ಮನ್ನಾ ಮಾಡಿ ಎಂದು ನಿಮಗೆಲ್ಲಿ ಕೇಳಿದ್ದೆವು, ನಮಗೆ ಬಡ್ಡಿಗೆ ಸಾಲವೇ ಸಿಗುತ್ತಿಲ್ಲವಲ್ಲಾರಿ ಎಂದು ಹೇಳಿ ಶಾಪ ಹಾಕುತ್ತಿದ್ದಾರೆ. ಇದು ಒಂದು ಕಡೆಯಾದರೆ, ಈಗ ಇನ್ನೊಂದು ಮಾಡುತ್ತಿದ್ದಾರೆ. ಈ ಜನತಾ ಮನೆಗಳನ್ನು ಕಟ್ಟುವುದಕ್ಕೆ 20 ರಿಂದ 25 ಸಾವಿರ ರೂಪಾಯಿ. ಧರ್ಮಸಿಂಗ್ ಸರ್ಕಾರ ಹೋಗಿ ಕೊನೆಯ ದಿನಗಳಲ್ಲಿ ಒಂದು ಪಂಚಾಯಿತಿಗೆ 60 ಮನೆಗಳನ್ನು ಕೊಟ್ಟರು. ಇವೊತ್ತಿನವರೆವಿಗೂ ಸಹಿತ ಆ ಕೆಲಸಗಳು ಇನ್ನೂ ಪ್ರಾರಂಭವಾಗಿಲ್ಲ. ಏಕೆ ಪ್ರಾರಂಭವಾಗಿಲ್ಲ? ನಾನು ನನ್ನ ಕನಕಪುರದಲ್ಲಿ ಇನ್ನೂ ಪ್ರಾರಂಭವಾಗಿಲ್ಲವೇನೋ, ಏಕೆಂದರೆ ನನ್ನ ಕ್ಷೇತ್ರದ ಬಗ್ಗೆ ಸ್ವಲ್ಪ ವಿಶೇಷವಾದ ಪ್ರೀತಿ ಇದೆ ಎಂದು ತಿಳಿದುಕೊಂಡು ನೋಡಿದೆ. ಆದರೆ ಬೇರೆ ಕಡೆ ಎಲ್ಲಿಯೂ ಇನ್ನೂ ಪ್ರಾರಂಭವಾಗಿಲ್ಲ. ಏಕೆ ಪ್ರಾರಂಭವಾಗಿಲ್ಲ? ಅದೊಂದು ಸ್ವಲ್ಪ ತಾವು ದಯವಿಟ್ಟು ವೆರಿಫೈ ಮಾಡಬೇಕು. ಆಮೇಲೆ ನೀವು ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಶೆಡ್ಯೂಲ್ಡ್ ಕಾಸ್ಟ್ ಹಾಸ್ಟೆಲ್‌ಗಳಿಗೆ ಕೊಡತ್ತಿರತಕ್ಕಂಥ

ಹಣ ವೇರಿ ಮೀಗರ್ ಅಮೌಂಟ್. ಅದೊಂದು ಸ್ವಲ್ಪ ದಯವಿಟ್ಟು ಹೆಚ್ಚು ಮಾಡಿ. ಈ ಸಪ್ಲಿಮೆಂಟರಿ ಬಜೆಟ್, ಇನ್ನೊಂದು ಬಜೆಟ್. ನೀವು ಏಕೆ ಅದನ್ನು ಹೇಳಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಇದೇ ನನ್ನ ಲಾಸ್ಟ್ ಸೆಶನ್, ಇದೇ ನನ್ನ ಲಾಸ್ಟ್ ಫೈನಾನ್ಸ್ ಮಿನಿಸ್ಟರ್ ಅಧಿಕಾರ, ಏಕೆ ಆ ರೀತಿ ಹೇಳುತ್ತೀರಿ? ನಿಮ್ಮ ಹಣೆ ಬರಹ ಯಾರಿಗೆ ಗೊತ್ತಿದೆ? ನೀವೇ ಚೀಫ್ ಮಿನಿಸ್ಟರ್ ಆಗಿ ಸ್ವಂತ 120 ಜನ ಎಂ.ಎಲ್.ಎ.ಗಳನ್ನು ಇಟ್ಟುಕೊಂಡು ಚೀಫ್ ಮಿನಿಸ್ಟರ್ ಆಗಿ ನೀವು ಫೈನಾನ್ಸ್ ಮಿನಿಸ್ಟರ್ ಆಗಬಹುದು. ಯಾರಿಗೆ ಗೊತ್ತು? How do you say that? ನಿಮಗೆಷ್ಟೊಂದು humiliate ಆಗಿದೆ. ಎಂಬುದು ನಮಗರ್ಥವಾಗುತ್ತದೆ. ಬಜೆಟ್ ಮಾಡುವಾಗ ಒಬ್ಬ ಪ್ರಿನ್ಸಿಪಲ್ ಸೆಕ್ರೆಟರಿಯನ್ನು ನಮಗೆ ಬೇಕಾಗಿರುವಂಥವರನ್ನು ಹಾಕಿಸಿಕೊಡಲಿಲ್ಲ. ಅದೂ ನಮಗೆ ಗೊತ್ತಿದೆ. ಯಾವ ಯಾವ ಆಫೀಸರ್ ಏನೇನು ಎಂಬ ಬಗ್ಗೆ ಅವರ ಜಾತಕಗಳು ನಮ್ಮ ಹತ್ತಿರ ಯಾರ ಹತ್ತಿರವೂ ಇಲ್ಲಿ ಇಲ್ಲವೇ? ನಮ್ಮ ಹತ್ತಿರ ಎಲ್ಲಾ ಜಾತಕಗಳು ಇರುತ್ತವೆ. ಯಾರನ್ನು ಯಾವಾಗ ಯಾವಾಗ ಎಲ್ಲೆಲ್ಲಿ ಇಡಬೇಕು ಎಂಬುದು ನಮಗೂ ಗೊತ್ತಿದೆ. ನಿಮಗೆ ಬೇಕಾಗಿರುವ ಒಬ್ಬ ಆಫೀಸರ್‌ನ್ನು ಕೊಡಲಿಲ್ಲ, ಅದಕ್ಕೋಸ್ಕರವೇ ನೀವು ಎಕ್ಸರ್‌ಸೈಸ್ ಮಾಡುವುದಕ್ಕೆ ಆಗಲಿಲ್ಲ. ನೀವು ಇದರ ಬಗ್ಗೆ ಎಲ್ಲಿ ಎಕ್ಸರ್‌ಸೈಸ್ ಮಾಡುವುದಕ್ಕೆ ಎಲ್ಲಿ ಆಗುತ್ತದೆ? ಫೈನಾನ್ಸ್ ಮಿನಸ್ಟರ್ ಆಗಿರುವವರು ಒಂದು ನಿಮಿಷ ಕೂಡ ವೇಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಅಷ್ಟೊಂದು important portfolio ಅದು. Resource mobilization implementation of programmes, ತಾವು ಹೇಳಿ ತಾವು ಇಡೀ ರಾಜ್ಯದಲ್ಲಿ ಫೈನಾನ್ಸ್ ಮಿನಸ್ಟರ್ ಆದ ಮೇಲೆ ಯಾವ ಯಾವ ಜಿಲ್ಲೆಗಳಿಗೆ ಹೋಗಿ ಎಷ್ಟೆಷ್ಟು ಹಣ ಖರ್ಚಾಗಿದೆ, ನಿಮ್ಮ ಪರ್‌ಪಾರ್ಮೆನ್ಸ್ ಏನು ಎಂದು ಕೇಳುವುದಕ್ಕೆ ನಿಮಗೆ ಸಮಾಧಾನವಿಲ್ಲ. ಆ ಸಮಾಧಾನ ಇಲ್ಲಿ ನಿಮಗೆ ಕೊಟ್ಟಿಲ್ಲ, ಯಾವತ್ತು ಕಿತ್ತಾಕುತ್ತಾರೋ, ಏನಾಗುತ್ತದೋ ಎನ್ನುವ ಭಯವನ್ನು ನಿಮಗೆ ಹುಟ್ಟಿಸಿದ್ದಾರೆ. ಆದರೂ ನೀವು ಬಹಳ ತಾಳ್ಮೆಯಿಂದ ಇದ್ದೀರಿ. ಯಾರಿಗೂ ಚುನಾವಣೆ ಬೇಕಾಗಿಲ್ಲ. ಅದು ಎಂಥದ್ದೇ ಸರ್ಕಾರವಾಗಿರಲಿ, ಇನ್ನೂ 20 ತಿಂಗಳು ಇರಬೇಕೆಂಬುದೇ ನಮ್ಮೆಲ್ಲರ ಬಯಕೆ. ಜನದ ಬಯಕೆಯೊ ಇದೆ ಆಗಿದೆ. ಜನ ರೊಚ್ಚಿಗೇಳುತ್ತಾರೆ. ಏನಾದರೂ ನಿಮ್ಮ ಕೈಗೆ ಅಧಿಕಾರವನ್ನು ಕೊಡದೇ ಹೋದರೆ ಜನ ರೊಚ್ಚಿಗೇಳುತ್ತಾರೆ. ಎನ್ನುವುದನ್ನೂ ಕೂಡ ನಾನು ರಾಜ್ಯದ ಜನತೆಯ ಪರವಾಗಿ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದುದರಿಂರ ನೀವು ಧೈರ್ಯವನ್ನು ತೆಗೆದುಕೊಳ್ಳಿ. You say, I don't release this money.

ಏನಾಗಿಬಿಡುತ್ತದೆ? ಎಂ.ಎಲ್.ಎ. ಗಳಿಗೆ ಗೊತ್ತಿಲ್ಲದ ರೀತಿ ರೋಡ್‌ಗಳಿಗೆ ಟಾರು ಹಾಕಿಕೊಂಡು, ಮನೆಗಳನ್ನು ಕಟ್ಟಿಸಿಕೊಂಡು ಗ್ರಾಮ ವಾಸ್ತವ್ಯದ ನಾಟಕ, ಅವರು ಬಂದ ತಕ್ಷಣವೇ ದಿಂಬು, ಹಾಸಿಗೆ ಎಲ್ಲವನ್ನೂ ತೆಗೆದುಕೊಂಡು ಬಂದು ಬಿಡುತ್ತಾರಂತೆ. ಪೇಪರ್‌ನವರಿಗೆ ಅದಕ್ಕಿಂತ ಒಳ್ಳೆಯ ಸುದ್ದಿ ಇನ್ನೇನು ಬೇಕು ಹೇಳಿ. ಅಧಿಕಾರಿಗಳು ನಮ್ಮನ್ನು ಅಪಹಾಸ್ಯ ಮಾಡುವ ರೀತಿ ಆಗಿಹೋಗಿದೆ. ಈಗ ನಮ್ಮ ಊರಿಗೆ ಒಂದು ಹಾಸಿಗೆ, ದಿಂಬು, ಇವನ್ನೆಲ್ಲಾ ಇಟ್ಟುಕೊಂಡು ಹೋಗಿದ್ದಾರೆ. ಅದನ್ನು ಯಾವಾಗ ಎತ್ತುಕೊಂಡು ಹೋಗುತ್ತಾರೋ ಗೊತ್ತಿಲ್ಲ. ನಾನು ಅವನಗೆ ಹೇಳಿಕೊಟ್ಟಿದ್ದೇನೆ. ನನ್ನ ಪಾರ್ಟಿಯಿಂದಲೇ ಅವನಿಗೆ ಎರಡು ಬಾರಿ ಮೆಂಬರ್ ಮಾಡಿದ್ದೆ, ಇಳ್ಳಿಗರವನು ಅವನು. ಅವನನ್ನು ಈ-ಟಿ.ವಿ. ಗೆ ಕರೆದುಕೊಂಡು ಹೋಗಿ ಇದೇ ರೀತಿ ಹೇಳು. ಹೇಳು, ಹೇಳು ಎಂದು ಒತ್ತಾಯ ಮಾಡಿದ್ದಾರೆ. ಅವನು ಹೇಳಿದ. ಏನೂ ಮಾಡಿಲ್ಲ 25 ವರ್ಷದಿಂದ ಸಿಂಧ್ಯಾರವರು, ಆದರೆ ನಮ್ಮ ಸಾಹೇಬರು ಬಂದು ಎಲ್ಲವನ್ನು ಮಾಡಿಬಿಟ್ಟರು ಎಂದ. ಅದೇ ರೀತಿ ಹೇಳು ಎಂದು ಅವನಗೆ ನಾನು ಹೇಳಿದ್ದೇನೆ. ಅದೇ ರೀತಿ ಹೇಳಿದ್ದಾನೆ. ನನ್ನ ಪಾರ್ಟಿಯಿಂದಲೇ ಗ್ರಾಮಪಂಚಾಯಿತಿಗೆ ಅವನು ಗೆದ್ದಿದ್ದಾನೆ. ನಮ್ಮ ಜನ ಅದೇ ರೀತಿ. ಆಗಲೇ ಹೇಳಿದೆನಲ್ಲಾ ನಾನು ಇಂದಿರಾಗಾಂಧಿಯವರ ಕಥೆಯನ್ನು. ಅದೇ ರೀತಿ ಆಗುವುದು. ನಮ್ಮ ಕನಕಪುರದ ಜನರು ಬಹಳ ಹುಷಾರ್. ಯಾವ ಯಾವ ಸಂದರ್ಭದಲ್ಲಿ ಯಾರು ಯಾರಿಗೆ ಏನು ಮರ್ಯಾದೆ ಕೊಡಬೇಕು ಎಂಬುದನ್ನು ಬಹಳ ಚೆನ್ನಾಗಿ ಕಲಿತುಕೊಂಡಿದ್ದಾರೆ. ಆದುದರಿಂದ ಇವೆಲ್ಲಾ ನಡೆಯುವುದಿಲ್ಲ. ಆದರೆ ರಾಜಕೀಯ ವ್ಯವಸ್ಥೆಯಲ್ಲಿ ಈ ರೀತಿಯಲ್ಲಾ ಮಾಡುವುದು ಸರಿಯಲ್ಲ. ಇದನ್ನು ನಾನು ಬಹಳ ನೋವಿನಂದ ಹೇಳುತ್ತಿದ್ದೇನೆ. ಅವರೊಬ್ಬರಿಗೆ ಅಲ್ಲ ಸವಾಲು ಸ್ವೀಕರಿಸುವುದಕ್ಕೆ ಬರುವುದು ನಮಗೂ ಸವಾಲು ಸ್ವೀಕರಿಸುವುದಕ್ಕೆ ಬರುತ್ತದೆ. ಸವಾಲನ್ನು ನಾವು ಸ್ವೀಕಾರ ಮಾಡಿದ್ದೇವೆ. ಆದರೆ ತಾವು ಹಣಕಾಸಿನ ಮಂತ್ರಿಗಳು ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ, ಈಗಲಾದರೂ ಅಟ್ಲೀಸ್ಟ್, ಏನೋ ಒಂದು ತಿಂಗಳೋ, ಎರಡು ತಿಂಗಳೋ ತಾವು ಉಪಮುಖ್ಯಮಂತ್ರಿಗಳಾಗಿ, ಹಣಕಾಸಿನ ಮಂತ್ರಿಗಳಾಗಿರತಕ್ಕಂಥ ಸಂದರ್ಭದಲ್ಲಿ ಈ ಒಂದು ತಾರತಮ್ಯವನ್ನು ಸರಿಮಾಡುವುದಕ್ಕೆ ನಿಮ್ಮ ಕೈಲಾದಷ್ಟು ಪ್ರಯತ್ನವನ್ನು ತಾವು ಮಾಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಕ್ಯಾಬಿನೇಟ್ ರೂಲ್ ಪ್ರಕಾರ ಒಂದು ಸಾರಿ ಫೈನಾನ್ಸ್ ಮಿನಿಸ್ಟರ್ ಅಪ್ರೂವ್ ಮಾಡಿದ ಮೇಲೆ Chief Minister cannot stop it . ನೀವು ಟ್ರೆಶರಿಗೆ ಹೇಳಿ ರಿಲೀಸ್ ಮಾಡಬೇಕೆಂದು, ಏಕೆ ರಿಲೀಸ್

ಮಾಡುವುದಿಲ್ಲ? Officers are not the servants of the chief minister. They have to act by the rule book. ರೂಲ್ ಬುಕ್ ಪ್ರಕಾರ ಏನು ಎಂಬುದು ಅಧಿಕಾರಿಗಳಿಗೇನು ಗೊತ್ತಿಲ್ಲವೆ? ಇವರದೆಲ್ಲಾ ಬಂಡವಾಳ ಎಲ್ಲವೂ ಅವರಿಗೂ ಚೆನ್ನಾಗಿ ಗೊತ್ತಿದೆ. ಆದರೂ ಅವರು ಮಾತನಾಡದೇ ಸುಮ್ಮನೇ ಇರುತ್ತಾರೆ ಪಾಪ. ಕೆಲವರು ನಗುತ್ತಾ ಇರುತ್ತಾರೆ. ಕೆಲವರು ನಗುವುದಕ್ಕೂ ಹೋಗುವುದಿಲ್ಲ, ಕೆಲವರು ಮೌನವಾಗಿಯೇ ಇರುತ್ತಾರೆ. ಒಳ್ಳೆಯ ಜನ ಇದ್ದಾರೆ ನಮ್ಮ ರಾಜ್ಯದಲ್ಲಿ. ಆದುದರಿಂದ ತಾವು ಇದನ್ನು ಸ್ಟ್ರೀಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿ ಈ ತಾರತಮ್ಯವನ್ನು ಸರಿಮಾಡಿ. ಈ ಒಂದು ಸಪ್ಲಿಮೆಂಟರಿ ಬಜೆಟ್‌ನ್ನು ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಪಾಪ ಇರುವುದರಲ್ಲಿ ನೀವು ಸ್ವಲ್ಪ ಉತ್ತಮವಾಗಿರತಕ್ಕಂಥ ಕೆಲಸವನ್ನು ಮಾಡುವುದಕ್ಕೆ ಹೊರಟ್ಟಿದ್ದೀರಿ. ನಾನು ಸಪೋರ್ಟ್ ಮಾಡುವುದು ಮತ್ತು ಅಪೋಸ್ ಮಾಡುವುದು ಎರಡು irrelevent. ಆದರೆ ಒಂದು ಹೇಳಬೇಕಾಗುತ್ತದೆ. ಇವತ್ತು ನಿಮ್ಮ ಬಜೆಟ್ಟೇ ನಿಮಗೆ enemy ಆಗಿರುವುದು. ನಿಮ್ಮ ಬಜೆಟ್ ಅನ್ನು ನೀವು ಸರಿಯಾಗಿ ಕೊಡದೇ ಹೋಗಿದ್ದರೆ, ನೀವು ಖುಷಿಯಾಗಿ ಇರಬಹುದಿತ್ತು. ನಿಮಗೆ ಹಿಂಸೆಯಾಗಿರುವುದೇ ನಿಮ್ಮ ಒಳ್ಳೆಯ ಬಜೆಟ್‌ನಂದಾಗಿ! ಅದಕ್ಕೆ ತಕ್ಕಂತೆ ಈ ನಾಯ್ಡುವನ್ನು ಬೇರೆ ಇಟ್ಟುಕೊಂಡಿದ್ದೀರಿ. ಈವಯ್ಯಾ ' ಬಹಳ ಚೆನ್ನಾಗಿದೆ, ಬಹಳ ಚೆನ್ನಾಗಿದೆ' ಎಂದು ಊರೆಲ್ಲಾ ತಮಟೆ ಹೊಡಿಸಿಬಿಟ್ಟ! ಏನಾಗಿದೆಯೆಂದರೆ, ನೋಡಿ, ಅದೇ ಹೊಟ್ಟೆಯುರಿಗೆ ಕಾರಣವಾಗಿದೆ. ಇರಲಿ. ರಾಜ್ಯಕ್ಕೆ ಒಳ್ಳೆಯದಾಗಿದೆ. ಇಡೀ ದೇಶಕ್ಕೆ ಸಾಲ ಮನ್ನಾ ಮಾಡತಕ್ಕಂಥ ಕೆಲಸ ಮಾಡಿ ಆದರ್ಶವಾಗಿಯೇ ಇದೆ. ' ಏನ್ರಿ, ಮನಮೋಹನ್ ಸಿಂಗ್ ಸಾಹೇಬರೇ, ಆತ್ಮಹತ್ಯೆ ಜಾಸ್ತಿಯಾಗುತ್ತಿದೆಯಲ್ಲಾ, ಮನ್ನಾ ಮಾಡಿ' ಎಂದು ಇವತ್ತು ನಾವು ದೆಹಲಿಗೆ ಹೋಗಿ ಧೈರ್ಯವಾಗಿ ಕೇಳಬಹುದು. ಆ credit ನಮಗೆ ಹೋಗುತ್ತದೆ. ನೀವೇನು 20 ವರ್ಷ ಇಲ್ಲಿ ಹೋರಾಟ ಮಾಡಿದ್ದೀರಿ, ಅದರ ಬಗ್ಗೆ ಕೆಲವು ಅಂಶಗಳನ್ನು ಬಜೆಟ್‌ನಲ್ಲಿ ತೋರಿಸಿದ್ದೀರಿ. ನಾನು ಮೆಚ್ಚುತ್ತೇನೆ. ಆ gender budgeting ಅನ್ನು first time ಶುರು ಮಾಡಿರುವುದು ನೀವೇ ಆಗಿದ್ದೀರಿ. ನಾನು ಅದನ್ನು ಮಾಡಬೇಕೆಂದಿದ್ದೆ, ಆಗಲಿಲ್ಲ. ನೀವು ಮಾಡಿದ್ದೀರಿ. ಹೆಣ್ಣು ಮಕ್ಕಳಿಗೆ ಸೈಕಲ್ ಕೊಡುವುದು, ಪುಸ್ತಕ ಕೊಡುವುದು, old age pension, widow pension ಜಾಸ್ತಿ ಮಾಡಿದ್ದು, ಇದನ್ನೆಲ್ಲಾ ಜನರೇ appreciate ಮಾಡುತ್ತಿದ್ದಾರೆ. I also appreciate. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರೆ ನಾನು ಸ್ವಲ್ಪ ಜಾಸ್ತಿ ಮಾತನಾಡಿದ್ದೇನೆ. ತಮಗೆ ಧನ್ಯವಾದಗಳು.

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ): ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಹತ್ತು ನಿಮಿಷದೊಳಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಹಣಕಾಸು ಮಂತ್ರಿಗಳು supplementary demands ಅನ್ನು ನಮ್ಮ ಮುಂದಿಟ್ಟಿದ್ದಾರೆ. ರಾಜ್ಯಾಂಗದಲ್ಲಿ ಒಬ್ಬರು ಶಾಸನ ಸಭೆಗೆ ಆರಿಸಿ ಬರಬೇಕಾಗಿದ್ದರೆ, ಲೋಕಸಭೆಗೆ ಆರಿಸಿ ಬರಬೇಕಾಗಿದ್ದರೆ, ಹೆಚ್ಚು ನಿರ್ಬಂಧಗಳೇನಿಲ್ಲ. ಈ ಮಾತುಗಳನ್ನು ಮೊದಲು ಸದನದಲ್ಲಿ ಹೇಳಿದ್ದೀರಿ. 25 ವರ್ಷ ವಯಸ್ಸು ಪೂರ್ಣವಾಗಿರಬೇಕು, ಮತದಾರರ ಪಟ್ಟಿಯಲ್ಲಿ ಆತನ ಹೆಸರು ಇರಬೇಕು, ಆತನಗೆ ಹುಚ್ಚು ಹಿಡಿದಿಡಬಾರದು ಜೈಲು ಆಗಿರಬಾರದು ಇಷ್ಟಿದ್ದರೆ ಈ ರಾಜ್ಯದ ಯಾವ ಪ್ರಜೆ ಬೇಕಾದರೂ ವಿಧಾನಸಭೆಗೆ ನಿಲ್ಲಬಹುದು. ಮತ್ತು ಆತ ಮುಖ್ಯಮಂತ್ರಿಯಾಗಬಹುದು. ಅಂದರೆ, ಆತ ಬಿ.ಎ. ಓದಿರಬೇಕು, ಎಂ.ಎ ಓದಿರಬೇಕು, ಎಂ.ಎಸ್.ಸಿ. ಓದಿರಬೇಕು, ಬಿ.ಟೆಕ್. ಓದಿರಬೇಕೆಂಬ, ಈ ತರಹದ ನಿರ್ಬಂಧವೇನಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ಜನರ ಅಭಿಮತವನ್ನು ಅನುಸರಿಸಿ ನಾವು ಈ ಸದನಕ್ಕೆ ಬರುತ್ತೇವೆ. ಜನರ ಇಚ್ಛೆ ಮತ್ತು ನಮ್ಮ ಇಚ್ಛೆಯನ್ನು ಅನುಷ್ಠಾನಗೊಳಿಸುವುದಕ್ಕೆ ಕಾನೂನು ಚೌಕಟ್ಟಿನಲ್ಲಿ ನಮಗೆ ಸಹಾಯ ಮಾಡುವುದಕ್ಕೆ, ನಮ್ಮೊಂದಿಗೆ ಕೆಲಸ ಮಾಡುವುದಕ್ಕೆ ಅಧಿಕಾರಿಗಳಿರುತ್ತಾರೆ. ಅವರ ಕೆಲಸ ಗೈಡ್ ಮಾಡುವುದು. Finanace Minister ಆಗುವವರು ದೊಡ್ಡ Economist ಆಗಿರಬೇಕೆಂಬ rules ಏನೂ ಇಲ್ಲ, But, financial disicipline ಬಗ್ಗೆ, Constitution Provisions ಬಗ್ಗೆ time to time caution ಕೊಡಬೇಕು, ಗೈಡ್ ಮಾಡುವುದು. ಈಗ tax ಎನ್ನುವುದು ಎಲ್ಲಿ ಪ್ರಾರಂಭವಾಯಿತು? ಅಧ್ಯಕ್ಷರೆ, ಇದು ಇಂದು, ನಿನ್ನೆ ಪ್ರಾರಂಭವಾಗಲಿಲ್ಲ. ಇಂಗ್ಲೆಂಡ್ ದೇಶದಲ್ಲಿ ಚಕ್ರವರ್ತಿಗಳು ಐಷಾರಾಮಿ ಜೀವನಕ್ಕೆ ಒಗ್ಗಿಕೊಂಡು ಭೋಗದಲ್ಲಿ ನಿರತರಾಗಿ ರಾಜ್ಯದ ಹಿತ ಮರೆತು ತನ್ನ ಖರ್ಚಿಗೆ ದುಡ್ಡು ಬೇಕೆಂದಾಗಲೆಲ್ಲಾ ಜನರಿಗೆ tax ಹಾಕುವುದು. ಇದು ವಿಪರೀತವಾಗಿ, ಜನರಿಂದ ತಡೆದುಕೊಳ್ಳಲು ಆಗದಿದ್ದಾಗ, ಜನರು ದಂಗೆ ಏಳುತ್ತಾರೆ. ನಾನು ಹೇಳುತ್ತಿರುವುದು 17 ನೇ ಶತಮಾನದ ವಿಚಾರ. ಯಡಿಯೂರಪ್ಪನವರೆ ದಂಗೆ ಎದ್ದು ಗಲಾಟೆ ಮಾಡಿದ ನಂತರ lastಗೆ ಒಂದು settlementಗೆ ಬರುತ್ತಾರೆ. ಇಲ್ಲಿಂದೀಚೆಗೆ ನಮಗೆ ಪ್ರಾತಿನಿಧ್ಯ ಕೊಡದೆ ಅಂದರೆ, tax ಕಟ್ಟುವ ಜನರಿಗೆ, land lordsಗೆ ಮತ್ತು ವ್ಯಾಪಾರಸ್ಥರಿಗೆ, ನೀವು ತೆರಿಗೆ ಹಾಕುವಂತಿಲ್ಲ. No taxation without representation. ನಮ್ಮ ಅಹವಾಲುಗಳನ್ನು ಕೇಳಬೇಕು, ಕಷ್ಟಸುಖಗಳನ್ನು ಕೇಳಬೇಕು. ಆಮೇಲೆ ನೀವು tax ಹಾಕಬೇಕು. ನಮಗೆ ಖುಷಿ ಬಂದಂತೆ, ನಿಮ್ಮ ಭೋಗಕ್ಕೆ ನಮ್ಮ ಐಷಾರಾಮಿ

ಜೀವನಕ್ಕೋಸ್ಕರ ನಮಗೆ ತೆರಿಗೆ ಹಾಕಿದರೆ, ನಾವು ಸಾಮ್ರಾಜ್ಯದ ವಿರುದ್ಧ ತಿರುಗಿ ಬೀಳುತ್ತೇವೆಂಬ ಮಾತುಗಳನ್ನು ಹೇಳಿದರು. That was the first step representation ಪ್ರಾರಂಭವಾದದ್ದು. ಅದು ಅನೇಕ ಹಂತಗಳನ್ನು ಕಳೆದು ಇವತ್ತು ಈ ಸ್ಥಿತಿಗೆ ನಾವು ಬಂದು ತಲುಪಿದ್ದೇವೆ. ಈಗ ನೀವು Article 205 sub cluse(1)ರಲ್ಲಿ Supplementary demands ಕೇಳುತ್ತಿದ್ದೀರಿ. Supplementary demands ಕೇಳುವುದಕ್ಕೆ ಮೊದಲು, grant ಕೇಳುವುದಕ್ಕೆ ಮೊದಲು ನೀವು ಏನು ಮಾಡುತ್ತೀರಿ? Regular Budget ಅನ್ನು ನಮ್ಮ ಕಾರ್ಯಕಲಾಪಗಳ ನಿಯಮ 173ರ ಪ್ರಕಾರ ಮಂಡಿಸುತ್ತೀರಿ. ಈಗ ನೀವು ನಿಮ್ಮ Rules of Procedure and Conduct of Business ಓದಿ. ಬಜೆಟ್ ಏನು ಹೇಳುತ್ತದೆ? ಒಂದು ವರ್ಷಕ್ಕೆ ಸರ್ಕಾರ ನಡೆಸುವುದಕ್ಕೆ, ನೀವು ಕೊಟ್ಟಿರುವ ವಾಗ್ದಾನಗಳನ್ನು ಈಡೇರಿಸುವುದಕ್ಕೆ, ಜನರ ಆಕಾಂಕ್ಷೆಗಳನ್ನು meet ಮಾಡುವುದಕ್ಕೆ, ಏನೇನೆಲ್ಲಾ ಬೇಕೋ ಅದೆಲ್ಲವನ್ನೂ prioritize ಮಾಡಿಕೊಂಡು, ಯಾವ್ಯಾವುದಕ್ಕೆ, ಎಷ್ಟೆಷ್ಟು ಖರ್ಚು ಮಾಡುತ್ತೀರಿ, ಅದಕ್ಕೆ ಹಣವನ್ನು ಎಲ್ಲೆಲಿಂದ ತರಬೇಕು, ಇದು totally generalized statement ಬಜೆಟ್ ಆಗಿದೆ. ಕೆಲವೊಮ್ಮೆ ಏನಾಗುತ್ತದೆಂದರೆ, ಮನುಷ್ಯನೇನೂ ದೇವರಲ್ಲ. ಇದ್ದಕ್ಕಿದ್ದಂತೆ cyclone ಬರುತ್ತದೆ ಅಥವಾ ಬರಗಾಲ ಬರುತ್ತದೆ. ಇಂತಹ situations meet ಮಾಡುವುದಕ್ಕೆ ನಮಗೆ ರಾಜ್ಯಾಂಗದಲ್ಲಿ ಬೇರೆ provisions ಇರುತ್ತವೆ. ಕೆಲವು ಸಲ ಅಂದಾಜು ಮಾಡುತ್ತೇವೆ. ಶಿವಮೊಗ್ಗದಲ್ಲಿ ಒಂದು ಆಸ್ಪತ್ರೆ ಕಟ್ಟಬೇಕು. ನೂರು ಕೋಟಿ ರೂಪಾಯಿಗಳೆಂದು ಲೆಕ್ಕ ಹಾಕುತ್ತೀರಿ ಅದು ನಮ್ಮ ಹತೋಟಿ ಮೀರಿ ಹೋಗುತ್ತದೆ. ಕೆಲವು ಕಾರಣಗಳಿಗೋಸ್ಕರ ಅದು 110 ಕೋಟಿ ಆಗುತ್ತದೆ, 120 ಕೋಟಿ ರೂಪಾಯಿಗಳಾಗುತ್ತದೆ. It is tolerable. Estimation ಎಲ್ಲಿಯೋ ಒಂದು ಚೂರು ನೀವು ಹಾಕುವ ಲೆಕ್ಕಕ್ಕೆ ಸ್ವಲ್ಪ ವ್ಯಾತ್ಯಾಸ ಬರುತ್ತದೆ. Supplementary demandsಗೆ Article 205(1) ಏಕೆ provision ಇಟ್ಟಿದ್ದಾರೆಂದರೆ, ನಾವು ನಮ್ಮ ಎಲ್ಲ ಪ್ರಾಮಾಣಿಕತೆ, ಬುದ್ಧಿಶಕ್ತಿಯಿಂದ ತಯಾರು ಮಾಡುವ ಬಜೆಟ್ ಪತ್ರ ಏನಿರುತ್ತದೆ, ಅದರೊಳಗೆ ಸೂಚನೆ ಮಾಡಿರತಕ್ಕ ಹಣಕ್ಕಿಂತಲೂ ಸ್ವಲ್ಪ ಗಡಿ ದಾಟಿ, ಆಚೀಚೆ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ನಾವು ಹಣ ಖರ್ಚು ಮಾಡಿದಾಗ ಅದಕ್ಕೆ ಸದನದ ಒಪ್ಪಿಗೆ ಸಿಕ್ಕಿರುವುದಿಲ್ಲ. ಸದನದ ಒಪ್ಪಿಗೆ ಸಿಗದೇ ನೀವು ಹಣ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಆದರೆ, ನೀವು ಖರ್ಚು ಮಾಡಿರುತ್ತೀರಿ. ಆದುದರಿಂದ, ಅದಕ್ಕೆ ಸದನದ ಒಪ್ಪಿಗೆ ಪಡೆದುಕೊಳ್ಳುವುದಕ್ಕೆ ಯಾವ ಹಣ ನೀವು ಖರ್ಚು ಮಾಡಿರುತ್ತೀರಿ, ಸಾರ್ವಜನಕ ಹಿತದೃಷ್ಟಿಯಿಂದ

ಬಹಳ ಅಗತ್ಯವಾಗಿರುತ್ತದೋ, ಸದನದ ಒಪ್ಪಿಗೇ ಇಲ್ಲದೇ ಖರ್ಚು ಮಾಡಿರುವುದಕ್ಕೆ Post-facto retificationಗೆ, ಸದನದ ಮುಂದೆ ಬರುವುದಕ್ಕೆ Supplementary demands ಎಂದು ಕರೆಯುತ್ತೇವೆ. ಆದರೆ, nature of demands, ನೀವು project ಮಾಡಿದ್ದೀರಲ್ಲ, ಅವು ಯಾವುವೂ ಕೂಡ budget prepare ಮಾಡುವ ಸನ್ನಿವೇಶದಲ್ಲಿ ನಮ್ಮ ಊಹೆಗೆ ನಿಲುಕದೇ ಸ್ವಲ್ಪ ಆಚೀಚೆ ಹೋಗಿರತಕ್ಕಂಥಾದ್ದಲ್ಲ. ಅದಕ್ಕೆ ನಾನು ಹೇಳಿದ್ದು, ಇದು ನಿಮ್ಮದಲ್ಲ ದೋಷ. Bureaucratic setup ಏನಿದೆ, Finance Departmentನವರು ಸಂಪೂರ್ಣ fail ಆಗಿದ್ದಾರೆ. ಅವರು ನಿಮಗೆ ಗೈಡ್ ಮಾಡಲಿಲ್ಲ. Norms ಏನು ಹೇಳುತ್ತದೆ? ಯಾವುದನ್ನು ಕೇಳಬಹುದು? ಯಾವುದನ್ನು ಕೇಳಬಾರದು? ನಾವು ನಮ್ಮನ್ನು ಒಂದು ಚೌಕಟ್ಟಿನಲ್ಲಿ ಇಟ್ಟುಕೊಂಡು ನಾವು ಆಡಳಿತ ನಡೆಸಿಕೊಂಡು ಹೋಗುವ ಜನರಾಗಿದ್ದೇವೆ. ನಾವು ಬುದ್ಧಿಪೂರ್ವಕವಾಗಿ ಪ್ರಜ್ಞಾಪೂರ್ವಕವಾಗಿ ರಾಜ್ಯಾಂಗದ ವಿಧಿಗಳನ್ನು ನಿಯಾಮವಳಿಗಳನ್ನು ಕಾಲ ಕೆಳಗೆ ಹಾಕಿ ತುಳಿದು ನನಗೆ ಸಂಖ್ಯಾಬಲವಿದೆ ಎಂದರೆ ಮುಂದಿನ ಜನಾಂಗಕ್ಕೆ ನಾವು ಮಾರ್ಗದರ್ಶಕರಾಗುವುದಿಲ್ಲ. ಯಡಿಯೂರಪ್ಪನವರೆ, ಒಂದು ರಾಜ್ಯ ಸರ್ಕಾರವೆಂದರೆ, ಜಾಯಿಂಟ್ ಫ್ಯಾಮಿಲಿ ಇದ್ದಹಾಗೆ, ಇದು ಒಂದು ದೊಡ್ಡ ಕುಟುಂಬ. ಈ ಕುಟುಂಬದಲ್ಲಿ ದನಕಾಯುವುದಕ್ಕೆ ಹೋಗುವವನೊಬ್ಬ ಇದ್ದಾನೆ, ಕಾಲೇಜಿನಲ್ಲಿ ಓದುತ್ತಿರುವವನೊಬ್ಬ ಇದ್ದಾನೆ, ವಯಸ್ಸಿಗೆ ಬಂದ ಲಗ್ನವಾಗಬೇಕಾಗಿರುವ ಹೆಣ್ಣು ಮಗಳೊಬ್ಬಳು ಇದ್ದಾಳೆ, ಕಾಯಿಲೆ ಬಿದ್ದಿರುವ ಅತ್ತಿಗೆನೋ, ನಾದಿನಿಯೋ ಮನೆಯಲ್ಲಿದ್ದಾರೆ, ಸಂಸಾರ ದೊಡ್ಡದಾಗಿದೆ ಮನೆಯನ್ನು ಇನ್ನೊಂದು ಚೂರು ವಿಸ್ತರಣೆ ಮಾಡಬೇಕಾಗಿದೆ, ಸಾಕಾಗುವುದಿಲ್ಲವೆಂದು ನಿಮ್ಮ ಜಮೀನಿಗೆ ಹೊಂದಿಕೊಂಡಂತೆ ಪಕ್ಕದಲ್ಲಿರುವ ಎರಡು ಎಕರೆ ಜಮೀನನ್ನು ಖರೀದಿ ಮಾಡಬೇಕಾಗಿರುತ್ತದೆ, ಇದು ಸಂಸಾರ, ಜಾಯಿಂಟ್ ಫ್ಯಾಮಿಲಿ. ಆದರೆ, ಜಾಯಿಂಟ್ ಫ್ಯಾಮಿಲಿಗೆ ಯಾವ್ಯಾವ ಆದಾಯಗಳಿವೆ, ಕುರಿಯಿಂದ ಎಷ್ಟು ಬರುತ್ತದೆ, ಬೇಸಾಯದಿಂದ ಎಷ್ಟು ಬರುತ್ತದೆ, ಬೇರೆ ಮೂಲಗಳಿಂದ ಏನು ಬರುತ್ತದೆ, ಯಾವ್ಯಾವ ಐಟಂಗೆ ಎಷ್ಟೆಷ್ಟು ಖರ್ಚಿದೆ, ಇದನ್ನೆಲ್ಲಾ ಲೆಕ್ಕಾ ಹಾಕಿಕೊಂಡು ಮನೆಯ ಯಜಮಾನ, ಆದ್ಯತೆಗಳು ಯಾವುದೆಂಬುದನ್ನು ನೋಡಿಕೊಳ್ಳಬೇಕಾಗುತ್ತದೆ. ಈಗ ಕಾಲೇಜಿನಲ್ಲಿ ಓದುತ್ತಿರುವ ಹುಡುಗನಿಗೆ ಪರೀಕ್ಷೆ ಫೀ ಕಟ್ಟಬೇಕು. ಚಿಕ್ಕಪ್ಪ, ನಾನು ಇಂಥ ತಾರೀಖಿನೊಳಗೆ ಫೀ ಕಟ್ಟದಿದ್ದರೆ ಪರೀಕ್ಷೆ ಕಟ್ಟುವುದಕ್ಕಾಗುವುದಿಲ್ಲವೆಂದು ಆ ಹುಡುಗ ಹೇಳುತ್ತಾನೆ. ಸಾಲವೋ ಸೋಲವೊ ಮಾಡಿ ತಂದು ಹಣವನ್ನು ಅವನಿಗೆ ಮನಿ ಆರ್ಡರ್ ಮೂಲಕ ನೀವು

ಕಳುಹಿಸಲೇಬೇಕು. ಯಡಿಯೂರಪ್ಪನವರೆ, ನಾನು ಜಾಯಿಂಟ್ ಫ್ಯಾಮಿಲಿಯ ಬಗ್ಗೆ ಹೇಳುತ್ತಿದ್ದೇನೆ, ನೀವು ಫ್ಯಾಮಿಲಿ ಮ್ಯಾನೇಜ್ ಮಾಡಬೇಕು. ಈಗ ಪರೀಕ್ಷೆಗೆ ಹಣ ಕಟ್ಟಬೇಕಾಗಿರುವವನು ಪಟ್ಟಣದಿಂದ ನಿಮಗೆ ಪತ್ರವನ್ನು ಬರೆಯುತ್ತಾನೆ, ನೀವು ಮನೆಯ ಯಜಮಾನರು, ಅದೇ ವೇಳೆಗೆ ಕಾಯಿಲೆ ಇರುವವನನ್ನು ಆಸ್ಪತ್ರೆಗೆ ಕಳುಹಿಸಬೇಕಾಗಿರುತ್ತದೆ, ಕುರಿ ನೋಡಿಕೊಳ್ಳುವವನು, ಕುರಿಯನ್ನು ಮಾರಿ, ನೋಡಪ್ಪ ಇಷ್ಟು ದುಡ್ಡು ಇದೆ ಎಂದು ನಿಮ್ಮ ಕೈಗೆ ತಂದು ಕೊಡುತ್ತಾನೆ, ಎಲ್ಲವನ್ನೂ ಇಟ್ಟಕೊಂಡು ಫ್ಯಾಮಿಲಿಯನ್ನು ಮ್ಯಾನೇಜ್ ಮಾಡಬೇಕು. ಫ್ಯಾಮಿಲಿಯಲ್ಲಿ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕೆಂಬುದನ್ನು ನೋಡಿಕೊಳ್ಳಬೇಕು. ಪರೀಕ್ಷೆಗೆ ಹಣ ಕಳುಹಿಸದೆ, ಕಾಯಿಲೆ ಬಿದ್ದಿರುವವರನ್ನು ಆಸ್ಪತ್ರೆಗೂ ಕಳುಹಿಸದೆ, ಕುರಿ ಮಾರಿ ಆತ ತಂದ ಹಣವನ್ನು ಇನ್ನೊಂದು ರೂಂ ಕಟ್ಟಿ, ಅದಕ್ಕೆ ಮೊಜಾಹಿಕ್ ಪ್ಲೋರಿಂಗ್ ಹಾಕುತ್ತೇನೆ, ಅಲ್ಲಿ ಫ್ಯಾನ್ ಹಾಕಿಕೊಂಡು ನಾನು ಆರಾಮವಾಗಿ ಮಲಗಿಕೊಳ್ಳುತ್ತೇನೆಂದರೆ ಆ ಜಾಯಿಂಟ್ ಫ್ಯಾಮಿಲಿ ಉಳಿಯುತ್ತದೆಯೆ? ಆಧ್ಯತೆ ಎಂಬುದು ಬಹಳ ಮುಖ್ಯ. ಈಗ ನೇತ್ರಾವತಿ ಬಲ ತಿರುವಿಗೆ ನೀವು ಎಷ್ಟು ಮಹಾ ಹಣವನ್ನು ಕೊಡಬೇಕು? After all Rs. 12 crores. ನೀವು, ನಾನು ಅವರಿಗೆ ಕೊಟ್ಟೆ, ಇವರಿಗೆ ಕೊಟ್ಟೆ ಎಂದು ಹೇಳುತ್ತೀರಿ. I don't mix politics. Academic ಆಗಿ ಮಾತನಾಡುತ್ತಿದ್ದೇನೆ. ಕೆಲವು ಅನಾಪೇಕ್ಷಣೀಯವಾಗಿರುವುದು, ಯಾವುದನ್ನು ಮುಂದಕ್ಕೆ ಹಾಕಬಹುದಾಗಿತ್ತೋ, ಯಾವುದು ಲಕ್ಷುರಿ ಐಟಂ ಆಗಿದ್ದಾವೊ, ಅಂಥವನ್ನು ಡೆಫರ್ ಮಾಡಿ ಆ ಹಣವನ್ನು ಇಲ್ಲಿ ಕೊಟ್ಟಿದ್ದಿದ್ದರೆ, ಹಣ ಯೋಗ್ಯವಾಗಿ ಸಾರ್ಥಕವಾಗಿ ವಿನಿಯೋಗವಾಗುತ್ತಿತ್ತು. ಯಾವಾಗ ಯಾವುದು ಅಗತ್ಯ ಕೆಲಸವಿದೆ, ಸುಮಾರು 2–3 ಜಿಲ್ಲೆಗಳಿಗೆ ಒಂದು ಹೊಸ ಭರವಸೆಯನ್ನು ಮೂಡಿಸತಕ್ಕಂಥ ಕಾರ್ಯಕ್ರಮ, ವ್ಯಕ್ತಿಗತವಾಗಿ ನನಗೋ ಇನ್ನೊಬ್ಬರಿಗೂ ಪ್ರಯೋಜನವಾಗುವ ಕಾರ್ಯಕ್ರಮವಲ್ಲ ಅದು. ಒಂದು ವೇಳೆ ಪರಮಶಿವಯ್ಯನವರ ವರದಿಯ ಪ್ರಕಾರ ಅದೆಲ್ಲಾ ಒಂದು ಹಂತ ತಲುಪಿದರೆ, ಆ ಮೂರು ಜಿಲ್ಲೆಯ ಜನರು ಬದುಕಿನಲ್ಲೇ ಹೊಸದಿನಗಳನ್ನು ಕಾಣುತ್ತಾರೆ, ಅದಕ್ಕೆ ಎಷ್ಟು ಹಣ? After all Rs. 12 crores. ನೀವು ನಿಮ್ಮ ಡಿಸ್ಕರಿಷನ್ ಅನ್ನು ಅಪ್ಲೈ ಮಾಡಿದಿದ್ದರೆ ಅಥವಾ ನಮ್ಮ ಅಧಿಕಾರಿಗಳು ನಿಮಗೆ ಗೈಡ್ ಮಾಡದಿದ್ದರೆ, ಯಾವುದೊ ಒಂದು ರಿಸರ್ವ್ ಪೋಲೀಸ್ ಬ್ಯಾಟಲಿಯನ್ ಒಪನ್ ಮಾಡುವುದನ್ನು ಒಂದು ವರ್ಷ ಮುಂದಕ್ಕೆ ಹೋಗಲೆಂದು ಆ ಹಣವನ್ನು ನೀವು ಇಲ್ಲಿಗೆ ಡೈವರ್ಟ್ ಮಾಡಿದಿದ್ದರೆ, ಎಂಥವರ ಕಾಲದಲ್ಲಿ ಇಂಥ ಕೆಲಸವಾಯಿತಪ್ಪ ಎಂದು ನೆನೆಸಿಕೊಳ್ಳುತ್ತಿದ್ದರು. ಈಗ ಹನುಮಂತಯ್ಯನವರ ಕಾಲದಲ್ಲಿ ವಿಧಾನಸೌಧವನ್ನು ಕಟ್ಟಿದರು.

ಯಡಿಯೂರಪ್ಪನವರೆ ತಮ್ಮ ಮನಸ್ಸಿಗೆ ಬೇಸರಪಟ್ಟಿಕೊಳ್ಳಬೇಡಿ, ಆವತ್ತಿಗೆ ಕಾಂಗ್ರೆಸ್ ಪಕ್ಷದ ಒಳಜಗಳಗಳು ಯಾವ ಮಟ್ಟಕ್ಕೆ ಹೋಗಿರುತ್ತದೆಂದರೆ, ಹನುಮಂತಯ್ಯನವರಿಗೆ ಈ ವಿಧಾನಸೌಧವನ್ನು ಕಟ್ಟುವಾಗ ಹುಚ್ಚು. ಪ್ರತಿದಿವಸ ವಾಕಿಂಗ್ ಬಂದು ಆ ಕಲ್ಲುಗಳನ್ನೆಲ್ಲಾ ಚೆಕ್ ಮಾಡುತ್ತಿದ್ದರಂತೆ, ಆಗ ನಾವೇನು ಹುಟ್ಟಿರಲಿಲ್ಲ. ಒಂದು ಸಲ ಈ ಸೆಂಟ್ರಲ್ ಜೈಲಿನಲ್ಲಿದ್ದಂತಹ ಖೈದಿಗಳನ್ನು ಕರೆತಂದು ಅವರ ಕೈನಲ್ಲಿ ಕೆಲಸ ಮಾಡಿಸಿದರು. ಈ ಕಾಂಗ್ರೆಸ್‌ನಲ್ಲಿ ಒಳಜಗಳವಿತ್ತಲ್ಲ, ಅವರ ವಿರುದ್ಧ ಗುಂಪಿನವರು, ಮುಖ್ಯಮಂತ್ರಿಗಳು ಬಂದಾಗ ಅವರ ಮುಖಕ್ಕೆ ಉಗುಳಿ ಎಂದು ಖೈದಿಗೆ ತರಬೇತಿ ಕೊಟ್ಟುಬಿಡುತ್ತಾರೆ. ಪಾಪ ಹನುಮಂತಯ್ಯನಂಥ ದೊಡ್ಡ ಮನುಷ್ಯರಿಗೆ ವಿಧಾನಸೌಧ ಕೆಲಸವಾಗಬೇಕಾಗಿದ್ದರೆ, ತನ್ನ ಸ್ವಂತ ಮನೆ ಎಂದು ತಿಳಿದುಕೊಂಡು ಸೂಪರ್ವಿಷನ್ ಮಾಡುವುದಕ್ಕೆ ಬಂದರೆ, ಈ ಅಧಿಕಾರದ ಕಚ್ಚಾಟದಲ್ಲಿ, ಯಾವನೋ ಖೈದಿಯಿಂದ ಆ ರೀತಿಯ ಅಪಮಾನ ಮಾಡಿಸಿದರು, ಮಾರನೆಯ ದಿವಸ ಪತ್ರಿಕೆಗಳ ಹೆಡ್‌ಲೈನ್ಸ್‌ನಲ್ಲಿ ಬಂದಿತು. ಹನುಮಂತಯ್ಯನವರಿಗೆ ಈ ಸದನದ ಒಳಗೆ ಒಂದೇ ಒಂದು ದಿವಸ ಬಂದು ಕುಳಿತುಕೊಳ್ಳುವುದಕ್ಕೆ ಅವಕಾಶ ಸಿಗಲಿಲ್ಲ. ಆದರೆ ಇತಿಹಾಸ ವಿಧಾನ ಸೌಧವನ್ನು ಯಾರು ಕಟ್ಟಿದರೆಂದು ಹೇಳುತ್ತದೆ? ಒಂದು ವೇಳೆ ನೀವು ವಿವೇಚನೆಯನ್ನು ಉಪಯೋಗ ಮಾಡಿ, ಹಣಕಾಸಿನ ಮಂತ್ರಿಯಾಗಿ ಹಣ ಖರ್ಚು ಮಾಡುವುದರಲ್ಲಿ ಸಾರ್ವಜನಕ ಹಿತ ಮುಖ್ಯವೆಂದು ತಿಳಿದುಕೊಂಡು ಸ್ವಲ್ಪ ಕೆಲಸ ಮಾಡಿದ್ದಿದ್ದರೆ ಬಹುಶಃ ನಿಮಗೆ ಇನ್ನೂ ಹೆಚ್ಚು ಕೀರ್ತಿ ಬರುತ್ತಿತ್ತು. ರಾಜಕಾರಣದಲ್ಲಿ ಕೀರ್ತಿವಂತರಾಗುವುದು ಯಾರೊಬ್ಬರ ಸ್ವತ್ತು ಅಲ್ಲ. ಕೀರ್ತಿ ಪಡೆದುಕೊಳ್ಳಲು, ತಂತ್ರ, ಕುತಂತ್ರ ಮಾಡಿ ಮಾಧ್ಯಮಗಳನ್ನು ಹಿಡಿದುಕೊಳ್ಳುವುದು, ಖರ್ಚು ಮಾಡುವುದು, ಪಾಂಪ್ಲೆಟ್ಸ್, ಫ್ಲೆಕ್ಸ್ ಹಾಕಿಸುವುದರಿಂದ ಕೀರ್ತಿ ಬರುವುದಿಲ್ಲ. ಜನರು ಬಹಳ ಬುದ್ಧಿವಂತರಿದ್ದಾರೆ, ನೈಜ ಪ್ರಾಮಾಣಿಕತೆಯನ್ನು ಗುರುತಿಸತಕ್ಕಂಥ ಅಂತರ್ಗತವಾದ ಒಂದು ಶಕ್ತಿ ನಮ್ಮ ಜನರಿಗಿದೆ. ಗೋಪಾಲ ಗೌಡರಿಗೆ ಈ ರಾಜ್ಯದಲ್ಲಿ ಜಾಗವಿಲ್ಲವೇ? ಅವರು ಮುಖ್ಯಮಂತ್ರಿಯಾಗಿದ್ದರೆ? ಪ್ರಧಾನಮಂತ್ರಿಯಾಗಿದ್ದರೆ? ಕಡೆಗೆ ಈ ಸದನಕ್ಕೂ ಕೂಡ 3 ಸಲಕ್ಕಿಂತ ಹೆಚ್ಚಿಗೆ ಬರಲಿಲ್ಲ, 6 ಸಲ. 8 ಸಲ ಬಂದವರೆಲ್ಲಾ ನಾವು ಇದ್ದೇವೆ. ಕರ್ನಾಟಕ ಇತಿಹಾಸದಲ್ಲಿ ಗೋಪಾಲ ಗೌಡರಿಗೆ ಜಾಗವಿಲ್ಲವೇ? ಅವಕಾಶಗಳು ಅಪರೂಪಕ್ಕೆ ಬರುತ್ತವೆ, ಬಂದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವುದು ಬಹಳ ಮುಖ್ಯವಾದ ಕೆಲಸ. Honestly speaking, ನಮ್ಮ discretion use ಮಾಡುವುದರಲ್ಲಿ ಎಲ್ಲೋ ಒಂದು ಕಡೆ you have been misled. ಹಣಕಾಸಿನ ಸಚಿವರಾದವರು ಕಡ್ಡಾಯವಾಗಿ ನೀವು Publlic Accounts committee report

ತರಿಸಿ ರೆಗ್ಯುಲರ್ ಆಗಿ ನೋಡಬೇಕು, ನಿಮ್ಮ ಸ್ಟ್ಯಾಫ್ ಯಾರಿದ್ದಾರೋ ನನಗೆ ಗೊತ್ತಿಲ್ಲ. they should get the reports of the Public Accounts Committee regularly. Public Accounts Committee ನಮ್ಮ ರೂಲ್ 264 ಪ್ರಕಾರ constitute ಆಗಿರುವ statutory committee. ಬಜೆಟ್‌ನಲ್ಲಿ ಏನು ಓಟ್ ಮಾಡಿರುತ್ತೇವೆ, ಆ ಪ್ರಕಾರ ಖರ್ಚಾಗಿದೆಯಾ ಇಲ್ಲವಾ ಅಥವಾ ಎಲ್ಲಾದರು violations ಆಗಿದೆಯಾ ಎಂದು Accountant General, ವರದಿ ಮಾಡುತ್ತಾರೆ. He is the representative of CAG. ನಮ್ಮ ಸಂವಿಧಾನದಲ್ಲಿ ಎಷ್ಟು ಪ್ರಾಮುಖ್ಯತೆ ಇದೆ ಎಂದರೆ, CAG is sworn into office in the presence of Rashtrapathi. Comptroller and Auditor General ಇದ್ದಾರಲ್ಲ ಅವರಿಗೆ ಪ್ರಮಾಣವಚನ ಮಾಡುವವರು ರಾಷ್ಟ್ರಪತಿಗಳು. CAG ಅವರ ಪ್ರತಿನಿಧಿಯಾಗಿ ಇಲ್ಲಿ ನಮಗೆ Accountant General ಬರುವುದು. Accountant General office ನವರು Auditನಂದ ಬಂದು ಪ್ರತಿಯೊಂದು ಐಟಂ ಅನ್ನು ಕೂಡ ಸ್ಕ್ರೂಟಿನೈಸ್ ಮಾಡಿರುತ್ತಾರೆ, ಅವರ Audit observation ಏನಿರುತ್ತದೆ ಅದರ ಮೇಲೆ ಪಿಎಸಿ ಏನು ತೀರ್ಮಾನ ಕೊಟ್ಟಿರುತ್ತದೆ, ಅದಕ್ಕೆ ನೀವು ಗಮನ ಕೊಡಬೇಕು. ಆ ಕಡೆಗೆ ನೀವು ಗಮನ ಕೊಟ್ಟಾಗ ಏನಾಗುತ್ತದೆಂದರೆ, ಅನಾವಶ್ಯಕ ವೆಚ್ಚ ಬುಕ್ ಮಾಡುವಾಗ, ಲಕ್ಷುರಿ ಐಟಂಸ್‌ಗೆ ಹೋಗುವಾಗ ಆದ್ಯತೆಗಳನ್ನು ಮಿಸ್ ಮಾಡುವಾಗ, ಸಂವಿಧಾನದ ವಿಧಿವಿಧಾನಗಳಿಗೆ ಧಕ್ಕೆ ಬಂದಾಗ ನಿಮ್ಮನ್ನು ಎಚ್ಚರಗೊಳಿಸುತ್ತದೆ. ಅದಕ್ಕೆ ಪುನಃ ಮತ್ತೊಂದು ಸಲ ಹೇಳುವುದೇನೆಂದರೆ, ನಮ್ಮಲ್ಲಿ ಹೊಂದಿಕೊಂಡು ಕೆಲಸ ಮಾಡುವ ಸಿಬ್ಬಂದಿ ಯಾರಿರುತ್ತಾರೆ, ಅವರು ಹೆಚ್ಚು ಜಾಗೃತರಾಗಬೇಕು. ಅನೇಕ ಸದಸ್ಯರು ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ, ಸದನದಲ್ಲಿ ಅವರವರ ಅಭಿಪ್ರಾಯಕ್ಕೆ ಅವರು ಅರ್ಹರು. ಆದರೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮೇಲೆ ನಾವು ಮಾತನಾಡಬೇಕಾಗಿದ್ದರೆ ಒಂದು ಮಾತನ್ನು ಹೇಳುತ್ತೇನೆ, ಯಾವುದನ್ನು ನೀವು ಅವಾಯಿಡ್ ಮಾಡಲಿಲ್ಲ, ದಯಮಾಡಿ ಇಂಥದ್ದನ್ನು ಪುನಃ ಮಾಡಬೇಡಿ. ಈ ರಾಜ್ಯ ಸಾರ್ವಜನಕರ ಶ್ರಮದಿಂದ ಬೊಕ್ಕಸಕ್ಕೆ ತುಂಬಿರುವ ಹಣಕ್ಕೆ ಇಡೀ ಸದನ ವಾರಸುದಾರರು, ನಾವೆಲ್ಲರೂ ಸೇರಿ ನಿಮಗೆ ಜನರಲ್ ಪವರ್ ಆಪ್ ಅಟಾರ್ನಿ expenditure ಬುಕ್ ಮಾಡಲು ಕೊಟ್ಟಿದ್ದೇವೆ. you have come back to us for further permission. ನಾನು ಆ ಅಧಿಕಾರವನ್ನು ಉಪಯೋಗಿಸುತ್ತಿದ್ದೇನೆ, ಜನರು ನನಗೆ ಕೊಟ್ಟಿರುವ ಸೀಮಿತ ಅಧಿಕಾರವನ್ನು ಚಲಾಯಿಸಿ ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ನಾವು ಸಲಹೆ ಕೊಡುವುದು ಯಡಿಯೂರಪ್ಪನವರಿಗಲ್ಲ, it is to the office of the Finance Minister. ತಮ್ಮ

ಸ್ಥಾನದಲ್ಲಿ ಬರುವ ದಿವಸಗಳಲ್ಲಿ ಬೇರೆಯವರು ಬರಬಹುದು, ಆ ವಿಚಾರ ಬೇರೆ. ಆದರೆ ಸದನದ ಕಲಾಪಗಳಲ್ಲಿ, ಸರ್ಕಾರ ನಡೆಸುವ ರೀತಿಯಲ್ಲಿ ಯಾವ ವೆಚ್ಚಗಳನ್ನು ನಾವು ಅವಾಯ್ಡ್ ಮಾಡಬಹುದೋ ಅದನ್ನು ಮಾಡದೇ ಈ ರೀತಿ ಡಿಮಾಂಡ್ಸ್ ಅನ್ನು ಪ್ರೊಜೆಕ್ಟ್ ಮಾಡುವುದು, ಸದನದ ಮಂಜೂರಾತಿಯನ್ನು ಕೇಳುವುದು ಆರೋಗ್ಯಕರ ಲಕ್ಷಣವಲ್ಲ. ನಿಮ್ಮ ಜನತೆಗೆ ನಿಮ್ಮ ಬದ್ಧತೆಯನ್ನು ನಾನು ಪ್ರಶ್ನಿಸುವುದಿಲ್ಲ, ಅಥವಾ ನಿಮ್ಮ ಮನಸ್ಸಿನಲ್ಲಿರುವ ಕೆಲವು ಆದರ್ಶಗಳನ್ನು ನಾನು ಪ್ರಶ್ನಿಸುವುದಿಲ್ಲ, ನಾನು ಡಿಮಾಂಡ್ಸ್ ಮೇಲೆ ಮಾತನಾಡುವಾಗಲು ಅದನ್ನೇ ಹೇಳಿದೆ. ಬಜೆಟ್ ಪ್ರೆಸೆಂಟ್ ಮಾಡುವಾಗ your heart ruled your mind. ರಾಜಕಾರಣಿಗೆ ಬೇಕಾಗಿರುವುದು ಹೃದಯವಷ್ಟೆ. ಹೃದಯವಿಲ್ಲದ ರಾಜಕಾರಣಿ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ ತಾವು ನಾವು ಎಡವಬಹುದು. ಜನರ ಮಧ್ಯೆ ನಾವು ಕೆಲಸ ಮಾಡಿದಂಥವರು ಅನೇಕ ವಿಚಾರಗಳನ್ನು ಮಾತನಾಡಿರುತ್ತೇವೆ, ಹೇಳಿರುತ್ತೇವೆ, ಹೋರಾಟಗಳನ್ನು ಮಾಡಿರುತ್ತೇವೆ, ಅವಕಾಶ ಸಿಕ್ಕಾಗ ಅವುಗಳನ್ನು ಈಡೇರಿಸತಕ್ಕಂಥ ಪ್ರಯತ್ನವನ್ನು ನಾವು ಎಷ್ಟರಮಟ್ಟಿಗೆ ಮಾಡುತ್ತೇವೆಂಬುದನ್ನು ಜನರು ನಮ್ಮ ಕಡೆಗೆ ನೋಡುತ್ತಿರುತ್ತಾರೆ. That is a real test for a politician. Before I sit down, ತಮಗೆ ಒಂದು ಮಾತನ್ನು ಹೇಳುತ್ತೇನೆ. ಕಾಮರಾಜ ನಾಡರ್ ಅವರು ತಮಿಳುನಾಡಿನ ಯಾವ ದೊಡ್ಡ ಜನಸಮುದಾಯಕ್ಕೆ ಸೇರಿದವರಲ್ಲ. ಅವರು ಕೊನೆಯುಸಿರೆಳೆದಾಗ ಯಾವ ಅಧಿಕಾರದಲ್ಲು ಇರಲಿಲ್ಲ. Please mark these words. No.1, He did not belong to major community. No.2., He was not in power. No.3, ದೇಶದಲ್ಲಿ ತುರ್ತುಪರಿಸ್ಥಿತಿ ಇತ್ತು. ಕಾಮರಾಜನಾಡರ್ ಅವರ ಪಾರ್ಥಿವ ಶರೀರವನ್ನು ನೋಡುವುದಕ್ಕೆ ಇದ್ದ ಕ್ಯೂನ ನೂಕು ನುಗ್ಗಲಿನಲ್ಲಿ ಸುಮಾರು 5–6 ಜನ ಸತ್ತು ಹೋದರು. ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಬ್ಬ ಮನುಷ್ಯ ಸಾರ್ವಜನಿಕ ಜೀವನದಲ್ಲಿದ್ದ ಮೇಲೆ ಅವನು ಜನಾನುರಾಗಿಯಾಗಿದ್ದನೇ ಇಲ್ಲವೇ ಬದುಕಿದ್ದಾಗ ಜನರ ಕೆಲಸವನ್ನು ಮಾಡಿದ್ದನೇ ಇಲ್ಲವೇ ಎಂಬುದು ರುಜುವಾತಾಗುವುದು, ಅವರಿಗೆ ಯಾವ ಅಂತಿಮಯಾತ್ರೆ ಸಿಗುತ್ತದೆ ಅದರಲ್ಲಿ ಮಾತ್ರ. ಯಾವ ನಾಯಕನಿಗೂ ಕೂಡ ತನ್ನ ಶವಯಾತ್ರೆಯನ್ನು ನೋಡುವ ಸೌಭಾಗ್ಯವಿರುವುದಿಲ್ಲ, ಆದರೆ ಇತಿಹಾಸ ಮಾತ್ರ ದಾಖಲು ಮಾಡುತ್ತದೆ. ರಾಜ್ಯದ ಮುಖ್ಯಮಂತ್ರಿಗಳಾಗಿದ್ದು, ಸತ್ತು, ಕುಟುಂಬದ 20 ಜನರು ಸೇರಿ ಎಲೆಕ್ಟ್ರಿಕ್ ಕ್ರಿಮಿಟೋರಿಯಂನಲ್ಲಿ ಅಂತ್ಯಕ್ರಿಯೆ ಮಾಡಿರುವ ಘಟನೆಗಳನ್ನು ನಾವು ನೋಡಿದ್ದೇವೆ. ಯಡಿಯೂರಪ್ಪನವರೇ ನಾನು ತಮಗೆ ಹೇಳುತ್ತೇನೆ, ನಾವು ದೇವರಾಜ ಅರಸರ ಜೊತೆಯಲ್ಲಿದ್ದೆವು. ಜೂನ್

6, 1982 ರಂದು ಆ ವ್ಯಕ್ತಿ ತೀರಿಕೊಂಡ ದಿವಸ ನಮ್ಮ ಕಣ್ಣುಗಳನ್ನು ನಾವು ನಂಬುವುದಕ್ಕಾಗಲಿಲ್ಲ. ಕ್ರಸೆಂಟ್ ರೋಡ್‌ನಂದ ಕಲ್ಲಹಳ್ಳಿವರೆಗೆ, ಅವರನ್ನು ಚಿತೆಗೆ ಅರ್ಪಿಸಿದಾಗ ಬೆಳಗಿನ ಜಾವ 3 ಗಂಟೆ 20 ನಿಮಿಷವೇನೊ ಆಗಿತ್ತು ಎಲ್ಲಿ ಮರಳು ಚೆಲ್ಲಿದರು ಕೆಳಗೆ ಬೀಳತಕ್ಕಂಥ ಸನ್ನಿವೇಶವಿರಲಿಲ್ಲ. ಚಿತೆಗೆ ಹೊರಟು ಬಿಡುತ್ತಿದ್ದಂಥ ದೇವರಾಜ್ ಅರಸು ಅವರ ಹತ್ತಿರ ಈ ರಾಜ್ಯದ ಜನತೆಗೆ ಕೊಡುವುದಕ್ಕೆ ಏನು ಇರಲಿಲ್ಲ. ಜೀವಂತವಿದ್ದಾಗ ಅವಕಾಶ ಸಿಕ್ಕಾಗ ನಡೆದುಕೊಂಡ ರೀತಿಗೆ ಈ ರಾಜ್ಯದ ಜನ ತಮ್ಮ ಅಂತಿಮ ನಮನವನ್ನು ಆ ರೂಪದಲ್ಲಿ ಸಲ್ಲಿಸಿದರು. ಯಾವ ಎಂಥ ಶ್ರೀಮಂತ ಸತ್ತರು ಉಡುದಾರವನ್ನು ಕೂಡ ಬಿಡುವುದಿಲ್ಲಪ್ಪ, ಕಟ್ ಮಾಡಿ ತೆಗೆದು ಬಿಸಾಕಿ, ಅವರವರ ಧರ್ಮಕ್ಕೆ ಅನುಸಾರವಾಗಿ ಸುಡುವುದೋ, ಗುಣಿಗೆ ಹಾಕುವುದೋ ಮಾಡುತ್ತಾರೆ, ನಮ್ಮ ಹಿಂದೆ ಏನು ಕಳುಹಿಸುತ್ತಾರೆ? ಬದುಕಿರುವಾಗ ನಾವು ಹುಚ್ಚರಂತೆ ಮೃಗಗಳಾಗಿ, ವಿವೇಚನೆಯನ್ನು ಕಳೆದುಕೊಂಡು ಅಲ್ಲಿ ಫ್ಲಾಟ್ ಮಾಡು, ಇಲ್ಲಿ ಬಂಗಲೆ ಮಾಡು, ಅಲ್ಲಿ ಜಾಗ ಮಾಡು, ಇಲ್ಲಿ ಮಹಡಿ ತೆಗೆದುಕೊ. ಅಲ್ಲಿ ಷೇರ್ಸ್‌ನಲ್ಲಿ ತೊಡಗಿಸು, ಬಂಗಾರ ತೆಗೆದುಕೊ, ಬೆಳ್ಳಿ ತೆಗೆದುಕೊ, ಎಲ್ಲಾ ಅಳುತ್ತಾರೆ, ನನಗೆ ಕಡಿಮೆ ಕೊಟ್ಟನೆಂದು ಕೆಲವರು ಅಳುವುದೂ ಇಲ್ಲ. ಒಂದು ವೃದ್ಧಾಪ್ಯ ವೇತನವನ್ನು ಜಾಸ್ತಿ ಮಾಡಿದಿರಿ. ಎಷ್ಟು ಜನರು ಅಳುತ್ತಾರೆ ಗೊತ್ತೇ? ನೀವೇನು ಶಾಶ್ವತವಲ್ಲ, ನಾನೇನು ಶಾಶ್ವತವಲ್ಲ, ಇವತ್ತಲ್ಲ ನಾಳೆ ನೀವು ಬಿಡಲಿಕ್ಕೆ ಬೇಕು. One single programme. ಆ ಪುಣ್ಯಾತ್ಮನಂದ ಎರಡು ಹೊತ್ತು ತಿನ್ನುತ್ತೇವಪ್ಪ ಎನ್ನುತ್ತಾರೆ. ನೂರು ರೂಪಾಯಿಯಲ್ಲಿ ಅವರಿಗೆ ಏನು ಬರುತ್ತಿತ್ತು, ನೀವು ಮಾಡಿರುವುದನ್ನು ನಮ್ಮ ಯಾವ ಪರಮಶತ್ರುನೂ ಟೀಕೆ ಮಾಡುವುದಕ್ಕಾಗುವುದಿಲ್ಲ. How do you conquer the heart of your rival in politics? It is not by your might. It is exericised by your discretion which is pro-people. ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಅನ್ನು ಏನು ಪ್ರಸೆಂಟ್ ಮಾಡಿದ್ದೀರಿ, with all humility, with all emphasis at my command I say, it is not pro-people. You have subjected yourself to pressure. You have yield to pressure. You have failed to apply your discretion. Nevertheless, ನಿಮ್ಮ ಹೋರಾಟದ ಬಗ್ಗೆ ನಮಗೆ ಅಭಿಮಾನವಿದೆ, ಜನಪರವಾಗಿ ನಿಲ್ಲತಕ್ಕಂಥ ಪ್ರಾಥಮಿಕ ಗುಣ ನಿಮ್ಮಲ್ಲೇನು ಇದೆ ಅದರ ಬಗ್ಗೆ ನಮಗೆ ಮೆಚ್ಚುಗೆ ಇದೆ. ಒಂದು ವೇಳೆ ನೀವು ಎಡವಿದರೂ ಕೂಡ ಅದು ದೊಡ್ಡ ವಿಷಯವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಬರುವ ದಿವಸಗಳಲ್ಲಿ, ನಾನು ರಾಜಕೀಯವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಬಹುಶಃ ನಮಗಿಂತ ವಯಸ್ಸಿನಲ್ಲಿ

ಚಿಕ್ಕವನು, ನನಗೆ ಇನ್ನು 57 ವರ್ಷ ದಾಟಿ 58 ಕ್ಕೆ ಬರುತ್ತಿದ್ದೇನೆ. ನಿಮಗೆ ಗಮನವಿರಬೇಕಾದ್ದು ಇನ್ನು ಒಂದೇ ವಿಚಾರಕ್ಕೆ. ನಾನು ಪ್ರಪಂಚವನ್ನು ಬಿಟ್ಟು ಹೋಗುವ ದಿವಸ ಹೇಗೆ ಹೋಗುತ್ತೇನೆಂದು ನಮ್ಮ ಎಲ್ಲಾ ಗಮನ ಆ ದಿವಸದ ಮೇಲೆ ಇರಬೇಕು. ಆ ದಿವಸ ನನಗೆ ಗ್ರ್ಯಾಂಡ್ ಡೇ ಆಗಬೇಕು, ಆ ದಿವಸ ಎಲ್ಲೂ ಕೂಡ ಜನರು ನನ್ನನ್ನು ಮರೆಯಬಾರದು, ಆ ದಿವಸ it should become an historic day ಎಂದು ನಿಮ್ಮನ್ನು ನೀವು ಅರ್ಪಣೆ ಮಾಡಿಕೊಂಡರೆ ಉಳಿದ ಎಲ್ಲಾ ವಿಚಾರಗಳು, it is all non-sense, ridiculous. ಯಡಿಯೂರಪ್ಪನವರೆ ಇದಕ್ಕೆಲ್ಲಾ ಏನು ಬೆಲೆನೇ ಇಲ್ಲ. ನಜೀರ್ ಒಬ್ಬ ತುಂಬಾ ಸಾಮಾನ್ಯ ಮನುಷ್ಯ, poor fellow. ಅವನು ಸತ್ತಾಗ. ಬಿಜಾಪುರದ ಜನ ಬೋರ್‌ವೆಲ್ ಒಂದಿದ್ದರೆ ಅದಕ್ಕೆ ಒಂದು ಹಾರ ಹಾಕಿ ನಜೀರ್ ಸಾಹೇಬರಿಗೆ ನಮ್ಮ ಶ್ರದ್ಧಾಂಜಲಿ ಎಂದು ಹೇಳುತ್ತಾರೆ. ಸೆಕ್ಯೂಲರಿಸಂ ಬಗ್ಗೆ ನಾವೆಲ್ಲಾ ಮಾತನಾಡುತ್ತೀವಲ್ಲಾ, its all a drama. Secularism should be matter of conviction and way of life. See how secular are the people. Look at their respect for Nazir. ಅವನು ನೀರು ಕೊಟ್ಟನೆಂಬ ಕಾರಣಕ್ಕೆ ಆ ಬೋರ್‌ವೆಲ್‌ಗೆ ಹಾರ ಹಾಕಿ ತಮ್ಮ ಗೌರವವನ್ನು ತೋರಿಸುತ್ತಾರೆ. ಈ ದೇಶದ ಜನರು ಹೃದಯ ಶ್ರೀಮಂತಿಕೆಯುಳ್ಳವರು. ಈ ಅಪರೂಪದ ಅವಕಾಶ ನಿಮಗೆ ಸಿಕ್ಕಿದೆ, ಬಹುಶಃ ಮುಂದಿನ ದಿವಸಗಳಲ್ಲಿ ಹೆಚ್ಚು ಜನಪರವಾದ ಒಲವನ್ನು ತೋರಿಸಿ ಮತ್ತೊಂದು ಸಾರಿ ಸಪ್ಲಿಮೆಂಟರಿ ಡಿಮಾಂಡ್‌ಗೆ ಬರಬೇಕಾದ ಸನ್ನಿವೇಶ ಒದಗಿ ಬಂದರೆ ಇಂಥ ಅನಪೇಕ್ಷಣೆಯ ವಿಚಾರಗಳನ್ನು ಬಿಟ್ಟು ಜನಪರವಾದ ಅಗತ್ಯಗಳನ್ನು ಪೂರೈಸುವುದಕ್ಕೆ ಮಾಡಿದ ಖರ್ಚು ಎಂದು ಬಂದರೆ ಇಷ್ಟು ಮಾತಿಲ್ಲದೇ ಅತ್ಯಂತ ಹೆಮ್ಮೆಯಿಂದ ಸಂತೋಷದಿಂದ ನಾವು ಬೆಂಬಲಿಸಬಹುದು ಎನ್ನುವ ಮಾತನ್ನು ಹೇಳಿ, ಈಗ ತಾವೇನು ಸಪ್ಲಿಮೆಂಟರಿ ಡಿಮಾಂಡ್ಸ್ ಇಟ್ಟಿದ್ದೀರಿ, ಇದಕ್ಕೆ ನಮ್ಮದೇನು ಆಕ್ಷೇಪಣೆ ಇಲ್ಲ. ನಾನು ಹೇಳಿದ ಮಾತುಗಳ ಬಗ್ಗೆ ತಾವು ಅನ್ಯಥ ಭಾವಿಸಬಾರದು. ನಾನು ಒಂದು ಸಮಾನ್ಯ ಕುಟುಂಬದ ಹಿನ್ನೆಲೆಯಲ್ಲಿ ಬಂದಂಥವನು, ಆ ದರ್ಜೆಯಿಂದ ವರ್ಗಾವಣೆ ತೆಗೆದುಕೊಳ್ಳುವುದಕ್ಕೆ ನನಗೆ ಖುಷಿಯಿಲ್ಲ, ಹಾಗೆ ಬದುಕಬೇಕೆಂದು ನನಗೆ ಆಸೆ ಆ ಒಂದು ಹಿನ್ನಲೆಯಲ್ಲಿ ನಾನು ತಮಗೆ ಕೆಲವೊಂದು ಮಾತುಗಳನ್ನು ಹೇಳಿದ್ದೇನೆ, ಬಹುಶಃ ತಾವು ಬೇರೆ ರೀತಿ ಭಾವಿಸದೆ ಸದ್ಭಾವನೆಯಿಂದ ತೆಗೆದುಕೊಳ್ಳುತ್ತಿರೆಂದು ವಿಶ್ವಾಸವಿಟ್ಟು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗಾಗಲೇ 8.45 ಗಂಟೆ ಆಗಿದೆ. ಆದಕಾರಣ ಮಾನ್ಯ ಸಚಿವರು ಮೊದಲು ಉತ್ತರ ಕೊಡಲಿ. ಆಮೇಲೆ ನೀವು ಕ್ಲಾರಿಫಿಕೇಷನ್ ಕೇಳುತ್ತಾ ಮಾತನಾಡಬಹುದಲ್ಲ ಅಭಯಚಂದ್ರರವರೆ. ನಾನು ಏಕೆ ಈ ರೀತಿ

ಹೇಳುತ್ತಿದ್ದೇನೆಂದರೆ ಲೇಟ್ ಆಗುತ್ತಿದೇಯಲ್ಲಾ ಎನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು: ಆಯಿತು ಪ್ರತಿಯೊಬ್ಬರು ಎರಡೆರಡು ನಿಮಿಷದಲ್ಲಿ ಮಾತಾನಾಡಿ ಮುಗಿಸಲು ನಾನು ಅವಕಾಶ ಕೊಡುತ್ತೇನೆ. ಎರಡೇ ಎರಡು ನಿಮಿಷ ಮಾತನಾಡಬೇಕು. ನಾನು ಬೆಲ್ ಹೊಡೆದ ಕೂಡಲೇ ಮಾತನಾಡುವುದನ್ನು ನಿಲ್ಲಿಸಬೇಕು ನಾನು ಟೈಂ ಸೆಟ್ ಮಾಡಿ ಇಟ್ಟುಕೊಳ್ಳುತ್ತೇನೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಎರಡು ನಿಮಿಷಕ್ಕಿಂತ ಹೆಚ್ಚು ಸಮಯ ಕೊಡುವುದಿಲ್ಲ. ನಾನು ಬೆಲ್ ಹೊಡೆದ ತಕ್ಷಣ ಕುಳಿತುಕೊಳ್ಳಬೇಕು. ಇಲ್ಲದೇ ಹೋದರೆ ತಾವು ಮಾತನಾಡುವುದು ಯಾವುದೂ ರೇಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾತನಾಡುವುದು ಹಿರಿಯ ಸದಸ್ಯರುಗಳೂ ಕೂಡ ಇರುತ್ತಾರೆ. ಹೀಗೆ ತಾವು ಸಮಯ ನಗದಿ ಮಾಡಿದರೆ ಹೇಗೆ?

ಉಪಾಧ್ಯಕ್ಷರು: ಪಾಟೀಲರೆ ಸಮಯ ಇದ್ದಿದ್ದರೆ ಮಾತನಾಡಬಹುದಿತ್ತು. ಸಮಯ ಇಲ್ಲದಿರುವುದರಿಂದ ದಯವಿಟ್ಟು ಸಹಕಾರ ಕೊಡಿ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾವು ಕೂಡ ಕೆಲವು ವಿಷಯಗಳನ್ನು ಹೇಳಬೇಕೆಂದು ತಯಾರು ಮಾಡಿಕೊಂಡು ಬಂದಿದ್ದೇವೆ. ನಾವು ಓದಿಕೊಂಡು ಬಂದಿದ್ದೇವೆ. ನೀವು ದಯಮಾಡಿ ಸಮಯ ಬಂಧನ ಹಾಕಬೇಡಿ.

ಉಪಾಧ್ಯಕ್ಷರು: ನೀವು ಹೇಳುವುದು ಸರಿ. ಆದರೆ ಈಗಾಗಲೇ 8.45 ಆಗಿದೆ. ಆದಕಾರಣ ನೀವು ಎರಡು ನಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ರಿಪ್ಲೈ ಬೇಕಾದರೆ ನಾಳೆ ಕೊಡಲಿ.

ಉಪಾಧ್ಯಕ್ಷರು: ಅದೇನು ಮಾತು ಅಂತ ಮಾತನಾಡುತ್ತೀರಿ. ಸುಮ್ಮನೆ ಕುಳಿತುಕೊಳ್ಳಿ. ಉತ್ತರ ನಾಳೆ ಕೊಡುವುದಾಗಿದ್ದರೆ ಸಂಜೆ 6.00 ಗಂಟೆಗೆ ಏಕೆ ಪ್ರಾರಂಭ ಮಾಡಬೇಕಾಗಿತ್ತು?

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಇನ್ನೂ ಕೆಲವರು ಮಾತನಾಡೇ ಇಲ್ಲ. ಅವರುಗಳೆಲ್ಲರೂ ಕೂಡ ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು: ಎಷ್ಟು ಗಂಟೆ ಮಾತನಾಡಬೇಕು ಹೇಳಿ. ಡಿಮ್ಯಾಂಡ್ ಮೇಲೆ ತಾನೇ ಮಾತನಾಡಬೇಕು. ಎಷ್ಟು ಗಂಟೆಗಳ ಕಾಲ ಮಾತನಾಡಬೇಕು ಹೇಳಿ.

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಾವೂ ಕೂಡ ಹೇಳುವ ವಿಷಯಗಳು ಇವೆ.

ಉಪಾಧ್ಯಕ್ಷರು: ಆಯಿತು. ಎರಡೆರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದೇನೆ. ಅದಕ್ಕೂ ತಾವು ಒಪ್ಪಿಕೊಳ್ಳದಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಬಿ.ಆರ್.ಪಾಟೀಲರೆ ತಾವು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್ (ಆಳಂದ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಕೇವಲ ಹಣಕಾಸಿನ ಸಚಿವರು ಮಾತ್ರವಲ್ಲ ಈ ರಾಜ್ಯದ ಸಣ್ಣ ನೀರಾವರಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತಂಥ ಸಚಿವರೂ ಕೂಡ ಆಗಿದ್ದಾರೆ. ಈ ಜವಾಬ್ದಾರಿಯನ್ನು ಹೊತ್ತಿರುವ ಇವರು ಈ ರಾಜ್ಯದ ಸಣ್ಣ ನೀರಾವರಿ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಎಲ್ಲ ಬರಪ್ರದೇಶವಿದೆ, ಎಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದೆ, ಎಲ್ಲಿ ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ಮೇವಿಲ್ಲ, ಅಂಥ ಕಡೆಗಳಿಗೆ ಹೆಚ್ಚಿನ ಗಮನವಹಿಸಿ ಸಣ್ಣ ನೀರಾವರಿಗೆ ಹೆಚ್ಚು ಹಣ ತೊಡಗಿಸುತ್ತಾರೆನ್ನುವ ನರೀಕ್ಷೆ ನನಗೆ ಇತ್ತು. ಆದರೆ ಇವೊತ್ತು ಅವರ ಬೇಡಿಕೆಯನ್ನು ನೋಡಿದರೆ ಹೊಸ ಕೆರೆಗಳಿಗೆ ಕೇವಲ 25 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ತಾವೇ ಹಣಕಾಸಿನ ಸಚಿವರಾಗಿದ್ದು ತಾವೇ ಸಣ್ಣ ನೀರಾವರಿ ಖಾತೆಯ ಜವಾಬ್ದಾರಿಯನ್ನು ಹೊತ್ತಿರುವಂಥ ಈ ಸಂದರ್ಭದಲ್ಲಿ ಸಣ್ಣ ನೀರಾವರಿ ಇಲಾಖೆಯನ್ನು ತಾವು ನಿರ್ಲಕ್ಷ್ಯ ಮಾಡಬೇಡಿ. ನಿಮ್ಮ ಇಲಾಖೆ ಮುಂಬರುವಂಥ ದಿನಗಳಲ್ಲಿ ಬಹಳ ಮಹತ್ವವಾದ ಪಾತ್ರವನ್ನು ವಹಿಸಬೇಕಾಗಿದೆ. ಏಕೆಂದರೆ ಇವೊತ್ತು ನೀರಾವರಿ ತಜ್ಞರುಗಳು ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಏನಾದರೂ ಅಂತರ್ಜಲ ಹೆಚ್ಚಾಗಬೇಕಿದ್ದರೆ ಮತ್ತು ಅತ್ಯಂತ ಕಡಿಮೆ ವೆಚ್ಚದಲ್ಲಿ ನೀರಿನ ಜಲಸಂವರ್ಧನೆ ಆಗಬೇಕಾಗಿದ್ದರೆ ಸಣ್ಣ ನೀರಾವರಿ ಇಲಾಖೆ ಬಲಿಷ್ಟವಾಗಬೇಕು. ಅದಕ್ಕೆ ಹೆಚ್ಚಿನ ಅನುದಾನ ಸಿಗಬೇಕು ಮತ್ತು ಎಲ್ಲೆಲ್ಲಿ ಕೆರೆಕಟ್ಟೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆಯೋ ಅಲ್ಲೆಲ್ಲಾ ಕೆರೆಕಟ್ಟೆಗಳನ್ನು

ಕಟ್ಟಬೇಕು ಎನ್ನುವಂಥ ಸಾಮಾನ್ಯ ಅಭಿಪ್ರಾಯವನ್ನು ಇವೊತ್ತು ತಜ್ಞರು ಮೂಡಿಸಿರುವಂಥ ಸಂದರ್ಭದಲ್ಲಿ ನೀವು ಇವೊತ್ತು ಸಣ್ಣ ನೀರಾವರಿ ಮಂತ್ರಿಗಳಾಗಿ ಮತ್ತು ಹಣಕಾಸಿನ ಸಚಿವರಾಗಿ ನೀವೇ ಆ ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಬಹಳ ನಿರಾಶೆಯನ್ನುಂಟು ಮಾಡಿದ್ದೀರಿ. ಕೇವಲ 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇವೊತ್ತು ನಾನು ನಿಮಗೆ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಇಡೀ ನಮ್ಮ ತಾಲ್ಲೂಕಿನಲ್ಲಿ ಜಲಸಂವರ್ಧನೆ ಮಾಡಬೇಕಾಗಿದ್ದರೆ 423 ಕೋಟಿ ರೂ.ಗಳ ಒಂದು ಬಜೆಟ್ ಮಂಡಿಸುತ್ತೇನೆ. ಇದರಲ್ಲಿ 20 ಸಣ್ಣ ನೀರಾವರಿ ಕೆರೆಗಳನ್ನು ತೋರಿಸಿದ್ದೇನೆ. ತಮ್ಮ ಹತ್ತಿರ ನಾನು ಅನೇಕ ಸಲ ಬೇಡಿಕೊಂಡೆ, ಸಾರ್ ನನಗೆ ಏನೂ ಕೊಡಬೇಡಿ, ನನಗೆ ಏನೂ ಕೊಡಬೇಡಿ. ನನಗೆ ಸಣ್ಣ ನೀರಾವರಿ ಕೆರೆಗಳನ್ನು ಮಾಡುವುದಕ್ಕೆ ದುಡ್ಡು ಕೊಡಿ, ದುಡ್ಡು ಕೊಡಿ ಎಂದು ಕೇಳಿಕೊಂಡೆ. ಮೊನ್ನೆ ಕೊಟ್ಟಿದ್ದೀರಿ ಕೇವಲ ಎರಡೂವರೆ ಕೋಟಿ ರೂಪಾಯಿಗಳನ್ನು ಈ ಎರಡೂವರೆ ಕೋಟಿ ರೂ.ಗಳಲ್ಲಿ ಒಂದು ಕೆರೆ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಈ ಬೇಡಿಕೆ ಬಂದಾಗ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತಂದು ಅದಕ್ಕೆ ಒಪ್ಪಿಗೆ ತೆಗೆದುಕೊಂಡಿದ್ದರೆ ನೀವು ಹೊತ್ತಂಥ ಸಣ್ಣ ನೀರಾವರಿ ಇಲಾಖೆಯಲ್ಲಿ ಸ್ವಲ್ಪ ಕ್ರಾಂತಿಕಾರಕ ಬದಲಾವಣೆ ಮಾಡಿ ಈ ರಾಜ್ಯಕ್ಕೆ ನ್ಯಾಯ ಕೊಡುವಂಥ ಕೆಲಸವನ್ನು ನೀವು ಮಾಡಬೇಕಾಗಿತ್ತು. ಇವೊತ್ತು ಇಡೀ ಜಗತ್ತಿನಲ್ಲಿ ನಾವು ಗ್ಲೋಬಲ್ ವಾರ್ನಿಂಗ್ ಎಂಬುದನ್ನು ಕೇಳುತ್ತಿದ್ದೇವೆ. ಇದು ಬಹಳ ದೊಡ್ಡ ಜ್ವಲಂತ ಸಮಸ್ಯೆ. ಇಡೀ ಭೂಮಿ ಕೆಂಡವಾಗುತ್ತಿದೆ. ಇನ್ನು ಮುಂದೆ ನೀರಿನ ಸಮಸ್ಯೆ ಬರೇ ನಮ್ಮ ನಾಡಿಗಷ್ಟೇ ಅಲ್ಲ, ಇಡೀ ಜಗತ್ತಿಗೇ ಕಾಡುವಂಥ ಸಂದರ್ಭದಲ್ಲಿ ನಮ್ಮ ಹಣಕಾಸಿನ ಸಚಿವರು ಸಣ್ಣ ನೀರಾವರಿ ಇಲಾಖೆಗೆ ಕಡಿಮೆ ಹಣವನ್ನು ಒದಗಿಸಿರುವುದು ಸರಿಯಲ್ಲ. ನಾನು ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಒಂದು ಧೈರ್ಯವಾದ ನಿರ್ಣಯವನ್ನು ನೀವು ತೆಗೆದುಕೊಳ್ಳಬೇಕು. ಈ ರಾಜ್ಯದಲ್ಲಿ ನೀವು ಸಾರಾಯಿ ನಿಷೇಧ ಮಾಡಿ ಒಳ್ಳೆಯ ಹೆಸರನ್ನು ಗಳಿಸಿಕೊಂಡಿರಿ. ಅದೇ ರೀತಿ ಯಾವ ತರಹ ನೀವು ಲಾಟರಿ ನಿಷೇಧ ಮಾಡಿ ಒಳ್ಳೆಯ ಹೆಸರನ್ನು ಗಳಿಸಿದಿರೋ, ಇವೊತ್ತು ನಿಮ್ಮ ಕೈಯಲ್ಲಿ ಅಧಿಕಾರವಿದೆ, ದಯಮಾಡಿ ಈ ಸಣ್ಣ ನೀರಾವರಿ ಇಲಾಖೆಗೆ ಅತ್ಯಂತ ಹೆಚ್ಚಿನ ಹಣವನ್ನು ಒದಗಿಸಿ ನೀವು ರಾಜ್ಯದಲ್ಲಿ ಜಲಸಂವರ್ಧನೆಗೆ ತಾವು ಅನುಕೂಲ ಮಾಡಿಕೊಡಬೇಕು. ಮೊನ್ನೆ ತಾವು ಸೆಮಿನಾರ್‌ಗೆ ಬಂದಿದ್ದೀರಿ. ಆಗ ಅಲ್ಲಿಗೆ ಒಳ್ಳೊಳ್ಳೆಯ ತಜ್ಞರುಗಳು ಬಂದಿದ್ದರು. ಯಲ್ಲಪ್ಪರೆಡ್ಡಿ ಮತ್ತು ಬೇರೆ ಬೇರೆ

ತಜ್ಞರುಗಳು ಬಂದಿದ್ದರು. ಇವೊತ್ತು ಎಷ್ಟೊಂದು ಗಂಭೀರವಾದ ಪರಿಸ್ಥಿತಿ ಇದೆಯೆಂದರೆ ಎಲ್ಲಾ ಕಡೆಯಲ್ಲಿಯೂ ಕೂಡ ಕುಡಿಯುವುದಕ್ಕೆ ನೀರಿಲ್ಲವಾಗಿದೆ. ಇನ್ನು ಮತ್ತೊಂದು ಕಡೆ ಕೃಷಿ ಇಲಾಖೆಯಲ್ಲಿ ಏನು ಅನುದಾನವನ್ನು ಕೇಳಿರುವುದನ್ನು ನೋಡಿದರೆ ಜಲಸಂವರ್ಧನೆಗೆ ಮತ್ತು ವಾಟರ್ ಹಾರ್ವೆಸ್ಟಿಂಗ್‌ಗೆ ತಾವು ಯಾವ ತರಹ ಈ ಬಜೆಟ್ ಒಪ್ಪಿಗೆಯನ್ನು ಕೇಳುತ್ತಿದ್ದೀರಿ. ಇವೊತ್ತು ಈ ನಾಡಿಗೆ ಬಹಳ ಕಾಡುತ್ತಿರುವಂಥ ಸಮಸ್ಯೆ ಎಂದರೆ ವಾಟರ್‌ಶೆಡ್ ಮತ್ತು ಸಣ್ಣ ಕೆರೆ ನೀರಾವರಿ. ಇದರ ಬಗ್ಗೆ ನೀವು ಲಕ್ಷ್ಯ ಕೊಡದೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀವು ಬೇಡಿಕೆಯನ್ನು ತಂದಿದ್ದೀರಲ್ಲ. ಇದನ್ನು ಯಾವ ತರಹ ನಾವು ಒಪ್ಪಿಕೊಳ್ಳಬೇಕು. ಆದುದರಿಂದ ಇದರ ಬಗ್ಗೆ ತಾವು ಪುನರ್ ಪರಿಶೀಲನೆಯನ್ನು ಮಾಡಬೇಕು ಮತ್ತು ಉತ್ತರದಲ್ಲಿ ನಾನು ನಿಮ್ಮಿಂದ ಬಹಳ ನಿರೀಕ್ಷಣೆ ಮಾಡಿದ್ದೇನೆ ಮತ್ತು ಈಗಲೂ ನಿಮಗೆ ಕೈಜೋಡಿಸಿ ಕೇಳಿಕೊಳ್ಳುತ್ತೇನೆ, ಇವೊತ್ತು ಸಣ್ಣ ನೀರಾವರಿಗೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ತಾವು ಮುಂದಾಗಿ. ಇವೊತ್ತು ಜಲಸಂವರ್ಧನೆಗೂ ಕೂಡ ಹೆಚ್ಚು ಲಕ್ಷ್ಯವನ್ನು ಕೊಟ್ಟಿಲ್ಲ. ಒಂದು ರೂಪಾಯಿಯನ್ನು ಕೂಡ ಇದಕ್ಕಾಗಿ ಕೊಟ್ಟಿಲ್ಲ. ಕೃಷಿ ಇಲಾಖೆ ಕೆಳಗಡೆ ಬರತಕ್ಕಂಥ ಜಲಸಂವರ್ಧನೆಗೆ ಒಂದು ರೂಪಾಯಿಯನ್ನು ಸಹ ಕೊಟ್ಟಿಲ್ಲ. ಇವೊತ್ತು ಸರ್ಕಾರದವರಾದ ನೀವು ಹೊಸ ಕೃಷಿ ನೀತಿಯನ್ನು ಅಳವಡಿಸುತ್ತೇವೆ ಎಂದು ಹೇಳಿದ್ದಿರಿ. ಹೊಸ ಕೃಷಿ ನೀತಿಯನ್ನು ಅಳವಡಿಸಿ ರಾಜ್ಯದ ಉತ್ಪಾದನೆ ಜಾಸ್ತಿ ಮಾಡಬೇಕಾಗಿದ್ದರೆ ಇವೊತ್ತು ಜಲ ಸಂವರ್ಧನೆಗೆ ಹೆಚ್ಚು ಹಣವನ್ನು ಒದಗಿಸಬೇಕಾಗುತ್ತದೆ. ಇದಲ್ಲದೇ ಇವೊತ್ತು ನೀವು ಕೃಷಿ ನೀತಿಗೆ ಎಷ್ಟು ಬಂಡವಾಳದ ರೂಪದಲ್ಲಿ ದುಡ್ಡನ್ನು ಕೊಡುತ್ತೀರೋ ಅದನ್ನು ಕೂಡ ಹೇಳಬೇಕಾಗುತ್ತದೆ. ಆದರೆ ನೀವು ಅದರ ಬಗ್ಗೆ ಹೇಳಿಲ್ಲ. ನೀವು ಉತ್ಪಾದನೆ ಜಾಸ್ತಿ ಮಾಡಬೇಕಿದ್ದರೆ, ಹೊಸ ಕೃಷಿ ನೀತಿಯನ್ನು ಅಳವಡಿಸಬೇಕಿದ್ದರೆ ಎಷ್ಟು ದುಡ್ಡನ್ನು ಒದಗಿಸುತ್ತೀರಿ ಎಂಬುದನ್ನು ನೀವು ಹೇಳಿಲ್ಲ. ಇದಲ್ಲದೇ ಇಂದು ಕೃಷಿ ಇಲಾಖೆಯಲ್ಲಿ ಅಧಿಕಾರಿಗಳ ಹುದ್ದೆಗಳು ಬಹಳ ಖಾಲಿ ಇವೆ. ಈ ಅಧಿಕಾರಿಗಳ ಜಾಗವನ್ನು ಖಾಲಿ ಇಟ್ಟು ಇವೊತ್ತು ಕೃಷಿ ನೀತಿಯನ್ನು ಅನುಷ್ಠಾನ ಮಾಡುತ್ತೇವೆ ಎನ್ನುತ್ತೀರಲ್ಲ. ಇದು ಸಾಧ್ಯವೇ? ದಯಮಾಡಿ ತಾವು ಇದರ ಬಗ್ಗೆ ಗಮನಸಬೇಕು. ಇವೊತ್ತು ನೀವೇ ಒಂದು ಬಿಲ್ ಅನ್ನು ತರುತ್ತಿದ್ದೀರಿ. Karnataka Ground Water Regulation & Control Board ಇದು ಬಹಳ ಕ್ರಾಂತಿಕಾರಕವಾದ ಬಿಲ್. ಯಾವತ್ತೋ ಬರಬೇಕಾಗಿತ್ತು. ಬಹುಶಃ ನಾಳೆ ಇದನ್ನು ಮಂಡಿಸುತ್ತೀರೆಂದು ಕಾಣುತ್ತದೆ. ನಾವು ಸದನದಲ್ಲಿ ಚರ್ಚೆ ಮಾಡಿ

ಇದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ ಮತ್ತು ಕೆಲವು ಸಲಹೆಗಳನ್ನೂ ಕೂಡ ನಾವು ಕೊಡುತ್ತೇವೆ. ಆದರೆ ಈ Karnataka Ground Water Regulation & Control Board ಬಿಲ್ ಒಪ್ಪಿದರೂ ಅದಕ್ಕೆ ಒಂದು ರೂಪಾಯಿಯ ಬಗ್ಗೆಯೂ ಕ್ರಮ ಕೈಗೊಳ್ಳಬೇಕಾದರೆ ಈ ಬಿಲ್ ಪ್ರಕಾರ ಅವಕಾಶವಿಲ್ಲ. ಇಂಥ ಒಂದು ಕ್ರಾಂತಿಕಾರಕವಾದ ಬಿಲ್ ಅನ್ನು ತಾವು ತರುತ್ತಿದ್ದೀರಿ. ಇದರ ಮೂಲಕ ಡೆವಲಪ್‌ಮೆಂಟ್ ಮಾಡಬೇಕು. ಅಂದರೆ ಕೆರೆಕಟ್ಟೆಗಳನ್ನು ಕಟ್ಟಬೇಕು ಮತ್ತು ವಾಟರ್‌ಶೆಡ್ ಡಿಪಾರ್ಟ್‌ಮೆಂಟ್‌ಗೆ ಖರ್ಚು ಮಾಡಬೇಕು. ಇದರ ಬಗ್ಗೆ ನಾಳೆ ಬಿಲ್ ಬಗ್ಗೆ ಚರ್ಚೆಗೆ ಬಂದಾಗ ವಿವರವಾಗಿ ಹೇಳುತ್ತೇನೆ, ಆದರೆ ಒಂದು ರೂಪಾಯಿಯನ್ನು ಕೂಡ ತಾವು ಇಲ್ಲಿ ಇಟ್ಟಿಲ್ಲ. ಈ ರೀತಿಯಾದರೆ ಬಿಲ್ ತಂದರೂ ಕೂಡ ಉಪಯೋಗ ಏನಾಗುತ್ತದೆ? ಬರೀ ಬೋರ್‌ವೆಲ್ ಕೊರೆದರೆ ನಿಯಂತ್ರಣ ಮಾಡಬಹುದು. ಬಾವಿಗಳ ಅಂತರವನ್ನು ನಿಯಂತ್ರಣವನ್ನು ಮಾಡಬಹುದು. ಆದರೆ development ಬಗ್ಗೆ ಕಾನೂನು ಏನು ತರುತ್ತಿದ್ದೀರಿ ಅದರ ಬಗ್ಗೆ ನೀವು ಏನೇನು ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಮುಂಜಾನೆ ಚರ್ಚೆ ಮಾಡಿದಾಗ ಈ ವಿಷಯ ಬಂತು ಡಾ:ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡಿ, ಇವತ್ತು PWD ಇಲಾಖೆಯಲ್ಲಿ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡುತ್ತಿದ್ದಾರೆ. ಕುಡಿಯುವ ನೀರಿನ ಮಂತ್ರಿ ಬೇಕಾ ಬಿಟ್ಟಿ ದುಡ್ಡನ್ನು ಹಂಚುತ್ತಿದ್ದಾರೆ. ಈ ರೀತಿ ದುಡ್ಡುಗಳನ್ನು ಹಂಚಿಕೊಂಡು ಹೋದರೆ ನೀವು regional imbalance ಅನ್ನು ಇನ್ನೂ ಜಾಸ್ತಿ ಮಾಡುತ್ತೀರಿ. ಅದಕ್ಕೆ ಮುಂಜಾನೆ ಮಾನ್ಯ ಖರ್ಗೆ, ನಾನು ಹಾಗೂ ಮಾನ್ಯ ವೈಜನಾಥ್ ಪಾಟೀಲ್‌ರವರು ಗಲಾಟೆ ಮಾಡಿದಾಗ, ಅವರು ಹೇಳಿದರು. ಪೂರಕ ಬಜೆಟ್‌ನ್ನು ಏನು ತರುತ್ತಿದ್ದೀರಿ, ಅದರಲ್ಲಿ ಡಾ: ನಂಜುಂಡಪ್ಪ ವರದಿಗೆ ಎಷ್ಟು ದುಡ್ಡು ಕೊಡುತ್ತೀರಿ? ಯಾವ್ಯಾವ ಬಾಬ್ತಿಗೆ ಎಷ್ಟೆಷ್ಟು ಖರ್ಚು ಮಾಡುತ್ತೀರಿ ಎನ್ನುವುದನ್ನು ನೀವು ಸ್ಪಷ್ಟವಾಗಿ ನಮೂದಿಸಿಬಹುದು. ಆ ಕಾರಣಕ್ಕಾಗಿ ನಾವು ಡಾ:ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡುತ್ತೇವೆಂದು ಬೆಳಿಗ್ಗೆ ಹೇಳಿದೆವು. ಇವತ್ತೂ ಕೂಡ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಅಧಿಕೃತವಾಗಿ ಸರ್ಕಾರದ ಆದೇಶ ಇಲ್ಲ. ನೀವು announce ಮಾಡಿದಿರಿ, announce ಮಾಡಿ ಇಲಾಖೆಗಳಿಗೆ ಹೇಳಿದಿರಿ. ಆದರೆ ಆ ಇಲಾಖೆಗಳ ಮೇಲೆ ಯಾವುದೇ ನಿಬಂಧನೆ ಇಲ್ಲ. ಅವರು ಮಾಡಬಹುದು, ಮಾಡದಿರಬಹುದು. ಅದಕ್ಕೆ ಇವತ್ತೂ ಕೂಡ ಸರ್ಕಾರದ ಆದೇಶ ಇಲ್ಲ. ಅಲ್ಲಿ ಶ್ರೀಮಾನ್ ಎ. ರವೀಂದ್ರರವರನ್ನು ಅಧ್ಯಕ್ಷರನ್ನಾಗಿ ಮಾಡಿ ಕೂರಿಸಿದ್ದೀರಿ. ಆ ರವೀಂದ್ರರವರಿಗೆ

ಯಾವುದೇ ಹಿಡಿತ ಇಲ್ಲ. ನಾವು ಅವರ ಹತ್ತಿರ ಹೋಗಿ ಮಾತನಾಡಿದೆ. ತಾವು ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿದ್ದೀರಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ತಾವು ಬಜೆಟ್ ಮೇಲೆ ಮಾತನಾಡುವ ಹಾಗೆ ಮಾತನಾಡುತ್ತಿದ್ದೀರಿ.

ಶ್ರೀ ಬಿ.ಆರ್.ಪಾಟೀಲ್: ನಾನು ಪತ್ರಿಕೆಯಲ್ಲಿ ನನ್ನ ಹೆಸರು ಬರಬೇಕು ಎಂದು ಭಾಷಣ ಮಾಡುತ್ತಿದ್ದೆನಾ? ಏನಾದರೂ ಬೊಗಳೆ ಭಾಷಣ ಮಾಡುತ್ತಿದ್ದೆನಾ? ಮಂತ್ರಿಗಳಾಗಿ ತಾವು ಈ ರೀತಿಯಾಗಿ ಮಾತನಾಡಬಾರದು. ನಾನು ಈ ರಾಜ್ಯದ ಅಭಿವೃದ್ಧಿ ಕೆಲಸದ ಬಗ್ಗೆ ಮಾತನಾಡುತ್ತಿದ್ದೇನೆ. ನಮಗೆ ಸಹನೆ ಇಲ್ಲವೆಂದರೆ ನೀವು ಹೋಗಿ. ನಿಮಗೆ ಯಾರು ಇಲ್ಲಿ ಕುಳಿತುಕೊಳ್ಳಿ ಎಂದು ಹೇಳಿದ್ದಾರೆ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಇಲ್ಲಿ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ಇಲ್ಲವೇ?

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಉಪಾಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ, ನಾನು ಮಾತನಾಡುತ್ತಿದ್ದೇನೆ. ನೀವು ಮಂತ್ರಿಯಾಗಿ ತಕರಾರು ಮಾಡಬಾರದು. ತಕರಾರು ಮಾಡುವುದಕ್ಕೆ ನೀವ್ಯಾರು? ಇದು ಸಾರ್ವಭೌಮ ಸದನ. ನಮಗೆ ಮಾತನಾಡುವುದಕ್ಕೆ ಮಾನ್ಯ ಉಪಾಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಮಹದೇವಪ್ರಸಾದ್ ಈಗ ನೀವು ಕುಳಿತುಕೊಂಡರೆ ಅವರು ಮುಗಿಸಿಬಿಡುತ್ತಾರೆ. ಈಗ ಸಮಯ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಅವರಿಗೆ ಅಧಿಕಾರವನ್ನು ಕೊಡಲಿಲ್ಲ, ಅವರನ್ನು ಈಚೆಗೆ ಹಾಕಿಬಿಟ್ಟಿರಿ. ಅವರಿಗೆ ಏಕೆ ತೊಂದರೆ ಕೊಡುತ್ತಿದ್ದೀರಿ? ಪಾಪ ಅವರೆಲ್ಲಾ ಶಾಂತಿಯಿಂದ ಕೇಳುತ್ತಿದ್ದಾರೆ.

ಶ್ರೀ ಬಿ.ಆರ್.ಪಾಟೀಲ್: ನೀವು ಮಂತ್ರಿಯಾಗಿ ನಮಗೆ ಮಾತನಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಜನತಾದಳಕ್ಕೆ ಈ ಬಜೆಟ್ ಬಗ್ಗೆ ನಂಬಿಕೆ ಇಲ್ಲ. ಅವರಿಗೆ ನಂಬಿಕೆ ಇದೆ, ಅವರು ಕೇಳುತ್ತಿದ್ದಾರೆ. ನೀವು ತಾಳ್ಮೆಯಿಂದ ಇರಿ. ದಯವಿಟ್ಟು ನೀವು ಏನೂ ಮಾತನಾಡಬೇಡಿ. ಅವರು ಮಾತನಾಡಲಿ ಬಿಡಿ.

ಶ್ರೀ ಬಿ.ಆರ್.ಪಾಟೀಲ್: ನಿಮಗೆ ಕೇಳುವುದಕ್ಕೆ ಆಗುವುದಿಲ್ಲವೆಂದರೆ ಬಿಡಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ನೀವು ಪೂರಕ ಅಂದಾಜಿನ ಬಗ್ಗೆ ಮಾತನಾಡಿ ಎಂದು ಹೇಳುವುದು.

ಶ್ರೀ ಬಿ.ಆರ್.ಪಾಟೀಲ್: ನಾನು ಪೂರಕ ಅಂದಾಜಿನ ಬಗ್ಗೆ ಮಾತನಾಡುತ್ತಿರುವುದು. ನಾನು ಬುರುಡೆ ಮಾತನಾಡುತ್ತಿದ್ದೇನಾ? ಸಣ್ಣ ನೀರಾವರಿಗೆ ಕಡಿಮೆ ಹಣವನ್ನು ಇಟ್ಟಿದ್ದೀರಿ, ಹೆಚ್ಚಿಗೆ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಪೂರಕ ಅಂದಾಜಿನಲ್ಲಿ ಏನು ಮಂಡಿಸಿದ್ದಾರೆ ಅದರ ಬಗ್ಗೆ ಮಾತನಾಡಬೇಕು.

ಶ್ರೀ ಬಿ.ಆರ್.ಪಾಟೀಲ್: ಅದನ್ನೇ ಹೇಳುತ್ತಿದ್ದೇನೆ. ಇಲ್ಲಿಯವರೆಗೆ ಉದ್ದುದ್ದ ಭಾಷಣ ಮಾಡಿದರು, ಅದರ ಬಗ್ಗೆ ಹೇಳಲಿಲ್ಲ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಆ regulations, ಮತ್ತೊಂದು ಮೊಗದೊಂದು ನೀವು ಎಲ್ಲಾ ಹೇಳುತ್ತಾ ಕುಳಿತುಕೊಂಡಿದ್ದೀರಿ.

ಶ್ರೀ ಬಿ.ಆರ್.ಪಾಟೀಲ್: ನಾನು ಎಲ್ಲಾ ಅಂಕಿ ಸಂಖ್ಯೆಯನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇನೆ.

ಶ್ರೀ ಕೆ.ಅನ್ನದಾನಿ: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾತನಾಡಿದವರೆಲ್ಲಾ ಬರೀ ರಾಜಕೀಯ ಮಾತನಾಡಿ ಮುಂದುವರೆಸಿದರೆ ಮತ್ತೆ ಗಲಾಟೆಯಾಗುತ್ತದೆ.

ಶ್ರೀ ಬಿ.ಆರ್.ಪಾಟೀಲ್: ನಾನು ರಾಜಕೀಯ ಮಾತನಾಡುವುದಕ್ಕೆ ಬಂದಿಲ್ಲ.

ಶ್ರೀ ಕೆ. ಅನ್ನದಾನಿ: ಇವರು subject ಏನದೆ ಅದನ್ನು ಮಾತನಾಡಲಿ.

ಶ್ರೀ ಬಿ.ಆರ್.ಪಾಟೀಲ್: ನಾನು subject ಮೇಲೆ ಮಾತನಾಡಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು: ಅನ್ನದಾನಿಯವರೆ, ಇದು ಸಮಯ ಅಲ್ಲ, ಏಕೆ ಸುಮ್ಮನೆ ಈ ರೀತಿ ಮಾಡುತ್ತೀರಿ?

ಶ್ರೀ ಕೆ.ಅನ್ನದಾನಿ: ಏನು ಮಾತನಾಡುತ್ತಾರೆ? ಅಷ್ಟು ಹೊತ್ತಿನಿಂದ ಇಲ್ಲಿ ಬರೀ ರಾಜಕೀಯವನ್ನು ಮಾತನಾಡುತ್ತಿದ್ದಾರೆ.

ಉಪಾಧ್ಯಕ್ಷರು: ಈಗ ಅವರು ಮುಗಿಸಲಿಕ್ಕೆ ಬಿಟ್ಟುಬಿಡಿ.

ಶ್ರೀ ಬಿ.ಆರ್.ಪಾಟೀಲ್: ನಾನು ಮಾತನಾಡಿದ ಕಡತ ತೆಗೆಯಿರಿ. ರಾಜಕೀಯ ಇದ್ದರೆ ಕಡತದಿಂದ ತೆಗೆದುಹಾಕಿ.

ಉಪಾಧ್ಯಕ್ಷರು: ಈಗ ನೀವಿಬ್ಬರೂ ಕುಳಿತುಕೊಳ್ಳಿ, ಈಗ ನಾನು ಬೇರೆಯವರನ್ನು ಕರೆಯುತ್ತೇನೆ, ಇದರಲ್ಲಿ ತಾವು ಸಮಯವನ್ನು ಹಾಳು ಮಾಡಬೇಡಿ. ಪಾಟೀಲರೆ ಬೇಗ ಮುಗಿಸಿ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್: ಈ ರೀತಿ ನನಗೆ ಅಡ್ಡಿ ಬಂದರೆ ನಾನು ಇನ್ನೂ ಬಿಡುವವನಲ್ಲ. ನೀವು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುವವನಲ್ಲ. ಮಾನ್ಯ ಸಚಿವರಿಗೆ ಒಂದು ಸೂಕ್ಷ್ಮವಾದ ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ. ಜಿಲ್ಲಾಪಂಚಾಯತ್ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು ಗ್ರಾಮೀಣ ಪ್ರದೇಶವನ್ನು ಪ್ರತಿನಿಧಿಸುತ್ತಾರೆ. ಶಿಕ್ಷಣ ಇಲಾಖೆ ಕೂಡ ಜಿಲ್ಲಾ ಪಂಚಾಯತ್‌ಗೆ ಬರುತ್ತದೆ. ಇವತ್ತು ಪಟ್ಟಣ ಪ್ರದೇಶದಲ್ಲಿ Primary school ಮತ್ತು High schoolಗಳು ಕಟ್ಟಬೇಕಾದರೆ ಜಿಲ್ಲಾಪಂಚಾಯತ್ ಸದಸ್ಯರು ಯಾವುದೇ ಸೂಚನೆಯನ್ನು ಕೊಡುವುದಿಲ್ಲ ಹಾಗೂ ಪ್ರಸ್ತಾವನೆಯನ್ನು ಕೂಡ ಕೊಡುವುದಿಲ್ಲ. ಅಲ್ಲಿ school ಗಳನ್ನು ಕಟ್ಟಬೇಕೆಂದರೆ ಜಾಗಗಳನ್ನು ಕೂಡ ಕೊಡುವುದಿಲ್ಲ. ಈಗ ಪಟ್ಟಣ ಪ್ರದೇಶ ಬೆಳೆಯುತ್ತಿದೆ. ಅದಕ್ಕೆ ನಾನು ಯಡಿಯೂರಪ್ಪನವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಂದು ಪಟ್ಟಣ ಪ್ರದೇಶದ ವಿಸ್ತರಣೆಗೆ ಅಲ್ಲಿ ಕಾಲೋನಿ ಆಗಿರಬಹುದು, ಹೊಸ ಕಟ್ಟಡ ಆಗಿರಬಹುದು, ಶಾಲಾ ಕಾಲೇಜು ಆಗಿರಬಹುದು, stadium ಆಗಿರಬಹುದು, ಅಲ್ಲಿ ಜಾಗ ಖರೀದಿ ಮಾಡುವುದಕ್ಕೆ ತಾವು ಹಣವನ್ನು ಒದಗಿಸಿದರೆ ಈ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಮಾನ್ಯ ಶಂಕರಮೂರ್ತಿಯವರು ಕಾಲೇಜನ್ನು ಕೊಟ್ಟಿದ್ದಾರೆ. ಇವತ್ತು ಯಾವುದೇ ಪಕ್ಷಪಾತವಿಲ್ಲದೇ ಬೇಧಭಾವವಿಲ್ಲದೆ ಇವತ್ತು ಕಾಲೇಜುಗಳನ್ನು ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಇಂತಹ ಮಂತ್ರಿ ಸಿಗುವುದು ಬಹಳ ಅಪರೂಪ. ಅವರು ಇವತ್ತು ಕಾಲೇಜು ಏನು ಕೊಟ್ಟಿದ್ದಾರೆ, ಅದನ್ನು ಕಟ್ಟಬೇಕೆಂದರೆ ಜಾಗ ಇಲ್ಲ. ಈಗ ಮುನಿಸಿಪಾಲಿಟಿಯವರ ಹತ್ತಿರ ಜಾಗ ಇಲ್ಲ. ಇದರ ಬಗ್ಗೆ ನಾವು estimate

Committee ಯಲ್ಲಿ ಹೇಳಿದೆವು. ಇಲಾಖೆಯವರು ಯಾವುದೇ ಶಾಲಾ ಕಾಲೇಜು ಮಂಜೂರು ಮಾಡಿದರೆ ಕೇವಲ ಕಟ್ಟಡ ಮಂಜೂರು ಮಾಡಿದರೆ ಆಗುವುದಿಲ್ಲ, ಅದಕ್ಕೆ ಬೇಕಾದಂತಹ ಜಾಗದ ವ್ಯವಸ್ಥೆಗೂ ಕೂಡ ನೀವು ಹಣಕಾಸನ್ನು ಒದಗಿಸಬೇಕಾಗುತ್ತದೆ. ಇಲ್ಲದೇ ಹೋದರೆ ಅಭಿವೃದ್ಧಿ ಕಾರ್ಯಗಳು ಆಗುವುದಿಲ್ಲ. ಅದಕ್ಕೋಸ್ಕರ ನಾನು ಮಾನ್ಯ ಯಡಿಯೂರಪ್ಪನವರನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಪಟ್ಟಣ ಪ್ರದೇಶದಲ್ಲಿ ಇದನ್ನು ವಿಸ್ತರಣೆ ಮಾಡುವುದಕ್ಕೆ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿ ನೀವು 25 ಎಕರೆ ಜಮೀನನ್ನು, ಅಲ್ಲಿ ಬಸ್ ಡಿಪೋ, ಕಾಲೇಜು ಆಗಿರಬಹುದು, ಅದಕ್ಕೆ ಹಣ ಒದಗಿಸಿದರೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಆ ಕೆಲಸವನ್ನು ಮಾನ್ಯ ಯಡಿಯೂರಪ್ಪನವರು ಮಾಡಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಾ, ಇವತ್ತು ಮಾನ್ಯ ಸಚಿವರು ಕೂಡ ಯಾವುದೇ ರಾಗ, ದ್ವೇಷ, ಪಕ್ಷಪಾತ ಇಲ್ಲದೇ ರಾಜ್ಯದ ಹಿತವನ್ನು ಕಾಪಾಡುತ್ತೇವೆಂದು ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಬಂದಿದ್ದಾರೆ. ಆದರೆ ಈ ಬಜೆಟ್‌ನಲ್ಲಿ ಕೆಲವು ಅಂಶಗಳನ್ನು ನೋಡಿದರೆ, ಮಾನ್ಯ ವಾಟಾಳ್ ನಾಗರಾಜ್‌ರರು ಹರದನಹಳ್ಳಿಗೆ ಎರಡು ಕೋಟಿ ರೂಪಾಯಿ ಕೊಟ್ಟಿದ್ದಾರೆ ಎಂದು ಹೇಳುವುದನ್ನು ಬಿಟ್ಟಿದ್ದೀರಿ. ಇನ್ನೊಂದು ಅಲ್ಲಿ ಸಿದ್ಧಲಿಂಗ ದೇವಸ್ಥಾನಕ್ಕೆ ಕೂಡ ಎರಡು ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಹರದನಹಳ್ಳಿಗೆ ಒಟ್ಟು 4.50 ಕೋಟಿ ರೂಪಾಯಿ ಆಯಿತು. ಈ ರೀತಿ ಸಂವಿಧಾನದ ಹೆಸರಿನಲ್ಲಿ ಈ ರಾಜ್ಯವನ್ನು ಸಮಾನ ದೃಷ್ಟಿಯಿಂದ ನೋಡಿ ಯಾವುದೇ ಬೇಧಭಾವ ಇಲ್ಲದೆ ರಾಜ್ಯವನ್ನು ನಡೆಸುತ್ತೇವೆ ಎಂದು ಪ್ರತಿಜ್ಞೆಯನ್ನು ಮಾಡಿ ಈ ರೀತಿ ಬೇಧಭಾವ ಮಾಡುವುದು ಸರಿಯಲ್ಲ. ಅದಕ್ಕಾಗಿ ನಾನು ಮಾನ್ಯ ಯಡಿಯೂರಪ್ಪನವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಸಣ್ಣ ನೀರಾವರಿಗೆ ಮತ್ತು ಜಲ ಸಂವರ್ಧನೆಗೆ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಹಣವನ್ನು ಇಟ್ಟು ಅನುಕೂಲ ಮಾಡಿಕೊಡಬೇಕು ಎಂದು ಕೇಳಿ ಈ ಸಂದರ್ಭದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಈಗ ಅಭಯಚಂದ್ರರವರು ಮಾತನಾಡಿ.

ಶ್ರೀ ಬಸವರಾಜರಾಯರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವುದಿಲ್ಲ. ಒಂದು clarification ಕೇಳುತ್ತೇನೆ. ಈ ಬಜೆಟ್ ಭಾಷಣದಲ್ಲಿ...

ಶ್ರೀ ಕೆ.ಅಭಯಚಂದ್ರ: ರಾಯರೆಡ್ಡಿಯವರೆ, ನೀವು ಯಾವಾಗಲೂ ಮಾತನಾಡುತ್ತೀರಲ್ಲ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ: ನಾನು ಭಾಷಣ ಮಾಡುವುದಿಲ್ಲ.

ಶ್ರೀ ಕೆ.ಅಭಯಚಂದ್ರ(ಮೂಡಬಿದ್ರಿ): ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಪೂರಕ ಬಜೆಟ್‌ನ ಬಗ್ಗೆ ಎಲ್ಲರೂ ಮಾತನಾಡಿದರು. ಮಂಗಳೂರಿನಲ್ಲಿ Air Port ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನವನ್ನು ಮಾನ್ಯ ಹಣಕಾಸು ಸಚಿವರು ಬಿಡುಗಡೆ ಮಾಡಬೇಕು. ಅದೇ ರೀತಿ ಪೂರಕ ಬಜೆಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಹತ್ತು ಕೋಟಿ ರೂಪಾಯಿ ಸಣ್ಣ ಸಣ್ಣ ಮೋರಿಗಳನ್ನು ಮಾಡುವುದಕ್ಕಾಗಿ ಇಟ್ಟಿದ್ದರು. ಆದರೆ ಪೂರಕ ಬಜೆಟ್‌ನಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಮತ್ತು ಉಡುಪಿ ಜಿಲ್ಲೆಗೆ 5 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಕೂಡ ಸೇರಿಸಬೇಕೆಂದು ನಮ್ರವಾದಂತಹ ವಿನಂತಿಯನ್ನು ಮಾಡುತ್ತಿದ್ದೇನೆ. ಅದೇ ರೀತಿ ಮಂಗಳೂರಿನಲ್ಲಿ ಮೀನುಗಾರಿಕೆ ಕಾಲೇಜು ಇದೆ, ಅದಕ್ಕೂ ಕೂಡ ಹೆಚ್ಚಿನ ಅನುದಾನವನ್ನು ಮಾನ್ಯ ಹಣಕಾಸು ಸಚಿವರು ಒದಗಿಸಬೇಕು. ಅಲ್ಲದೇ ಆಶ್ರಯ ಮನೆಗಳಿಗೆ 50% ಸಬ್ಸಿಡಿ 50% loan ಇದ್ದು, ಅದಕ್ಕೆ 11% interest ಇದೆ. ಆದುದರಿಂದ ಬಡ್ಡಿ ಮನ್ನಾ ಮಾಡಿದರೆ ಬಡವರಿಗೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಧ್ರುವನಾರಾಯಣ್‌ರವರು ಮಾತನಾಡಿ, ಈಗ ಅಭಯಚಂದ್ರರವರು ಯಾವ ಸ್ಟೈಲ್‌ನಲ್ಲಿ ಹೇಳಿದರೂ ಅದೇ ಸ್ಟೈಲ್‌ನಲ್ಲಿ ನೀವು ಈಗ ಮಾತನಾಡಬೇಕು.

ಶ್ರೀ ಧ್ರುವ ನಾರಾಯಣ: (ಸಂತೇಮಾರೇನ ಹಳ್ಳೀ): ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಬೇಡಿಕೆಗಳ ಮೇಲೆ ಮಾತನಾಡುವಂಥಾ ಸಂದರ್ಭದಲ್ಲಿ ಹಲವಾರು ಸದಸ್ಯರುಗಳು ತಮಗೆ ಮನವಿ ಮಾಡಿಕೊಂಡಿದ್ದೇವೆ. ಡಾ: ಅಂಬೇಡ್ಕರ್ ನಿಗಮದಿಂದ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಗಮದಿಂದ. ಬಹಳ ಕಡಿಮೆ ಫಲಾನುಭವಿಗಳು, ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ. ತಾವು ರೈತರಿಗೆ ಸಾಲವನ್ನು ಮನ್ನಾ ಮಾಡಿದ್ದೀರಿ. ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದವರು ಲೋನ್ ತೆಗೆದುಕೊಂಡಿರುವಂಥವರು ಬಹಳ ಕಡಿಮೆ ಇದ್ದಾರೆ. ದಯಮಾಡಿ ಈ ನಗಮದಿಂದ ಏನು ಸಾಲವನ್ನು ತೆಗೆದುಕೊಂಡಿದ್ದಾರೆ. ಅವರಿಗೆ ದಯಮಾಡಿ ಸಾಲವನ್ನು ಮನ್ನಾ ಮಾಡಿ ಕೊಡಬೇಕು. ನಾವು ಹಲವಾರು ಸದಸ್ಯರುಗಳು ಈ ಸದನ ಮತ್ತು ಆ ಸದನದಲ್ಲಿ ಮನವಿಯನ್ನು ಮಾಡಿಕೊಂಡಿದ್ದೇವೆ. ಇದು ಪತ್ರಿಕೆಗಳಲ್ಲೂ ಕೂಡ ಬಂದಿದೆ. ದಯಮಾಡಿ ತಾವು ಸಾಲ ಮನ್ನಾ ಮಾಡಿಕೊಡಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ನಾನು ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ National Horticulture Mission ಏನು 13 ಜಿಲ್ಲೆಗಳಲ್ಲಿ ಇದೆ. ಅಲ್ಲಿಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಇದರಿಂದ ತೋಟಗಾರಿಕೆ ಬಹಳಷ್ಟು ಅಭಿವೃದ್ಧಿಯಾಗುತ್ತಿದೆ. ಆದರೆ ಇನ್ನುಳಿದ ಜಿಲ್ಲೆಗಳಿಗೆ ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ತಾವು ದಯಮಾಡಿ ಕೊಡಬೇಕು. ಸುಮಾರು ಎರಡು ಗಂಟೆಗಳ ಕಾಲ ಈ ವಿಷಯ ಸದನದಲ್ಲಿ ಚರ್ಚೆಯಾಯಿತು. ತಾವು ಕೊಡುತ್ತೇವೆಂಬ ಮಾತನ್ನು ಸಹ ಹೇಳಿದ್ದೀರಿ. ಆದರೆ ಅದು ಈ ಪೂರಕ ಅಂದಾಜಿನಲ್ಲಿ ಇಲ್ಲ. ದಯಮಾಡಿ ಇಲ್ಲಿ ತೋಟಗಾರಿಕಾ ಮಂತ್ರಿಗಳು ಇದ್ದಾರೆ. ದಯವಿಟ್ಟು Non-NHM Districts ಏನು ಇವೆ. National Agriculture Missionನ ಸಹಾಯವಿಲ್ಲದೇ ಇರುವ ಜಿಲ್ಲೆಗಳಿಗೆ ತಾವು ದಯಮಾಡಿ ಹಣವನ್ನು ಕೊಡಬೇಕು. ಮೂರನೆಯದಾಗಿ ಭೀದರ್‌ನಲ್ಲಿ Veternity University ಇದೆ. ತಾವು ಹಾಸನ Veternity University College ಗೆ ಹಣವನ್ನು ಕೊಟ್ಟಿದ್ದೀರಿ. ಬೀದರ್‌ನಲ್ಲಿ Animal Husbandry University ಇದೆ. ಇಲ್ಲಿ ಮೂಲಭೂತ ಸೌಕರ್ಯವಿಲ್ಲ. ಅದಕ್ಕೆ ತಾವು ಹಣಕಾಸನ್ನು ಕೊಟ್ಟಿಲ್ಲ. ಇದಕ್ಕೂ ತಾವು ಹಣವನ್ನು ಒದಗಿಸಬೇಕು. ಇನ್ನು ಗುಡಿಸಲು ರಹಿತ ತಾಲ್ಲೂಕುಗಳೆಂದು 10 ತಾಲ್ಲೂಕುಗಳನ್ನು ಮಾಡಿಕೊಂಡಿದ್ದೀರಿ. ತಾವು ರಾಮನಗರ, ಶಿಕಾರಿಪುರ, ಹೊಳೆನರಸೀಪುರ, ಇಲ್ಲಿ ಎಲ್ಲಾ ಮಾಡಿದ್ದೀರಿ. ಆದರೆ ಮೂಲಭೂತವಾಗಿ ಚಾಮರಾಜನಗರ ತಾಲ್ಲೂಕು ಅನ್ನು ಬಿಟ್ಟಿದ್ದೀರಿ. ನಮ್ಮ ನಾಯಕರು ಇಲ್ಲಿ ನನ್ನನ್ನು ನೋಡುತ್ತಿದ್ದಾರೆ. ಅವರು ತಮಗೆ ಏಕೆ influence ಮಾಡಿಲ್ಲವೆನ್ನುವಂಥಾದ್ದು ನನಗೆ ಗೊತ್ತಿಲ್ಲ. ಡಾ:ನಂಜುಂಡಪ್ಪನವರ ವರದಿಯ ಪ್ರಕಾರ 39 ತಾಲ್ಲೂಕುಗಳಲ್ಲಿ ಚಾಮರಾಜ ತಾಲ್ಲೂಕು ಇದೆ. ಮಾನ್ಯ ಮಹದೇವ್ ಪ್ರಸಾದ್‌ರವರು ಇಲ್ಲೇ ಕುಳಿತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರನ್ನು ಇಲ್ಲಿಗೆ ವಾಸ್ತವ್ಯಕ್ಕೆ ಕರೆದುಕೊಂಡು ಬಂದಿದ್ದರು. ಆ ಮನೆಗಳನ್ನು ನೋಡಿದ ಮೇಲೆ, ಚಾಮರಾಜ ನಗರಕ್ಕೆ ಮನೆಗಳನ್ನು ಕೊಡಬೇಕೆಂದು ತೀರ್ಮಾನವನ್ನು ಚಾಮರಾಜ ನಗರದಲ್ಲೆ ತೆಗದುಕೊಂಡಿದ್ದು. ಆದರೆ ತಾವು ಚಾಮರಾಜನಗರ ತಾಲ್ಲೂಕನ್ನೇ ಬಿಟ್ಟು ಬಿಟ್ಟಿದ್ದೀರಿ. ಇದರಲ್ಲಿ 10 ತಾಲ್ಲೂಕುಗಳು ಏನು ಇದೆ.

ದಯಮಾಡಿ ಈ ಗುಡಿಸಲು ರಹಿತ ತಾಲ್ಲೂಕು ಎನ್ನುವ ಪಟ್ಟಿಯಲ್ಲಿ ಚಾಮರಾಜ ತಾಲ್ಲೂಕನ್ನು ಸೇರಿಸಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಡಾ:ಕೆ.ಅನ್ನದಾನಿ(ಮಳವಳ್ಳಿ) ಮಾನ್ಯ ಉಪಾಧ್ಯಕ್ಷರೆ, ಈಗ SC/ST ಹಾಸ್ಟೆಲ್‌ಗಳ ಮಕ್ಕಳ ಪರವಾಗಿ ಬಹಳಷ್ಟು ನಮ್ಮ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ನಡುವೆ ಇರುವಂಥಾ MLAಗಳು ನಾವೆಲ್ಲರೂ ಕೂಡ ಹೇಳಿದ್ದೇವೆ. 150 ರೂಪಾಯಿಗಳನ್ನು ಹೆಚ್ಚಿಸಬೇಕೆಂಬ ಬಗ್ಗೆ ಬಹಳಷ್ಟು ಬೇಡಿಕೆ ಬಂದಿದೆ, ಮತ್ತೆ ಎಲ್ಲರೂ ಡಿಮಾಂಡ್ ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಹಣಕಾಸಿನ ಸಚಿವರು ಹೆಚ್ಚಿನ ಒತ್ತನ್ನು ಕೊಡಬೇಕು. ಇನ್ನು ನಮ್ಮ ಪೂರಕ ಅಂದಾಜು ಏನು ಇದೆ. ಇದರಲ್ಲಿ provide ಮಾಡಬೇಕೆಂದು ಮನವಿ ಹೇಳುತ್ತೇನೆ. ಇನ್ನು SC/ST ವರ್ಗದ ಜನರು ಡಾ: ಅಂಬೇಡ್ಕರ್ ನಿಗಮದಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ಅದನ್ನು ಮನ್ನಾ ಮಾಡಬೇಕೆಂದು ಹೇಳಿದ್ದೇವೆ. ಅದು 50 ಕೋಟಿ ರೂಪಾಯಿಗಳಿಂದ 100 ಕೋಟಿ ರೂಪಾಯಿಗಳಾಗಿರಬಹುದು. ಇಲ್ಲಿ ರೈತರು ಸಾಲ ನೂರಾರು ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೀರಿ. ನಮ್ಮ ದಲಿತ ವರ್ಗದವರು ಯಾರು ಕೂಡ ಬ್ಯಾಂಕ್‌ನಲ್ಲಿ ವ್ಯವಸಾಯಕ್ಕೋಸ್ಕರ ಸಾಲವನ್ನು ತೆಗೆದುಕೊಂಡಿಲ್ಲ. ಅವರು ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ತೆಗೆದುಕೊಂಡಿರುವುದು. ದಯಮಾಡಿ ನಾವು ಇದರ ಬಗ್ಗೆ ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಹಣಕಾಸಿನ ಸದನದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು. ಅವರು ಸಾಲವನ್ನು ಮನ್ನಾ ಮಾಡುತ್ತಾರ, ಇಲ್ಲವಾ, ಎಂಬುದನ್ನು ಸದನದಲ್ಲಿ ದಯಮಾಡಿ ಹೇಳಬೇಕು.

ಉಪಾಧ್ಯಕ್ಷರು: ಮಾನ್ಯ ಬಸವರಾಜರಾಯ ರೆಡ್ಡಿಯವರು clarification ಕೇಳುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು, ನಾನು ಭಾಷಣ ಮಾಡುವುದಿಲ್ಲ.

ಉಪಾಧ್ಯಕ್ಷರು: ಆಯಿತು, ಬಹಳ ಸಂತೋಷ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಯಾರು ಜೋರು ಮಾಡುತ್ತಾರೋ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾವು ಅವಕಾಶ ಬೇಕೆನ್ನುವವರಿಗೆ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನಾನು ಭಾಷಣ ಮಾಡುತ್ತಿಲ್ಲ. ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಕಳೆದ ಸಾರಿ ಮುಖ್ಯ ಬಜೆಟ್‌ನಲ್ಲಿ ಪೇಜ್ ನಂ. 39 ನಲ್ಲಿ, ಡಾ: ಸಿದ್ದಯ್ಯ ಪುರಾಣಿಕರವರ ಭವನವನ್ನು ಕಟ್ಟುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅದನ್ನು ಎಲ್ಲಿ ಕಟ್ಟುತ್ತೀರಿ? ಡಾ: ಸಿದ್ದಯ್ಯ ಪುರಾಣಿಕ್‌ರವರು ಯಲಬುರ್ಗದವರಾಗಿದ್ದಾರೆ. ಅವರು ಇಲ್ಲೆ ಜನಸಿ, ಬೆಳೆದವರು, ಅಲ್ಲಿಂದಲೇ ಕವಿಗಳಾಗಿ Deputy Commissioner ಆಗಿ ಹೋದವರು. ಆದುದರಿಂದ ಈ ಭವನವನ್ನು ಯಲಬುರ್ಗಾದಲ್ಲಿ ಕಟ್ಟಬೇಕಾಗುತ್ತದೆ. ತಾವು ಅಲ್ಲಿಗೆ ಕೊಡುವುದಾದರೆ, ನಾವು ಜಮೀನನ್ನು ಉಚಿತವಾಗಿ ಕೊಡುತ್ತೇವೆ. ಅದು ರಾಷ್ಟ್ರೀಯ ಹೆದ್ದಾರಿಯಲ್ಲಿ ಉಚಿತವಾಗಿ ಜಮೀನನ್ನು ಕೊಡುತ್ತೇವೆ. ನೀವು ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಇದು ಸಾಲುವುದಿಲ್ಲ. ತಾವು ಎರಡು ಕೋಟಿ ರೂಪಾಯಿಗಳನ್ನು ಮಾಡಿದರೆ, ಒಂದು ದೊಡ್ಡ ಸ್ಮಾರಕ ಭವನವಾಗುತ್ತದೆ. ಆ ಊರು ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ಬರುತ್ತದೆ, ಹುಬ್ಬಳ್ಳಿ-ಗುಂಡುಕಲ್ಲು ರೈಲ್ವೇ ಸ್ಟೇಷನ್ ಇದೆ. ಅಲ್ಲಿ ಜಾಗವನ್ನು ಕೊಡುತ್ತೇವೆ. ತಾವು ದಯಮಾಡಿ ಈ ಸ್ಮಾರಕ ಭವನವನ್ನು ಮಾಡಿಕೊಡಬೇಕೆಂಬ ಮಾತನ್ನು ತಮ್ಮ ಮುಖಾಂತರ ಕೇಳುತ್ತೇನೆ. ತಾವು ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಹೇಳಿದ್ದೀರಿ, ಇದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡಿ.

ಶ್ರೀ ನೆ.ಲ.ನರೇಂದ್ರ ಬಾಬು(ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೆ, ತಮಗೆ ಧನ್ಯವಾದವನ್ನು ಹೇಳುತ್ತಾ, 1955.3 ಕೋಟಿ ಪೂರಕ ಅಂದಾಜುಗಳನ್ನು ನೋಡಿದಾಗ, ನಾನು ಮಾತನಾಡುವಾಗ ಒಂದು ಪ್ರಮುಖ ಬೇಡಿಕೆಯನ್ನು ಇಟ್ಟಿದ್ದೆ. ಅದು ಬಹಳ ಮುಖ್ಯವಾಗಿ ತಮ್ಮ ಯುವಜನ ಖಾತೆಗೆ ಹೆಚ್ಚಿನ ಹಣವನ್ನು ಕೊಡಬೇಕು. ಆಗ ಮಾತ್ರ ಕ್ರೀಡೆ ಮತ್ತು ಯುವಜನಕ್ಕೆ ಸಂಬಧಪಟ್ಟ ಹಾಗೆ ಪ್ರೋತ್ಸಾಹ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳುವುದಕ್ಕೆ ಆಗುತ್ತದೆ. ಆದರೆ ಇದು ಪೂರಕ ಅಂದಾಜಿನಲ್ಲಿ ಕಾಣಲಿಲ್ಲ, ಏಕೆ ಈ ರೀತಿಯಾಗಿ ಯುವ ಜನ ವಿರೋಧಿ ನೀತಿಯನ್ನು ತಾಳುತ್ತಿದ್ದೀರೆಂದು ಕೇಳುತ್ತೇನೆ. ಇನ್ನು ಡಾ:ರಾಜ್‌ಕುಮಾರ್

ಸ್ಮಾರಕ ನಿಧಿಗೆ 300 ಲಕ್ಷ ರೂಪಾಯಿಗಳೆಂದು ಹೇಳಿದ್ದೀರಿ. ನಾನು ಒಂದು ವಿನಂತಿ ಮಾಡುತ್ತೇನೆ. ಈ ಸ್ಮಾರಕವನ್ನು ಬೇಗ ಕಟ್ಟಿಸಿ, ಮತ್ತು ಡಾ: ರಾಜ್‌ಕುಮಾರ್‌ರವರ ಅಂತಿಮ ಸಂಸ್ಕಾರದಲ್ಲಿ ಬಲಿಯಾದಂಥ ಒಬ್ಬ ಬಡ ರೈತ ಕಾರ್ಮಿಕ ಕುಟುಂಬ ಎರಡು ಹೆಣ್ಣು ಮಕ್ಕಳು ಇರುವಂಥಾದ್ದು, ಇವನ ಹೆಂಡತಿ ಸುಸೈಡ್ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದು, ಸರ್ಕಾರ ಘೋಷಿಸಿರುವಂಥ ಒಂದು ಲಕ್ಷ ರೂಪಾಯಿಗಳು ಕೊಡುವ ಕನಿಷ್ಠ ಸೌಜನ್ಯವನ್ನು ತೋರಿಲ್ಲ. ಇವರು ಕೆಂಗೇರಿಯ ಕುಗ್ರಾಮದಲ್ಲಿರುವ ಬಡ ರೈತನಾಗಿದ್ದು, ಇವನ ಕುಟುಂಬಕ್ಕೆ ಹಣ ಕೊಡುವಂಥಾದ್ದು ಮಾಡಬೇಕೆಂದು ನಾನು ಈ ಸಂಡರ್ಭದಲ್ಲಿ ವಿನಂತಿ ಮಾಡುತ್ತೇನೆ. ಇನ್ನು ಗ್ರಾಹಕರ ಕ್ಲಬ್‌ಗಳಿಗೆ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಈ ಹಣ ಇದುವರೆಗೂ ಒಂದು ಪೈಸೆಯೂ ಖರ್ಚಾಗಿಲ್ಲವೆಂದು ಕಾಣುತ್ತದೆ. ನಾನು ವಿನಂತಿ ಮಾಡುತ್ತೇನೆ, ಒಂದು ಗ್ರಾಹಕ ಕ್ಲಬ್‌ಗಳನ್ನು, ಸ್ಕೂಲ್‌ಗಳನ್ನು ತೆರದಂತೆ ಕಾಣುತ್ತಿಲ್ಲ. ದಯಮಾಡಿ ಇದನ್ನು ತೆಗೆಸಬೇಕೆಂದು ಕೇಳುತ್ತೇನೆ. ಇನ್ನು ಶಾಲಾಭಿವೃದ್ಧಿ ಸಮಿತಿಯ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಈ ಬಗ್ಗೆ ಒಂದು ದುರಂತವನ್ನು ಹೇಳುವುದಾದರೆ, ನಮ್ಮ ಕ್ಷೇತ್ರದ ಒಂದು ಶಾಲೆ ಮತ್ತು ಕಾಲೇಜಿನಲ್ಲಿ ಶಾಲಾಭಿವೃದ್ಧಿ ಸಮಿತಿಯೆಂದು ಮಾಡಿಕೊಂಡು ಅಲ್ಲಿ ಒಂದು ಕೊಠಡಿಯನ್ನು ಕಟ್ಟುವುದಕ್ಕೆ ಬಿಡುವುದಿಲ್ಲ. ಅವರದೇ ಖಾಸಗಿ ಸ್ವತ್ತು ಮಾಡಿಕೊಂಡಿದ್ದಾರೆ. ಅಲ್ಲಿ ಕಾಲೇಜ್ ಮಾಡುವುದಕ್ಕೆ ಸ್ಯಾಂಕ್ಷನ್ ಆಗಿದ್ದರೆ, ಅಲ್ಲಿ ಕಾಲೇಜನ್ನು ಮಾಡುವುದಕ್ಕೆ ಬಿಡಲಿಲ್ಲ. ಇಂಥಾ ಬೆಟರ್‌ಮೆಂಟ್ ಕಮಿಟಿಯನ್ನು ಖಾಸಗಿಯವರೆಗೆ ಕೊಟ್ಟು, ಸರ್ಕಾರಿ ಕಾಲೇಜ್ ಅನ್ನು ಅಡ ಇಡಬಾರದೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು PWDಯಲ್ಲಿ ನಾನು ಕೇಳುವುದೇನೆಂದರೆ, NGO ಕ್ವಾರ್ಟರ್ಸ್‌ಗಳ ಸ್ಥಿತಿಯ ಬಗ್ಗೆ ನಾನು ಶಾಸಕನಾಗಿ ಮೂರು ವರ್ಷದಿಂದ ಕೇಳುತ್ತಿದ್ದೇನೆ. ರಾಜಾಜಿನಗರದ 6ನೇ ಬ್ಲಾಕ್‌ನಲ್ಲಿರುವ NGO ಕ್ವಾರ್ಟಸ್‌ಗಳು ಸುಮಾರು 600ರಿಂದ 700 ಕುಟುಂಬಗಳು ಇರುವಂಥಾದ್ದು. ಸುವರ್ಣ ಕರ್ನಾಟಕದ ತೇರನ್ನು ದಯಮಾಡಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಮಹದೇವ ಪ್ರಸಾದ್‌ರವರನ್ನು ಕೇಳುವಂಥಾದ್ದು ಏನೆಂದರೆ, ದಯವಿಟ್ಟು ಇದು ಕನ್ನಡಿಗರಿಗೆ ಕೊಡಬೇಕೆಂಬ ಮನವಿಯನ್ನು, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ, ನಾನು ಕೂಡ ಆಗ್ರಹಿಸುತ್ತೇನೆ. ಈ ಸುವರ್ಣ ಕರ್ನಾಟಕದ ತೇರನ್ನು ಕೇರಳ ರಾಜ್ಯದವರಿಗೋ, ಆಂಧ್ರದವರಿಗೋ, ತಮಿಳುನಾಡಿನವರಿಗೋ, ಕೊಟ್ಟು ನಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬರುವ ರೀತಿಯಲ್ಲಿ ಮತ್ತೆ ಇಲ್ಲೂ talented

ಇದ್ದಾರೆಂಬುದನ್ನು ಮನಗಾಣಬೇಕು. ಈ ಸಂದರ್ಭದಲ್ಲಿ infrastructure ನಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ನಾವು ಏರ್‌ಪೋರ್ಟ್‌ಗಳಿಗೆ ಆದ್ಯತೆಯನ್ನು ಕೊಡುತ್ತೇವೆ. ಬೆಂಗಳೂರು ನಗರದಲ್ಲಿ Devaraj Urs Trucks Terminal ಎಂದು ಇದೆ. ಇಲ್ಲಿ ಸುಮಾರು 10ರಿಂದ 20 ಸಾವಿರ ಟ್ರಕ್‌ಗಳು ಬಂದು ಹೋಗುತ್ತದೆ. ನಾನು ಶಾಸಕನಾದಾಗಿಂದ ವಿನಂತಿಯನ್ನು ಮಾಡುತ್ತಿದ್ದೇನೆ. ಏರ್‌ಪೋರ್ಟ್ ಕೊಡುವ ಆದ್ಯತೆಗೆ ಸುಮಾರು 25 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದು Central Government grantಗೆ ಬರುತ್ತದೆ. ಆ infrastructure develop ಮಾಡಿದರೆ ಬೆಂಗಳೂರಿನಲ್ಲಿ ಕನಿಷ್ಟ 8 truck terminals ಬೇಕು. ಆದರೆ ಒಂದು terminal ಅನ್ನು ದುರಸ್ಥಿ ಮಾಡುವುದಕ್ಕೆ ನಾವು infrastructure provision ಮಾಡಿಲ್ಲ. ಈ ನಿರ್ಲಕ್ಷ್ಯವೆಂದು ಕೇಳಿಕೊಂಡು, no taxation without representation ಎನ್ನುವಂಥ ಮಾತನ್ನು ಹೇಳಿದರೂ without equal distribution there shall not be any taxation. Joint family ಎನ್ನುವ ಒಂದು ಮಾತನ್ನು ಹೇಳಿದರು. ಇಲ್ಲಿ ಇರುವ 224 ಜನರು ಸಹ moral trustees of this finance and budget.ಇದು equitable distiribution ಆದಾಗ, ನಮ್ಮ ಒಂದು ಪ್ರಯತ್ನ, ನಮ್ಮ ಕಳಕಳಿಗೆ, ಸಾರ್ಥಕತೆ ಬರುತ್ತದೆಂಬ ಮಾತನ್ನು ಹೇಳುತ್ತಾ, ನೀವು ಮಾಡಿರುವಂಥಾ ಹಲವಾರು ಜನಪರ ಯೋಜನೆಗಳು ಬಡವರಿಗೆ, ವಿಧವೆಯರಿಗೆ, ವೃದ್ಧರಿಗೆ, ಮಾಡಿರುವಂಥಾದ್ದನ್ನು ಶ್ಲಾಘನೆ ಮಾಡುತ್ತಾ, ದಯವಿಟ್ಟು ಇದು ತಾರತಮ್ಯವಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ವಿನಂತಿ ಮಾಡುತ್ತಾ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಶರಣ ಪ್ರಕಾಶ್‌ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಹಣಕಾಸಿನ ಸಚಿವರಿಗೆ ನನ್ನ ಮನವಿ ಏನೆಂದರೆ, ತಾವು ಈಗಾಗಲೇ 1900 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳನ್ನು ಮಂಡಿಸಿದಿರಿ. ತಾವು ಈಗ ಮಂಡಿಸಿರುವ ಬಜೆಟ್ ಕೊರತೆ ಬಜೆಟ್ ಆಗುತ್ತದೆ. ಅದನ್ನು ಕೂಡ ಕಡಿಮೆ ಮಾಡಬೇಕು. ಏಕೆಂದರೆ, ಹಣಕಾಸು ಸಚಿವರು ನಮ್ಮದು surplus budget ಎಂದು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿಕೊಂಡಿದ್ದಾರೆ. ಇದೆಲ್ಲಾ ಸೇರಿದ ಮೇಲೆ ಇದು ಕೊರತೆ ಬಜೆಟ್ ಆಗುತ್ತದೆ. ಇದರ ಬಗ್ಗೆ ತಾವು ಕ್ಲಾರಿಫಿಕೇಷನ್ ಕೊಡಬೇಕು. ಆಮೇಲೆ ಇಷ್ಟೊಂದು ಹಣ ಹೇಗೆ ಸಂಗ್ರಹಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಾವು ಹೇಳಬೇಕು. ಸುವರ್ಣ ಗ್ರಾಮೋದಯ ಯೋಜನೆ, ನೀವು ಇದನ್ನು ಬಿಟ್ಟಿದ್ದೀರಿ ಅದಕ್ಕೆ ನಾನು ಹೇಳುತ್ತಿದ್ದೇನೆ. ಸುವರ್ಣ ಗ್ರಾಮೋದಯ ಯೋಜನೆಗೆ ನಿಮ್ಮ ಬಜೆಟ್‌ನಲ್ಲಿ ಸಾವಿರ ಕೋಟಿ ರೂಪಾಯಿ ಎಂದು ಅಂದಾಜು ಇದೆ. ಆದರೆ ನೀವು ಬಜೆಟ್‌ನಲ್ಲಿ ಒದಗಿಸಿರುವುದು 350 ಕೋಟಿ ಮಾತ್ರ. ಅದಕ್ಕೆ

ಇನ್ನು 650 ಕೋಟಿ ರೂಪಾಯಿ ಇದರಲ್ಲಿ ಕೊಟಿಲ್ಲ. ಮುಂದೆ 650 ಕೋಟಿ ರೂಪಾಯಿ ಎಲ್ಲಿಂದ ತರುತ್ತೀರಾ? ಎಂಬುದನ್ನು ತಾವು ಹೇಳಬೇಕು. ನನ್ನ ಮತ ಕ್ಷೇತ್ರದಲ್ಲಿ ಎರಡು ಸಮಸ್ಯೆಗಳಿವೆ. ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿದ್ದಾಗ ಅದೇ ಸ್ಥಾನದಲ್ಲಿ ಕುಳಿತು ಹೇಳಿದ್ದು ಏನೆಂದರೆ, ನಮ್ಮ ವಗ್ದಾರಿ ರಿಬ್ಬನ್‌ಪಲ್ಲಿ ರೋಡ್, ಮಹಾರಾಷ್ಟ್ರದಿಂದ ಆಂಧ್ರಕ್ಕೆ ಕನೆಕ್ಷನ್ ಮಾಡುವ 140 ಕಿ.ಮಿ. ರೋಡ್ BOOT ನಲ್ಲಿ ಆಗುವುದಿಲ್ಲವೆಂದರೆ, ಆದಕ್ಕೆ 190 ಕೋಟಿ ರೂಪಾಯಿ KRDCL ನಲ್ಲಿ ಅಂದಾಜು ಆಗಿದೆ. ಅದಕ್ಕೆ ಹಣಕಾಸಿನ ಅವಶ್ಯಕತೆ ಇದೆ, ಹೀಗಾಗಿ ಅದನ್ನು ದಯವಿಟ್ಟು ಮಾಡಿಕೊಡಬೇಕು. ಕೊನೆಯಾದಾಗಿ, ನನ್ನ ಮತ ಕ್ಷೇತ್ರದಲ್ಲಿ ಬೀಜನಹಳ್ಳಿ ಎನ್ನುವ ಗ್ರಾಮ. 12ನೇ ಶತಮಾನದಲ್ಲಿ ಬಸವಣ್ಣನವರು, ಏನು ಹರಳಯ್ಯನವರು ತಮ್ಮ ಸ್ವಂತ ಚರ್ಮದಿಂದ ಮಾಡಿರುವ ಪಾದರಕ್ಷೆಗಳು, ಆ ಪಾದರಕ್ಷೆಗಳಿಂದ 12 ನೇ ಶತಮಾನದಲ್ಲಿ ಆಗಿರುವ ಕ್ರಾಂತಿ, ಅವು ಇನ್ನು ಕೂಡ ನನ್ನ ಮತ ಕ್ಷೇತ್ರದಲ್ಲಿ ಬೀಜನಹಳ್ಳಿ ಎನ್ನುವ ಗ್ರಾಮ ಸೇಡಂ ತಾಲ್ಲೂಕಿನಲ್ಲಿದೆ. ಅದನ್ನು ತಾವು ಬೆಳಕಿಗೆ ತರಬೇಕು. ಏಕೆಂದರೆ, 12ನೇ ಶತಮಾನದಲ್ಲಿ ಆಗಿರುವ ಪ್ರಮುಖವಾದ ಕುರುಹುಗಳು. ಮನುಷ್ಯರ ಚರ್ಮದಿಂದ ಮಾಡಿರುವ ಪಾದರಕ್ಷೆ ಯಾವುದಾದರೂ ಇದ್ದರೆ ಅದು ಕೇವಲ ಬೀಜನಹಳ್ಳಿಯಲ್ಲಿವೆ. ಅದು ಬಸವಣ್ಣನವರಿಗೋಸ್ಕರ ಮಾಡಿರುವುದು. ಖಂಡಿತವಾಗಿ ಅದನ್ನು ತಾವು ಅಭಿವೃದ್ಧಿಪಡಿಸಲಿಕ್ಕೆ ಆ ಒಂದು ಹಳ್ಳಿಯನ್ನು ಅಭಿವೃದ್ಧಿ ಪಡಿಸಲಿಕ್ಕೆ, ಆ ಒಂದು ಸ್ಮಾರಕ ಭವನ ಕಟ್ಟಲಿಕ್ಕೆ ತಾವು ಖಂಡಿತವಾಗಿ ಏನಾದರೂ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಹಣಕಾಸು ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಯು.ಟಿ.ಖಾದರ್(ಉಲ್ಲಾಳ್) ಸನ್ಮಾನ್ಯ ಹಣಕಾಸು ಸಚಿವರಲ್ಲಿ ವಿತ್ತೀಯ ಚರ್ಚೆಯ ಸಂದರ್ಭದಲ್ಲಿ ಉಳ್ಳಾಲ ಕ್ಷೇತ್ರದ ಪ್ರಮುಖ ಸಮಸ್ಯೆಯಾದ ಕಡಲ ಕೊರೆತದ ಬಗ್ಗೆ ನಾನು ಪ್ರಸ್ತಾಪಿಸಿದ್ದೆ. 1955 ಕೋಟಿ ರೂಪಾಯಿಯ ಪೂರಕ ಬಜೆಟ್‌ನಲ್ಲಿ ಸಮುದ್ರ ಕೊರತಕ್ಕೆ ಸಂಬಧಪಟ್ಟ ಯಾವುದೇ ಒಂದು ಪ್ರಸ್ತಾವನೆ ಇಲ್ಲದಿರುವುದಕ್ಕೆ ಬಹಳ ದುಃಖವಾಗುತ್ತದೆಂದು ಹೇಳಲಿಚ್ಚಿಸುತ್ತೇನೆ. ಕರಾವಳಿ ಜಿಲ್ಲೆಯ ಬಗ್ಗೆ ಏಕೆ ಇಷ್ಟೊಂದು ತಾರತಮ್ಯ ಎಂದು ಕೇಳಲಿಕ್ಕೆ ಬಯಸುತ್ತೇನೆ. ಕರಾವಳಿ ಜಿಲ್ಲೆಯವರು, ಉಲ್ಲಾಳ್ ದವರು, ನಮಗೆ ಏತ ನೀರಾವರಿ ಕೊಡಿ, ಅಥವಾ ಬೇರೆ ಬೇರೆ ದೊಡ್ಡ ದೊಡ್ಡ ಬ್ಯಾರೇಜ್ ಕೊಡಿ ಎಂದು ಸಾವಿರಾರು ಕೋಟಿ ರೂಪಾಯಿಗಳ ಯಾವುದೇ ಒಂದೂ ಬೇಡಿಕೆಯನ್ನು ಇಟ್ಟಿಲ್ಲ. ನಾವು ಕೇವಲ ಸಮುದ್ರದ ಕೊರತಕ್ಕೆ 12 ಕೋಟಿಯನ್ನು ಕೇಳಿದ್ದೇವೆ. ಹಣಕಾಸು ಸಚಿವರಿಗೆ ಹಣದ ಒತ್ತಡದಿಂದ ಏನಾದರೂ ಹಣ ಕೊಡಲಿಕ್ಕೆ ಆಗದೆ ಇದ್ದರೆ ನನಗೆ ಅವರ ಪರಿಸ್ಥಿತಿ ಅರ್ಥವಾಗುತ್ತಿತ್ತು. ಆದರೆ,

ಎರಡು ಜಿಲ್ಲೆಗೆ 30,30 ಕೋಟಿಯಂತೆ ಕೊಟ್ಟಿದ್ದಾರೆ. ಶಿಕಾರಿಪುರಕ್ಕೆ 16 ಕೋಟಿ ಕೊಟ್ಟಿದ್ದಾರೆ. ಹೀಗೆ 30,30 ಕೋಟಿ ಕೊಡುವ ಬದಲಿಗೆ 25,25 ಕೋಟಿ ಕೊಟ್ಟು ಶಿಕಾರಿಪುರಕ್ಕೆ 11 ಕೋಟಿ ಕೊಟ್ಟು ಉಳಿತಯವಾದ 15 ಕೋಟಿಯನ್ನು ಈ ಕಡಲ ಕೊರತಕ್ಕೆ ಇಟ್ಟಿದ್ದರೆ ಇಡೀ ಕರಾವಳಿ ಪ್ರದೇಶದ ಜನರಿಗೆ ಬಹಳ ಉಪಕಾರವಾಗುವಂಥಾ ಕೆಲಸ ಆಗುತ್ತಿತ್ತು. ಇಡೀ ಆ ಪ್ರದೇಶದ ಜನರು ಅವರನ್ನು ನೆನಪಿಸಿಕೊಳ್ಳುತ್ತಿದ್ದರು. ಈ ಪೂರಕ ಬಜೆಟ್‌ನಲ್ಲಿ ಬೇಕಾದ ಸಂಘ ಸಂಸ್ಥೆಗಳಿಗೆ ನೂರಾರು ಕೋಟಿಗಳನ್ನು ಕೊಟ್ಟಿದ್ದರೂ ಕೂಡ ನಮ್ಮ ಕಡಲ ಕೊರತದ ಬಗ್ಗೆ ಗಮನಹರಿಸಿಲ್ಲದಿರುವುದು ಏಕೆ ಎಂದು ನನಗೆ ಅರ್ಥವಾಗಲಿಲ್ಲ. ಸಣ್ಣ ನೀರಾವರಿಯಲ್ಲಿ ಪ್ರವಾಹ ನಿಯಂತ್ರಣಕ್ಕೆಂದು 15 ಕೋಟಿ ಇಟ್ಟಿದ್ದರು. ಕಡಲ ಕೊರತಕ್ಕೆ 15 ಕೋಟಿ ಕೊಟ್ಟಿದ್ದಾರೆಂದು ನನಗೆ ಬಹಳ ಖುಷಿಯಾಯಿತು. ನಾನು ಅಧಿಕಾರಿಗಳನ್ನು ಕೇಳಿದಾಗ, ಅದಕ್ಕವರು ಇಲ್ಲ ಸಣ್ಣ ನೀರಾವರಿ ಇಲಾಖೆಗೆ 15 ಕೋಟಿ ಇಟ್ಟಿದ್ದಾರೆಂದು ಹೇಳಿದರು. ಇದಕ್ಕೆ ನನ್ನ ಕಳಕಳಿಯ ವಿನಂತಿ ಏನೆಂದರೆ, ನಮ್ಮ ಹಣಕಾಸಿನ ಸಚಿವರಲ್ಲಿ ಮನವಿ ಮಾಡುವುದು ಏನೆಂದರೆ, ಯಾವುದಾದರೂ ರೀತಿಯಲ್ಲಿ ಈ ಕಡಲ ಕೊರತಕ್ಕೆ, ಬ್ಯಾಕ್ ವಾಟರ್‌ಗೆ, ಕನಿಷ್ಟ 15 ಕೋಟಿ ರೂಪಾಯಿ ಕೊಡಬೇಕು. ಅದೇ ರೀತಿ ಮಂಗಳೂರಿನಲ್ಲಿ ವಿಶೇಷವಾಗಿ ಹಾಸ್ಟೆಲ್‌ಗಳ ಸಮಸ್ಯೆಯಿದೆ. ಒಂದು ಬ್ಯಾಕ್‌ವರ್ಡ್ ಹಾಸ್ಟೆಲ್ ಕೂಡ ಕೊಡಬೇಕು. ನಮ್ಮ ವೆಂಟೆಡ್ ಡ್ಯಾಂಗೆ 40 ಕೋಟಿ ರೂಪಾಯಿ ಕೊಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಮಾತನಾಡುವಾಗ ಹೇಳಿದರು, ಜಗತ್ತು ಜನರ ಮಧ್ಯೆ ವಿಶ್ವಾಸದಿಂದ ನಡೆಯುತ್ತಿದೆ ಎಂದರು. ಆ ರೀತಿಯ ವಿಶ್ವಾಸ ಬರಲಿಕ್ಕೆ ನಾವು ಬೇಕಾದ ಪರಿಸ್ಥಿತಿಯನ್ನು ನಿರ್ಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಉಲ್ಲಾಳ್ ಕ್ಷೇತ್ರದಲ್ಲಿ ಒಂದು ದಿವಸ ಅಲ್ಲ ಹತ್ತು ದಿವಸ ವಾಸ್ತವ್ಯ ಮಾಡಿ ಆ ಪ್ರದೇಶದ ಕಷ್ಟಸುಖಗಳನ್ನು ನೋಡಿಕೊಂಡು ಆ ಪ್ರದೇಶದ ಜನರಿಗೆ, ನಾನು ಕಡಲ ಕೊರೆತದ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಮಾತನ್ನು ಕೊಟ್ಟಿದ್ದರು. ಇದನ್ನು ಇಡೀ ನಮ್ಮ ಕರ್ನಾಟಕದ ಜನರು ನೋಡಿದ್ದಾರೆ. ಇಲ್ಲಿ ಹಣಕಾಸನ್ನು ಇಡದಿರುವ ಸಂದರ್ಭದಲ್ಲಿ ಯಾವ ರೀತಿಯ ವಿಶ್ವಾಸ ಬರುತ್ತದೆ? ಆದ ಕಾರಣ ನೀವು ವಿಶ್ವಾಸಗಳಿಸತಕ್ಕಂಥ ಕೆಲಸ ಮಾಡಿ ಅನುದಾವನ್ನು ಇಡಬೇಕೆಂದು ಕಳಕಳಿಯಿಂದ ಕೇಳಿಕೊಂಡು ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಆಂಜನೇಯ(ಭರಮಸಾಗರ); ಈ ಸಮ್ಮಿಶ್ರ ಸರ್ಕಾರ ಮಂಡಿಸಿರುವ ಪೂರಕ ಅಂದಾಜುಗಳನ್ನು ನಾವು ಬಹಳ ಅಕ್ಷರಸಹ

ಪೂರ್ಣವಾಗಿ ಸ್ವಾಗತಿಸುತ್ತೇವೆ. ಯಡಿಯೂರಪ್ಪನವರು ತಂದಿರುವ ಈ ಬಜೆಟ್ ಬಡವರ, ರೈತರ, ಅಸಹಾಯಕರ, ದಲಿತರ, ಪರವಾಗಿರುವ ಬಜೆಟ್. ರೈತರ ಸಾಲ ಮನ್ನಾ ಮಾಡಿದ್ದಾರೆ. ದಲಿತರು ಕುಡಿದು ಕುಡಿದು ಹಾಳಾಗಿ ಹೋಗುತ್ತಿದ್ದರು. ಸಾರಾಯಿ ಮತ್ತು ಲಾಟರಿ ನಷೇಧ ಮಾಡಿದ್ದಾರೆ. ಈ ಸಮಾಜದಲ್ಲಿ ಅಸಹಾಯಕರಾಗಿದ್ದಂಥ ವೃದ್ಧರಿಗೆ ವೃದ್ಯಾಪ್ಯ ವೇತನವನ್ನು 100ರಿಂದ 400 ರೂಪಾಯಿ ಮಾಡಿದ್ದಾರೆ. ವಿಧವೆಯರಿಗೆ 400 ರೂಪಾಯಿ ಮಾಡಿದ್ದಾರೆ. 60 ವರ್ಷ ಈ ರಾಜ್ಯವನ್ನು ಆಳಿದಂಥ ಜನ ಯಾರು ಕೂಡ ನೋಡಲಾರದಂಥ ವರ್ಗವನ್ನು ಈ ಸರ್ಕಾರ ಗಮನಸಿದೆ ಅವರ್‍ಯಾರು ಎಂದರೆ ದೇವದಾಸಿಯರು. ದೇವದಾಸಿಯರಿಗೆ ಮಾಶಾಸನ ಕೊಡುವ ಕಾರ್ಯಕ್ರಮ ಹಾಕಿಕೊಳ್ಳುವುದರ ಮೂಲಕ ಅವರಲ್ಲಿ ಭರವಸೆಯನ್ನು ಮೂಡಿಸಿದ್ದಾರೆ. ರಾಜ್ಯದಲ್ಲಿ ಸಮಗ್ರವಾಗಿ ದೇವದಾಸಿಯರ ಸಮೀಕ್ಷೆ ನಡೆಯಬೇಕು. ಸರ್ಕಾರದ ದಾಖಲೆಯಲ್ಲಿ 22 ಸಾವಿರ ಜನರು ಇದ್ದಾರೆಂದು ದಾಖಲೆ ಇದೆ. ಇದಕ್ಕೆ 16 ಕೋಟಿ ಕೊಟ್ಟಿದ್ದಾರೆಂದು ನಮಗೆ ಗೊತ್ತಾಗಿದೆ. ಇನ್ನು 6,400 ಜನರಿಗೆ ಕೊಡಬೇಕಾದ ಅವಶ್ಯಕತೆ ಇದೆ ಎಂದು ಮೊನ್ನೆ ಅಧಿಕಾರಿಗಳು ಹೇಳುತ್ತಿದ್ದರು. ಇದಕ್ಕೆ ಎರಡು ಕೋಟಿ ಬೇಕಾಗಬಹುದು. ಆದುದರಿಂದ ಎಷ್ಟು ಜನ ದೇವದಾಸಿಯರು ಇದ್ದಾರೆ ಅವರೆಲ್ಲರಿಗೂ ಮಾಶಾಸನ ಕೊಡುವ ವ್ಯವಸ್ಥೆಯಾಗಬೇಕೆಂದು ನಾನು ತಮ್ಮ ಮೂಲಕ ನಮ್ಮ ಹಣಕಾಸಿನ ಸಚಿವರಲ್ಲಿ ಬೇಡಿಕೊಳ್ಳುತ್ತೇನೆ. ವಿಶ್ವ ಗುರು ಬಸವಣ್ಣನವರು ಅಪ್ಪಾ ನಮ್ಮ ಮಾದಾರ ಚೆನ್ನಯ್ಯ ಎಂದು ಹೇಳಿದರು, ಆ ಮಾದಾರ ಚೆನ್ನಯ್ಯನವರ ಸ್ಮಾರಕ ಮಾಡಬೇಕು. ನೀವು ಎಲ್ಲಾ ಸಮಾಜಕ್ಕೂ ಗುರುತಿಸಿ ಮಾಡಿದ್ದೀರಿ. ಇದು ಒಂದು ದೊಡ್ಡ ಜನಾಂಗ. ಮೇಲಾಗಿ ದೊಡ್ಡ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಬಸವಣ್ಣನವರು ಹೇಳಿದಂತೆ ಅಪ್ಪಾ ನಮ್ಮ ಮಾಗಾರ ಚೆನ್ನಯ್ಯ, ಹರಳಯ್ಯ, ಡೋಹರ ಕಕ್ಕಯ್ಯ ಇವರೆಲ್ಲರು ಒಳಗೊಂಡಂಥ ಒಂದು ದೊಡ್ಡ ಅನಭವ ಮಂಟಪವನ್ನು ತಾವು ಚಿತ್ರದುರ್ಗದಲ್ಲಿ ಮಾಡಬೇಕು. ಅಲ್ಲಿ ಮಾದಾರ ಚೆನ್ನಯ್ಯನವರ ಗುರು ಪೀಠ ಇದೆ. ಆ ಗುರುಪೀಠಕ್ಕೆ ತಾವೇನಾದರೂ ಹಣಕಾಸನ್ನು ಒದಗಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎನ್.ಯೋಗೇಶ್ ಭಟ್ (ಮಂಗಳೂರು): ಕರಾವಳಿ ಜಿಲ್ಲೆಗಳಿಗೆ ವಿಶೇಷ ಕೊಡುಗೆಗಳನ್ನು ಕೊಟ್ಟಂಥ ನನ್ನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಶಂಕರ ಮೂರ್ತಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕ್ಷೇತ್ರಕ್ಕೆ ಅವರು ಎರಡು ಕಾಲೇಜುಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಅವರು

ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ. ಕಡಲ ಕೊರತಕ್ಕೆ ವಿಶೇಷವಾದ ಪ್ಯಾಕೇಜ್ ಕೊಡಲೇಬೇಕೆಂದು ವಿನಂತಿಸುತ್ತೇನೆ. ಮಂಗಳೂರು ಜಿಲ್ಲಾ ನ್ಯಾಯಾಲಯಕ್ಕೆ ತಾವು ವೀಕ್ಷಣೆ ಮಾಡಿದ್ದೀರಿ. ಹದಿಮೂರುವರೆ ಕೋಟಿಯಲ್ಲಿ ಕನಿಷ್ಟ ಒನ್‌ಥರ್ಡ್ ಗ್ರಾಂಟ್ ನಾಲ್ಕೂವರೆ ಕೋಟಿಯನ್ನಾದರೂ ಬಿಡುಗಡೆ ಮಾಡಬೇಕು. ಇನ್‌ಫೋಸಿಸ್ ಸಂಸ್ಥೆಯ ನೇರವಿನಿಂದ ಆರು ಕೋಟಿ ರೂಪಾಯಿಯ ಕೊಡುಗೆ ನಮ್ಮ ಜಿಲ್ಲಾ ಆಸ್ಪತ್ರೆಗೆ ಬಂದಿದೆ. ಅದಕ್ಕೆ ಮ್ಯಾಚಿಂಗ್ ಗ್ರಾಂಟ್ ಆಗಿ ಐದು ಕೋಟಿ ರೂಪಾಯಿ, ಮೂರು ಕೋಟಿ ರೂಪಾಯಿ ಇನ್‌ಸ್ಟ್ರುಮೆಂಟ್‌ಗೆ ಎರಡು ಕೋಟಿ ರೂಪಾಯಿ ಮ್ಯಾಚಿಂಗ್ ಗ್ರಾಂಟ್ ಆಗಿ ಕೊಡಬೇಕು. ಅದೇ ರೀತಿ ಪೋಲಿಸ್ ಕಮೀಷನರೇಟ್ ಬೇಕು. Sky bus ಗೆ ಸಂಗಂಧಪಟ್ಟ ಹಾಗೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಪಶ್ಚಿಮವಾಹಿನಿಗೂ ತಾವು ಚಾಲನೆ ಕೊಡಬೇಕು. ಅಂತಾರಾಷ್ಟ್ರೀಯ ಏರ್ ಪೋರ್ಟ್‌ಗೆ ಹೋಗುವ ಕನೆಕ್ಟಿವಿಟಿ ರೋಡ್‌ಗೆ ಸಂಬಂಧಪಟ್ಟಂತೆ 10 ಕೋಟಿ ರೂಪಾಯಿ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ತಮಗೆ ವಿಶೇಷವಾದ ವಿನಂತಿ ಮಾಡಿ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಕೊಟ್ಟ ಹಾಗೆ ಫುಟ್‌ಬ್ರಿಡ್ಜ್‌ಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಆದ್ಯತೆ ಕೊಡಬೇಕೆಂದು ವಿನಂತಿಸಿ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಪೂರಕ ಬೇಡಿಕೆಯ ಚರ್ಚೆಯ ಸಂದರ್ಭದಲ್ಲಿ ಅನೇಕ ಹಿರಿಯ ಸದಸ್ಯರು, ವಿಶೇಷವಾಗಿ ಸನ್ಮಾನ್ಯ ಸಿದ್ದರಾಮಯ್ಯನವರು, ರಮೇಶ್ ಕುಮಾರ್ ರವರು, ಪಿ.ಜಿ.ಆರ್.ಸಿಂಧ್ಯಾರವರು, ಬಿ.ಆರ್.ಪಾಟೀಲ್‌ರವರು, ಇತರೆ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಇಲ್ಲಿರುವಂಥ ಹಣಕಾಸಿನ ಲೋಪದೋಷಗಳನ್ನು ಹಣಕಾಸಿನ ಸಚಿವನಾಗಿ ಯಾವ ರೀತಿಯ ಎಚ್ಚರಿಕೆಯಿಂದ ಮುಂದೆ ಹೆಜ್ಜೆ ಇಡಬೇಕು, ಹೀಗೆ ಅನೇಕ ವಿಷಯಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಈ ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 2007–08ನೇ ಸಾಲಿಗೆ ಸಂಬಂಧಿಸಿದ ಮೊದಲನೇ ಕಂತಿನ ಪೂರಕ ಅಂದಾಜುಗಳನ್ನು ನಾನು ಮಂಡನೆ ಮಾಡುವ ಕಾಲದಲ್ಲಿ ಈ ಪೂರಕ ಅಂದಾಜುಗಳ ಮೊದಲ ಕಂತಿನ ಒಟ್ಟು ಮೊತ್ತ 1955 ಕೋಟಿಯ 3 ಲಕ್ಷದ 48 ಸಾವಿರ ರೂಪಾಯಿಗಳು. ಈ ಮೊತ್ತದಲ್ಲಿ 28 ಕೋಟಿಯ 68 ಲಕ್ಷದ 68 ಸಾವಿರ ರೂಪಾಯಿಗಳ ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ. 6 ಕೋಟಿ 11 ಲಕ್ಷದ 79 ಸಾವಿರ ರೂಪಾಯಿಗಳ ಜಮೆಗೆ ಸಂಬಂಧಿಸಿದೆ. 38 ಕೋಟಿ

18 ಲಕ್ಷದ 84 ಸಾವಿರ ರೂಪಾಯಿಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದ್ದುದಾಗಿದೆ. ಅದನ್ನು ಸಾಮಾನ್ಯ ರಾಜಸ್ವದಿಂದ ಹೊರಹೋಗುವಂಥ ಮೊತ್ತ 1882 ಕೋಟಿ 4 ಲಕ್ಷದ 17 ಸಾವಿರ ರೂಪಾಯಿಗಳು ಮಾತ್ರ. ಈ ಪೂರಕ ಅಂದಾಜಿನಲ್ಲಿ 27 ವಿಷಯಗಳು ಅಡಕಗೊಂಡಿದ್ದು ಅವುಗಳ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಸನ್ಮಾನ್ಯ ರಮೇಶ್ ಕುಮಾರ್‌ರವರು, ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಅನೇಕ ಹಿರಿಯ ಸದಸ್ಯರು ಹೇಳಿದಂತೆ ಇವತ್ತು ನನ್ನ ಮುಂದೆ ದೊಡ್ಡ ಸವಾಲು ಇದೆ. ಆ ಸವಾಲು ಏನು? 2007-08 ಆಯವ್ಯಯದಲ್ಲಿ ಕೆಲವು ಕಾರ್ಯಕ್ರಮಗಳನ್ನು ಘೋಷಣೆ ಮಾಡಿ ಮೀಸಲಿಟ್ಟಿದ್ದೇನೆ, 2006-07 ರ ಬಜೆಟ್‌ನಲ್ಲಿ ಯಾವ ರೀತಿ ನಾನು ಹಣವನ್ನು ತೆಗೆದಿಟ್ಟಿದ್ದೆ ಮತ್ತು 95 ಭಾಗ ಆ ಯೋಜನೆಗಳು ಪೂರ್ಣಗೊಳ್ಳುವುದಕ್ಕೆ ಸಹಕಾರಿಯಾಗಿದೆ ಅದೇ ರೀತಿ ಈ ಸಲ ನಾನು ಹೇಳಿರುವಂಥ ಎಲ್ಲಾ ಕಾರ್ಯಕ್ರಮಗಳನ್ನು ಸಮಯಕ್ಕೆ ಸರಿಯಾಗಿ ಅನುದಾನವನ್ನು ಒದಗಿಸಿ ಆ ಕಾರ್ಯ ಪೂರ್ಣ ಆಗುವಂತೆ ನೋಡಿಕೊಳ್ಳುವ ಒಂದು ಸವಾಲು ಇದೆ. ಎರಡನೆಯದಾಗಿ, GDS growth ಯಾವುದೇ ಕಾರಣಕ್ಕೂ 3ರ ಒಳಗೆ ವಿತ್ತೀಯ ಕೊರತೆ ಇರಬೇಕೆನ್ನುವುದು ಏನು ಇದೆ, ಇದನ್ನು ನಿಶ್ಚಿತವಾಗಿ ಬಹಳ ಎಚ್ಚರಿಕೆಯಿಂದ ನಾನು ನೋಡಬೇಕಾಗಿದೆ. ತಮ್ಮಗೆಲ್ಲಾ ಗೊತ್ತಿರುವ ಹಾಗೆ ಅನರೀಕ್ಷಿತವಾದ ಬೆಳವಣಿಗೆಗಳು ಆದವು. ರಾಜ್ಯದ ರೈತರ ಸಾಲ ಮನ್ನಾ ಮಾಡಬೇಕೆಂದು ಒಂದು ನಿರ್ಧಾರಕ್ಕೆ ಬಂದ ಮೇಲೆ ಕೇವಲ 25 ಸಾವಿರ ರೂಪಾಯಿಗಳನ್ನು ಮನ್ನಾ ಮಾಡಬೇಕೆನ್ನುವಂಥ ಚಿಂತನೆಯಾಗಿತ್ತು. ಅದೇ ರೀತಿ ನಾನು ಆಯವ್ಯಯವನ್ನು ಮಂಡನೆ ಮಾಡಿದ್ದೆನು. ಆದರೆ, ಈ ಮನೆಯ ಎಲ್ಲಾ ಸದಸ್ಯರ ಒತ್ತಾಯ, ಒಂದು ಬಾರಿ ಕೊಟ್ಟಂಥ concession ಎಲ್ಲಾ ರೈತರಿಗೂ ಸಿಗಬೇಕೆನ್ನುವ ಪ್ರಶ್ನೆ ಬಂದಾಗ ನಾನು ಅದಕ್ಕೆ ತಲೆ ಬಾಗಬೇಕಾಯಿತು. ಏಕೆಂದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವರ ಪ್ರತಿನಿಧಿಗಳಾಗಿ ನೀವು ಬಂದಂಥವರು ಇದ್ದಾಗ ಇಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನುವ ಭೇದಭಾವ ನೋಡದೇ ನಮ್ಮ ಸಲಹೆಗೆ ನಾನು ತಲೆ ಬಾಗಿ ಒಪ್ಪಿಕೊಂಡಿದ್ದರಿಂದ 1000 ಕೋಟಿ ರೂಪಾಯಿಗಳ ಒಳಗೆ ಸರ್ಕಾರಕ್ಕೆ ಭಾರ ಬೀಳತಕ್ಕಂಥದ್ದು ಸುಮಾರು 2200 ಕೋಟಿ ರೂಪಾಯಿಗಳಷ್ಟು ಆಗಿರುವುದು ತಮಗೆಲ್ಲ ಗೊತ್ತಿರುವ ವಿಚಾರ. ಪೂರ್ವಭಾವಿ ದೂರದೃಷ್ಟಿ ಇಟ್ಟುಕೊಂಡೇ ಮಾರ್ಚ್ ಸಂದರ್ಭದಲ್ಲಿ ಪೂರಕ ಬೇಡಿಕೆಯಲ್ಲಿ 500 ಕೋಟಿ ರೂಪಾಯಿಗಳನ್ನು ಸಾಲ ಮನ್ನಾ ಬಗ್ಗೆ ನಾವು ತೆಗೆದಿಟ್ಟುಕೊಂಡಿದ್ದೆವು. ಈ 750 ಕೋಟಿ ರೂಪಾಯಿಗಳು ಸೇರಿದಂತೆ

ಒಟ್ಟು ಇದುವರೆಗೂ 1750 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ ಹಾಗೆ ಆಯಿತು. ನನಗನ್ನಿಸುತ್ತದೆ, ಸ್ವಾತಂತ್ರ್ಯ ಬಂದ ಮೇಲೆ ಕರ್ನಾಟಕ ರಾಜ್ಯ ಇತಿಹಾಸದಲ್ಲಿ ಈ ರೀತಿ ದೊಡ್ಡ ಪ್ರಮಾಣದಲ್ಲಿ ಒಂದೇ ಬಾರಿಗೆ ರೈತನಗೆ ಸವಲತ್ತು ಕೊಟ್ಟಿರುವಂಥಾದ್ದು ಮತ್ತು ಅದಕ್ಕೆ ಅಗತ್ಯವಿರುವ 70–80 ಭಾಗದ ಹಣವನ್ನು ಬಿಡುಗಡೆ ಮಾಡಿದಂಥಾದ್ದು, ನಮಗೆ ಸುಮಾರು 2200–250 ಕೋಟಿ ಬೇಕೆಂದರೆ ಇವತ್ತೇನು 750 ಕೋಟಿ ರೂಪಾಯಿಗಳನ್ನು ನಾನು ಬಿಡುಗಡೆ ಮಾಡುವುದಕ್ಕೆ ಪೂರಕ ಬಜೆಟ್‌ನಲ್ಲಿ ವ್ಯವಸ್ಥೆ ಮಾಡಿದ್ದೇನೆ, ಇನ್ನು 3–4 ದಿವಸಗಳಲ್ಲಿ ಆದ್ಯತೆ ಮೇಲೆ ಹಣ ಬಿಡುಗಡೆ ಮಾಡಬೇಕೆನ್ನುವುದು ನನ್ನ ಉದ್ದೇಶವಾಗಿದೆ. ಆದ್ದರಿಂದ 1750 ಕೋಟಿ ರೂಪಾಯಿಗಳಷ್ಟು adjust ಆದ ಮೇಲೂ ಉಳಿದಂಥ ಸುಮಾರು 250–300 ಕೋಟಿ ರೂಪಾಯಿಗಳ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ. ನಾನು ಇಷ್ಟು ಮಾತ್ರ ಈ ಮನೆಗೆ ಭರವಸೆಯನ್ನು ಕೊಡುವುದಕ್ಕೆ ಇಚ್ಚೆ ಪಡುತ್ತೇನೆ. ಕೊರತೆ ಬೇರೆ ಯಾವುದೇ ವಿಷಯಕ್ಕೆ ಆದರೂ ಪರವಾಗಿಲ್ಲ, ಸಹಕಾರಿ ಕ್ಷೇತ್ರದಲ್ಲಿ ಸಹಕಾರಿ ಸಂಘಗಳು ರೈತನಿಗೆ ಸಾಲ ಕೊಡುವಂಥ ಶಕ್ತಿ ಅದಕ್ಕೆ ಬರಬೇಕು. ಯಾವುದೇ ಕಾರಣಕ್ಕೂ ಅದಕ್ಕೆ ಕೊರತೆ ಆಗದಿರುವ ರೀತಿಯಲ್ಲಿ ಈ ಹಣವನ್ನು ಸಹ ಭರ್ತಿ ಮಾಡಿ ನಮ್ಮ ರೈತರಿಗೆ ಅಗತ್ಯವಿರುವ ಸಾಲ ಕೊಡುವುದಕ್ಕೆ ನಾವು ಬದ್ಧವಾಗಿದ್ದೇವೆ, ಅದಕ್ಕೆ ಯಾವುದೇ ಕೊರತೆ ಬೀಳದಂತೆ ನಾವು ನೋಡುತ್ತೇವೆನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಚೆಪಡುತ್ತೇನೆ. ಈ ಸದನದಿಂದ ಅನೇಕ ಸಲಹೆಗಳು ಬಂದಿವೆ. ಡಾ: ರಾಜ್‌ಕುಮಾರ್‌ರವರ ಪ್ರತಿಮೆ, ಮಂಟಪಕ್ಕೆ ನಾವು ಹಣ ಇಟ್ಟಿರುವುದು ನನಗೇನೂ ಸಮಾಧಾನವಿಲ್ಲ. ನಾನು ಇಷ್ಟು ಮಾತ್ರ ಮಾನ್ಯ ನರೇಂದ್ರಬಾಬುರವರಿಗೆ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನೀವು ಕೆಲಸ ಪ್ರಾರಂಭ ಮಾಡಿ. ಈ ತರಹ ಪ್ರಮುಖವಾದ ವಿಷಯಗಳ ಬಗ್ಗೆ ಯಾವುದೇ ಕೊರತೆ ಆಗದಂತೆ ಕೆಲಸ ಕಾರ್ಯಗಳು ಪ್ರಾರಂಭವಾದ ಮೇಲೆ ಹಣ ಬಿಡುಗಡೆ ಮಾಡುವಂಥಾದ್ದು, ಬಹುಶ: ಈ ಕನ್ನಡ ನಾಡಿನ ಕಣ್ಮಣಿ ದಿವಗಂತ ಡಾ॥ ರಾಜ್‌ಕುಮಾರ್‌ರವರಿಗೆ ಯಾವ ರೀತಿ ಈ ಮನೆಯಲ್ಲಿ ನೀವು ಅಪೇಕ್ಷೆ ಪಡುತ್ತೀರೋ ಆ ರೀತಿ ಒಂದು ಸ್ಮಾರಕ ಭವನ ಆಗಬೇಕೆನ್ನುವುದು ನನ್ನ ಆಸೆಯಾಗಿದೆ. ಈ 3ಕೋಟಿ ರೂಪಾಯಿಗಳಿಂದ ಪ್ರಾರಂಭವಾಗಿ ಇನ್ನು ಎಷ್ಟು ಹಣ ಬೇಕೋ ಬೇಕಾದರೆ ಕೊಡೋಣ. ಆ ಕೆಲಸ ಆಗಬೇಕು. ಆದ್ದರಿಂದ ಆ ಮೂರು ಕೋಟಿ ರೂಪಾಯಿಗಳಲ್ಲಿಯೇ ಆ ಕಾರ್ಯ ಮುಗಿಯಬೇಕೆಂದು ನನ್ನದೇನೂ ಅಪೇಕ್ಷೆ ಇಲ್ಲ. ಇಂಥ ಪ್ರಮುಖವಾದ ವಿಷಯಕ್ಕೆ ಬೇಕಾದರೆ ಈ ಮೂರು ಕೋಟಿ

ರೂಪಾಯಿ ಮೊದಲನೇ ಕಂತು ಎಂದು ಬೇಕಾದರೆ ತಿಳಿದುಕೊಳ್ಳಬಹುದು. ಒಟ್ಟಿನಲ್ಲಿ ಆ ಕೆಲಸ ಆಗಬೇಕು. ಇನ್ನು ಬಂಜಾರ ಸಮುದಾಯದ ಬಗ್ಗೆ ಹೇಳುವುದಾದರೆ, ಇದುವರೆವಿಗೂ ನಮಗ್ಯಾರಿಗೂ ಯೋಚನೆ ಮಾಡಲಿಕ್ಕೆ ಆಗಿರಲಿಲ್ಲ. ನಾನು ಭರವಸೆ ಕೊಟ್ಟಿದ್ದೆ. ಅದರಂತೆ ಅವರ ಅಭಿವೃದ್ಧಿಗೆ 14 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ನಾನು ವ್ಯವಸ್ಥೆ ಮಾಡಿದ್ದೇನೆ. SC/ST Micro credit ಸಾಲದ ವ್ಯವಸ್ಥೆಗೋಸ್ಕರ 10 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಅದೇ ರೀತಿ ಅಲ್ಪ ಸಂಖ್ಯಾತರ Micro credit ವ್ಯವಸ್ಥೆಯಲ್ಲಿ ಸಾಲ ಸೌಲಭ್ಯಗಳು ಸಿಗಬೇಕೆಂದು ಅದಕ್ಕೆ ಹಣವನ್ನು ತಗೆದಿಡುವಂಥ ಪ್ರಯತ್ನ ಮಾಡಿದ್ದೇವೆ. ಅದಕ್ಕಿಂತ ಹೆಚ್ಚಾಗಿ ವಾಟಾಳ್ ನಾಗರಾಜ್‌ರವರು, ರಮೇಶ್ ಕುಮಾರ್ ರವರು ಹೇಳಿದಂತೆ, ಈ ದೇವದಾಸಿಯರ ಬಗ್ಗೆ ನಾವು ಬಹಳ ಮಾತನಾಡುತ್ತಿದ್ದೇವೆ. ಆದರೆ, ಇದುವರೆಗೂ ಯಾರೂ ಆ ಕಡೆ ಗಮನ ಕೊಡಲಿಕ್ಕಾಗುವುದಿಲ್ಲ. ಆದರೆ, ಮೊದಲನೆ ಬಾರಿಗೆ 16471 ದೇವದಾಸಿಯರಿಗೆ ಮಾಸಾಶನ ಕೊಡುವುದಕ್ಕೋಸ್ಕರ 790 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ನಿನ್ನೆ ಸುಮಾರು ಒಂದೂವರೆ ಸಾವಿರ ಜನ ನನ್ನ ಮನೆಗೆ ಬಂದಿದ್ದರು. ನಾನು ಅವರಿಗೆ ಏನು ಹೇಳಿದೆನೆಂದರೆ, ನೀವು ಯಾರಿಗೂ ಕೈಮುಗಿಯಬೇಡಿ, ಯಾರಿಗೂ ಒಂದು ರೂಪಾಯಿ ಸಹ ಲಂಚರುಷುವತ್ತು ಕೊಡಬೇಡಿ, ನಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ, ನಿಮ್ಮ ಮನೆ ಬಾಗಿಲಿಗೆ ಬಂದು record ಮಾಡಿ ಮುಂದಿನ ತಿಂಗಳಿಂದ ಪ್ರತಿ ತಿಂಗಳು ನಿಮಗೆ 400 ರೂಪಾಯಿ ಸಿಗಬೇಕು, ನೀವು ಸ್ವಾಭಿಮಾನದಿಂದ ಬದುಕಬೇಕು ಎಂದು ಈ ಮಾತನ್ನು ನಾನು ಹೇಳಿದ್ದೇನೆ. ಅದೇ ರೀತಿ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡುವ ಪ್ರಯತ್ನವನ್ನು ಮಾಡಿದ್ದೇವೆ. ಇನ್ನು ಇಲ್ಲಿ ಪ್ರಸ್ತಾಪವಾಗುವಂಥ ಕಾಲದಲ್ಲಿ ಸಂಪನ್ಮೂಲ ಲಭ್ಯತೆಯ ಬಗ್ಗೆ ಅನೇಕ ರೀತಿಯ ಸಲಹೆಗಳು ಬಂದಿವೆ. ಯಡಿಯೂರಪ್ಪನವರೇ ಇದನ್ನು ಹೇಗೆ ತೂಗಿಸಿಕೊಂಡು ಹೋಗುತ್ತೀರಿ? ಎಂದು ಕೇಳಿದ್ದಾರೆ. ಈ ಪ್ರಶ್ನೆ ನಿಜಕ್ಕೂ ಒಂದು ಸವಾಲಾಗಿ ನನ್ನ ಕಣ್ಣ ಮುಂದೆ ಇದೆ. ಈ ಹಣವನ್ನು ಸರಿದೂಗಿಸಲು ಇನ್ನು ಯಾರ ಮೇಲೋ ಈ ಯಡಿಯೂರಪ್ಪ ಭಾರ ಹಾಕುತ್ತೇನೆಂದು ತಿಳಿದುಕೊಳ್ಳಬೇಡಿ. ನಾಳೆಯ ದಿವಸ ಮೊದಲ ಬಾರಿಗೆ ಪ್ರಧಾನ ಮಂತ್ರಿಯವರು ಬಂದಾಗ ನಾನು ಅತ್ಯಂತ ವಿನಮ್ರವಾಗಿ ಅವರಿಗೆ ಮನವಿಯನ್ನು ಕೊಡಬೇಕೆಂದಿದ್ದೇನೆ. ಈ ರಾಜ್ಯದಲ್ಲಿ ಮೊದಲ ಬಾರಿಗೆ 2200 ಕೋಟಿ ರೂಪಾಯಿಗಳನ್ನು ರೈತರ ಸಾಲ ಬಡ್ಡಿ ಮನ್ನಾ ಮಾಡಿರುವ ಸಂದರ್ಭದಲ್ಲಿ ಅದರಲ್ಲಿ 50% ನಷ್ಟವಾದರೂ ಕೇಂದ್ರ ಸರ್ಕಾರ

ನಮ್ಮ ನೆರವಿಗೆ ಬಂದರೆ, ಸುಮಾರು 25 ಸಾವಿರ ಕೋಟಿ ರೂಪಾಯಿಗಳು package ಬಗ್ಗೆ ಅವರು ಚಿಂತನೆ ನಡೆಸಿದ್ದಾರೆ, Dry land development ಗೋಸ್ಕರ ತೋಟಗಾರಿಕೆಗೋಸ್ಕರ, ಈ ತರಹ ಯೋಜನೆ ಮಾಡುವಂಥ ಕಾಲದಲ್ಲಿ ಇದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ರೀತಿ ತೂಗಿಸಿಕೊಂಡು ಹೋಗುವುದಕ್ಕೆ ಅನುಕೂಲವಾಗಬಹುದು ಎನ್ನುವ ವಿನಂತಿಯನ್ನು ಮಾಡುವವನಿದ್ದೇನೆ. ನಮ್ಮ ಸನಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿಲ್ಲ. ಆದರೆ, ಸಮ್ಮಿಶ್ರ ಸರ್ಕಾರದಲ್ಲಿ ನಾವು ಮತ್ತು ಅವರು ಕುಳಿತು ಚರ್ಚೆ ಮಾಡಿದ ಕಾಲದಲ್ಲಿ ಒತ್ತುವರಿಯಾದ ಜಮೀನುಗಳನ್ನು ಮಾರಾಟದಿಂದ ಸುಮಾರು 3 ಸಾವಿರ ಕೋಟಿ ರೂಪಾಯಿಗಳನ್ನು ಒಟ್ಟುಗೂಡಿಸುವುದು ನನ್ನ ಜವಾಬ್ದಾರಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಕಾರ್ಯಕ್ರಮವನ್ನು ಘೋಷಣೆ ಮಾಡುವಂಥ ಕಾಲದಲ್ಲಿ, ಬಜೆಟ್ ಅನ್ನು ತಯಾರು ಮಾಡುವಂಥ ಕಾಲದಲ್ಲಿ 3000 ಕೋಟಿ ರೂಪಾಯಿಗಳನ್ನು ಜಮೀನು ಹರಾಜಿನಂದ ಒದಗಿಸಿ ಕೊಡುತ್ತೇನೆ. ಎನ್ನುವ ಭರವಸೆಯನ್ನು ಅವರು ಕೊಟ್ಟಿದ್ದರು. ನನಗೆ ಇವತ್ತಲ್ಲ ನಾಳೆ ಹೇಗೆ ಮಾಡಬೇಕೆನ್ನುವುದನ್ನೆ ಯೋಚನೆ ಮಾಡುತ್ತಿದ್ದೆ. ಆದರೆ, ಅಲ್ಲಿ ಕೊರತೆ ಆಯಿತೆಂದು ಇಲ್ಲಿ ಕಾರ್ಯಕ್ರಮಕ್ಕೆ ಒಂದು ರೂಪಾಯಿ ಸಹ ಕೊರತೆಯಾಗುವುದಿಲ್ಲ. ಆ ಭರವಸೆಯನ್ನು ನಾನು ಕೊಡುತ್ತೇನೆ. ಇಲ್ಲಿ ನಂತು ನಾನು ಮಾತನಾಡುತ್ತಿದ್ದೇನೆ. ನಾಳೆ ಮಾರ್ಚ್ ಕೊನೆಯಲ್ಲಿ ಮತ್ತೊಮ್ಮೆ ಏನೇನು ಕಾರ್ಯಕಲಾಪವಾಗಿದೆ ಎಂದು ಮಾತನಾಡಲು ನಾವು ಇಲ್ಲಿ ನಂತಾಗ ನಾನೇನು ಅವತ್ತು ಭರವಸೆಯನ್ನು ಕೊಟ್ಟಿದ್ದೇ ಅದಕ್ಕೆ ಯಾವುದೇ ಕಾರಣಕ್ಕೂ ಸಹ ಕೊರತೆಯಾಗದ ರೀತಿಯಲ್ಲಿ, ವಿತ್ತೀಯ ಕೊರತೆ ಶೇ.3ರ ಒಳಗೆ ಇರಬೇಕೆನ್ನುವುದು, 2ನೆಯದು, ನಾವೇನು ಈ ಬಜೆಟ್‌ನಲ್ಲಿ ಇರುವಂಥ ಕಾರ್ಯಕ್ರಮಗಳಿಗೆ ಆದ್ಯತೆ ಕ್ಷೇತ್ರಕ್ಕೆ ಪೂರ್ಣ ಹಣವನ್ನು ಬಿಡುಗಡೆ ಮಾಡುವಂಥಾದ್ದು, ಇದರ ಬಗ್ಗೆ ನಾನು ವಿಶೇಷ ಗಮನ ಕೊಡುತ್ತೇನೆ. ಇನ್ನು ನಾವು ಸಾರಾಯಿ ನಿಷೇಧ ಮಾಡಿದ ಮೇಲೆ, ಯಾರು ಎಷ್ಟು ಕುಡಿಯಾಬೇಕು ಯಾರು ಕುಡಿಯಬಾರದೆಂದು ಹೇಳಲಿಕ್ಕೆ ನನಗೆ ಇತಿಮಿತಿ ಇದೆ. ಆದರೆ, ಸದಸ್ಯರು ಹೇಳಿದ ಹಾಗೆ IML sales ಸಾಕಷ್ಟು ಜಾಸ್ತಿಯಾಗಿದೆ. ಆದ್ದರಿಂದ, ನನ್ನ ಅಂದಾಜು ಒಂದು ಏನಿದೆ ಎಂದರೆ, ಒಂದು ಸಾವಿರ ಕೋಟಿ ರೂಪಾಯಿಗಳನ್ನು ತುಂಬಬಹುದೆಂದು ಅಂದುಕೊಂಡಿದ್ದೇನೆ, 1900 ಕೋಟಿ ರೂಪಾಯಿಗಳಷ್ಟು ಭಾರ ನನ್ನ ಮೇಲೆ ಬೀಳುತ್ತದೆಂದು ನಾನೇನು

ಅಂದುಕೊಂಡಿದ್ದೇನೆ, ಈ sales ಜಾಸ್ತಿಯಾಗಿರುವುದರಿಂದ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಆ ಕೊರತೆಯನ್ನು ತುಂಬಬಹುದೆಂದು ತಿಳಿದುಕೊಂಡಿದ್ದೇನೆ. ಈಗಾಗಲೇ cabinet decision ಆಗಿದೆ. ಅಂತರಾಷ್ಟ್ರೀಯ ವಿಮಾನ ನಲ್ದಾಣದ ಸ್ವಾಧೀನ ಪಡಿಸಿಕೊಂಡಂಥ ಜಮೀನು, ನೀವು ಹೇಗೆ ಹರಾಜು ಹಾಕುತ್ತೀರೆಂದು ಕೆಲವರು ಕೇಳಬಹುದು. ಅದು improvements ಗೋಸ್ಕರ ತೆಗೆದುಕೊಂಡಿದ್ದವು. ನಾವು invest ಮಾಡಿದ್ದೇವೆ. ಸುಮಾರು 400 ಎಕರೆ ಇದ್ದು, ಅದಕ್ಕೆ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಸಹ ಇದೆ. ಅದರ ಮಾರಾಟದಿಂದ ಸುಮಾರು 700ರಿಂದ750 ಕೋಟಿ ರೂಪಾಯಿಗಳಷ್ಟು ನಮಗೆ ಬರುತ್ತದೆಂದು ಈಗಾಗಲೇ cabinet ನಲ್ಲಿ ನಾವು decision ತೆಗೆದುಕೊಂಡಿದ್ದೇವೆ. ನಂತರ Stamp duty and registration ನಲ್ಲಿ ಸಾಕಷ್ಟು ಬೆಳವಣಿಗೆಯಾಗುವಂಥ ಸಾಧ್ಯತೆ ಇದೆ. ತೆರಿಗೆಯನ್ನು ಇನ್ನೂ tight ಮಾಡಬೇಕಾಗುತ್ತದೆ. ನಾನು ಹಣಕಾಸಿನ ಸಚಿವನಾಗಿ ತೆರಿಗೆ ಸೋರಿಕೆ ಸಂಪೂರ್ಣವಾಗಿ ನಿಂತಿದೆ ಎಂದು ಹೇಳವುದಕ್ಕೆ ಇಚ್ಚೆಪಡುವುದಿಲ್ಲ. ಅದನ್ನು ಬಿಗಿ ಮಾಡಿದರೆ ಬಹುಶಃ ಈ ಕೊರತೆಗಳನ್ನು ತುಂಬುವುದಕ್ಕೆ ಸಾಧ್ಯವಿದೆ ಎನ್ನುವ ಸಂಪೂರ್ಣ ಭರವಸೆ, ವಿಶ್ವಾಸ ನನಗಿದೆ. ಆದ್ದರಿಂದ ಮುಂದಿನ ಪೂರಕ ಅಂದಾಜುಗಳ ಬೇಡಿಕೆ ಇಡುವಂಥ ಕಾಲದಲ್ಲಿ ಇವತ್ತೇನು ಸನ್ಮಾನ್ಯ ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ, ಯಾವ್ಯಾವುದಕ್ಕೆ ಆದ್ಯತೆ ಕೊಡಬೇಕೆಂದು ನೀವೇನು ಅಪೇಕ್ಷೆ ಪಟ್ಟಿದ್ದೀರಿ, ಅದರ ಬಗ್ಗೆ ನಾನು ಅತ್ಯಂತ ಹೆಚ್ಚು ಗಮನ ಕೊಡುತ್ತೇನೆ. ಯಾವುದನ್ನು ಇಲ್ಲಿ ಸೇರಿಲಿಕ್ಕೆ ಆಗಲಿಲ್ಲವೋ ಅವುಗಳನ್ನು ಹಾಗೂ ನಮ್ಮ ಮನಸ್ಸಿನಲ್ಲಿರುವ ಭಾವನೆಗಳಿಗೆ ಸ್ಪಂದಿಸುವುದಕ್ಕೆ ಮತ್ತು ಸರಿಪಡಿಸುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಈ KMF ವಿಷಯಕ್ಕೆ ನೀವು ಹಣಕಾಸಿನ ಅನುಕೂಲತೆಯನ್ನು ಮಾಡಿಕೊಟ್ಟಿರಿ, ಅದು ಹೇಗಾಯಿತು ಎಂದು ಈ ಸದನದಲ್ಲಿ ಚರ್ಚೆಗೆ ಬಂದಿತ್ತು. ಏಕೆಂದರೆ, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಈ milk procurement operation ಅನ್ನು ಸರ್ಕಾರದ ತೀರ್ಮಾನದಂತೆ ಅವೆಲ್ಲವನ್ನು ಪ್ರಾರಂಭ ಮಾಡಲಾಗಿತ್ತು. ಈ ಕ್ರಮದಿಂದ KMF ಸಂಸ್ಥೆ ಸ್ವಲ್ಪ ನಷ್ಟವನ್ನು ಅನುಭವಿಸಿತು. Dairy takeover ಆದಂಥ ಸಂದರ್ಭದಲ್ಲಿ ಸ್ವಲ್ಪ loss ಆಯಿತು. ಉತ್ತರ ಕರ್ನಾಟಕದಲ್ಲಿ ಇದ್ದ ಸರ್ಕಾರಿ dairy ಗಳನ್ನು ವಹಿಸಿಕೊಂಡಾಗಲೂ ಸ್ವಲ್ಪ loss ಆಯಿತು. ಹೀಗಾಗಿ ನಾವು ಅದರ ಭಾರವನ್ನು ತುಂಬಬೇಕೆನ್ನುವ ದೃಷ್ಟಿಯಿಂದ ಆ ಒಂದು ಕೆಲಸವನ್ನು ಮಾಡಬೇಕಾಯಿತು. ಡಾ: ಸಿದ್ದಯ್ಯ ಪುರಾಣಿಕ ಭವನಕ್ಕೆ 1 ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದೇವೆ, ನಮಗೆ ಹೆಚ್ಚು ಬೇಕೆಂದು ಕೇಳಿದ್ದೀರಿ. ಅದರ ಮೊದಲು ಎಲ್ಲಿ ಮಾಡಬೇಕೆನ್ನುವುದಕ್ಕೆ ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಿ. ಅದರ ಬಗ್ಗೆಯೂ ಸಹ ನಾನು ಗಮನವನ್ನು ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಒಂದು ಮಾತನ್ನು ಅತ್ಯಂತ ಸಂತೋಷದಿಂದ ಹೇಳಲಿಕ್ಕೆ ಬಯಸುತ್ತೇನೆ. ಸುಮಾರು 850ರಿಂದ 900 ಕೋಟಿ ರೂಪಾಯಿಗಳನ್ನು ಈ ಪೂರಕ ಬೇಡಿಕೆಯಲ್ಲಿ ರೈತ ಸಮುದಾಯಕ್ಕೆ ಅನುಕೂಲವಾಗುವುದಕ್ಕೆ ಬಿಡುಗಡೆ ಮಾಡಿದ್ದೇನೆ. ಕಬ್ಬು ಬೆಳೆಗಾರರ ನಷ್ಟ ತುಂಬುವುದಕ್ಕೋಸ್ಕರ 50 ಕೋಟಿ ರೂಪಯಿಗಳನ್ನು ಇಟ್ಟು ತುಂಬುವಂಥ ಪ್ರಯತ್ನ ಮಾಡಿದ್ದೇವೆ. ಬಡ್ಡಿ ಮನ್ನಾ ಯೋಜನೆಯಲ್ಲಿ ಹಣವನ್ನು ಕೊಟ್ಟಿದ್ದೇವೆ. ಈ ಅತ್ಮಹತ್ಯೆ package ಗೋಸ್ಕರ 39 ಕೋಟಿ 47 ಲಕ್ಷ ರೂಪಾಯಿಗಳನ್ನು ನಾವು ಕೊಡಬೇಕಾಗಿತ್ತು, ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ ಇರಬಹುದು, ಕಬ್ಬು ಬೆಳೆಗಾರರ ಬಗ್ಗೆ ಇರಬಹುದು, ಹೀಗೆ ನಮ್ಮ ಪೂರಕ ಬೇಡಿಕೆಯಲ್ಲಿ ಹಣವನ್ನು ಒದಗಿಸುವ ಅನಿವಾರ್ಯ ಸಂದರ್ಭ ಇದುದ್ದರಿಂದ ಆದ್ಯತೆಗೆ ಮಾತ್ರ ಹೆಚ್ಚು ಅವಕಾಶವನ್ನು ಮಾಡುವ ಪ್ರಯತ್ನ ನಾನು ಮಾಡಿದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಮತ್ತು ಕೇಂದ್ರ ಸರ್ಕಾರದ ಗ್ರಾಮೀಣ ಕುಡಿಯುವ ನೀರಿನ ಸರಬರಾಜು ಕಾರ್ಯಕ್ರಮಗಳಿಗೆ ಹಣ ಬಂದಿದೆ ಅದಕ್ಕೆ ನಾವು matching grant ಅನ್ನು ಕೊಡಬೇಕಾಗಿತ್ತು. ಅದಕ್ಕೆ 200 ಕೋಟಿ ರೂಪಾಯಿಗಳನ್ನು ನಾನು ಒದಗಿಸಬೇಕಾಗುತ್ತದೆ. ಇದು ಅನಿವಾರ್ಯತೆ, ಯಾವುದೇ ಸರ್ಕಾರ ಇದ್ದರೂ ಸಹ ಪೂರಕ ಬೇಡಿಕೆ ಮಾಡುವಂಥ ಕಾಲದಲ್ಲಿ ಯಾವುದರಿಂದ ನಾವು ಅನುಕೂಲ ಮಾಡುವುದಕ್ಕೆ, ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಅದೆಷ್ಟೋ ವರ್ಷಗಳಿಂದ ಅಲ್ಲಿಯ ಕಾರ್ಮಿಕರ ಕೂಗು ಇತ್ತು. ಅಲ್ಲಿ ಕಾರ್ಖಾನೆ ಇದ್ದರೂ ಸಹ ಆ ಕಾರ್ಖಾನೆಯನ್ನು ಸರಿಪಡಿಸುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಿರಲಿಲ್ಲ. ಅದಕ್ಕೋಸ್ಕರ ಇವತ್ತು ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಸರ್ಕಾರದ ಖಾತರಿ ಆಧರಿಸಿ Apex Bank ನಿಂದ ಪಡೆದ ಸಾಲವನ್ನು ಮರುಪಾವತಿ ಮಾಡುವುದಕ್ಕೋಸ್ಕರಕ್ಕೂ ಸಹ 2 ಕೋಟಿ 86 ಲಕ್ಷ ರೂಪಾಯಿಗಳನ್ನು ಒದಗಿಸಿರುವಂಥಾದ್ದು, ಇನ್ನು ನಗರ ಅಭಿವೃದ್ಧಿ ಇಲಾಖೆಗೆ, ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರಿದಂಥ ಪ್ರದೇಶಗಳಿಗೆ ಸುಮಾರು 250 ಕೋಟಿ ರೂಪಾಯಿಗಳನ್ನು ಒದಗಿಸಲೇಬೇಕೆಂದು ಹೇಳಿದ್ದರು. ಆದರೆ, ಅದು ಆಗಿರಲಿಲ್ಲ. ಆದ್ದರಿಂದ ಈ ಪೂರಕ ಬೇಡಿಕೆಯಲ್ಲಿ ಅದನ್ನು ಸೇರಿಸುವಂಥ ಪ್ರಯತ್ನ

ಮಾಡಿದ್ದೇವೆ. ಗುಲ್ಬರ್ಗಾ High court ಸಂಚಾರಿ ಪೀಠಕ್ಕೂ ಸಹ ಸುಮಾರು 4 ಕೋಟಿ 77 ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ನಾವು ಕೊಡಬೇಕಾಗಿತ್ತು. ಆಯವ್ಯಯದ ಮೇಲಿನ ಚರ್ಚೆ ಸಂಧರ್ಭದಲ್ಲಿ ಉಡುಪಿ ಮತ್ತು ಉತ್ತರ ಕರ್ನಾಟಕಕ್ಕೆ foot bridge ಗೋಸ್ಕರ 5 ಕೋಟಿ ರೂಪಾಯಿಗಳು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದು ಅದನ್ನು ಮಾಡಿದ್ದೇವೆ. ಮಂಗಳೂರಿಗೆ 20 ಕೋಟಿ ರೂಪಾಯಿಗಳನ್ನು ಬೇರೆಯಾಗಿಯೇ ಕೊಟ್ಟಿದ್ದೇನೆ, ನೀವು ಅದನ್ನು ಪ್ರಸ್ತಾಪ ಮಾಡಿದ್ದೀರಿ. ಒಂದೊಂದು ಜಿಲ್ಲೆಯ ಬಗ್ಗೆಯೂ ನಾನು ವಿವರವಾಗಿ ಹೇಳುತ್ತಾ ಹೋದರೆ, ಕಳೆದ ಬಜೆಟ್‌ನಿಂದ ಬಹಳಷ್ಟು ಜಿಲ್ಲೆಗಳಿಗೆ ಕೊರತೆಯಾಗಿದೆ ಎಂದು ಅನ್ನಿಸುವುದಿಲ್ಲ. ಒಂದಿಷ್ಟು ಕಮ್ಮಿ ಆಗಿದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಮುಂದೆ ಬರುವ ದಿವಸಗಳಲ್ಲಿ ಈ ರೀತಿ ವ್ಯತ್ಯಾಸಗಳು ಆಗಿದೆ ಎಂದು ಏನು ಹಿರಿಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದೀರಿ, ಆ ಕಡೆಗೆ ನಾನು ನಿಶ್ಚಿತವಾಗಿ ನಾನು ಗಮನ ಕೊಡುತ್ತೇನೆ. ನಮ್ಮ ಸಣ್ಣ ನೀರಾವರಿ ಇಲಾಖೆಗೆ, ಹಣಕಾಸಿನ ಸಚಿವರಾಗಿ ಅದಕ್ಕೆ ಹೆಚ್ಚು ಹಣಕಾಸಿನ ವ್ಯವಸ್ಥೆ ಮಾಡಲಿಲ್ಲ, ಆ ಕಡೆಗೆ ನೀವು ಗಮನವನ್ನು ಕೊಡಬೇಕಿತ್ತು, ಅಂತರ್‌ಜಲ ಕುಸಿದು ಹೋಗುವಂಥ ಸಂಧರ್ಭದಲ್ಲಿ ಆ ಕಡೆಗೆ ನೀವು ಹೆಚ್ಚಾಗಿ ಗಮನ ಕೊಡಲಿಕ್ಕಾಗಲಿಲ್ಲವೆಂದು ಮಾನ್ಯ ಬಿ.ಆರ್.ಪಾಟೀಲರು ಹೇಳಿದ್ದಾರೆ. ನಿಜಕ್ಕೂ ಸಹ ನಾನು ಆ ಕಡೆಗೆ ಗಮನ ಕೊಡಬೇಕಾಗಿತ್ತು. ಬರುವಂಥ ದಿವಸಗಳಲ್ಲಿ ಅದಕ್ಕೂ ಕೂಡ ನಾನು ಗಮನ ಕೊಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಶಾಲಾ ಕಾಲೇಜುಗಳನ್ನು ನಾವು ದೊಡ್ಡ ಪ್ರಮಾಣದಲ್ಲಿ ತೆರೆದೆವು. ಅದಕ್ಕೋಸ್ಕರ High school, College ಇಷ್ಟು ಪ್ರಮಾಣದಲ್ಲಿ ತೆರೆಯುತ್ತೇವೆಂದು ಬಜೆಟ್‌ನಲ್ಲಿ ನಾವು ಹೇಳಿರಲಿಲ್ಲ. ನಮ್ಮ ಶಾಸಕರ ಒತ್ತಾಯ ಬಂದಿದ್ದರಿಂದ ಅದನ್ನು ಮಾಡಬೇಕಾಯಿತು. ಅದಕ್ಕಾಗಿ ಹೆಚ್ಚುವರಿ ಹಣವನ್ನು ನಾನು ತೆಗೆದಿಡಬೇಕಾಯಿತು. ಇನ್ನು ಡಾ: ನಂಜುಂಡಪ್ಪ ವರದಿ ಬಗ್ಗೆ ವಿಶೇಷವಾದ ಚರ್ಚೆ ಮಾಡೋಣ. ನಾನು ಏನು 1571 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ, at any cost, ಆದ್ಯತೆ ಮೇಲೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೋಸ್ಕರ ಅದಕ್ಕೆ ಪೂರ್ಣ ಹಣವನ್ನು ಖರ್ಚು ಮಾಡುವುದಕ್ಕೋಸ್ಕರ ಸಹ ವಿಶೇಷವಾದ ಗಮನವನ್ನು ಕೊಡುತ್ತೇನೆ. Hostel ಗಳ ಬಗ್ಗೆ ತಾವೆಲ್ಲಾ ಪ್ರಸ್ತಾಪ ಮಾಡಿದಿರಿ. ಇದಕ್ಕೆ ಅಂಕಿಅಂಶವನ್ನು ಕೊಡುವುದಕ್ಕೆ ಇಚ್ಚೆಪಡುತ್ತೇನೆ. ಹಿರಿಯ ಸದಸ್ಯರಾದ ಸನ್ಮಾನ್ಯ ರಮೇಶ್ ಕುಮಾರ್‌ರವರು ಇಲ್ಲಿಯೇ ಇದ್ದಾರೆ. ಕಳೆದ ಹತ್ತಾರು ವರ್ಷಗಳಲ್ಲಿ ಮೊರಾರ್ಜಿ ಶಾಲೆಗಳಿಗೆ

ಮಂಜೂರ ಆಗಿರುವುದು ಕೇವಲ 70. ಆದರೆ ಇವತ್ತು 170 ಮೊರಾರ್ಜಿ ಶಾಲೆಗಳಿಗೆ ಕಟ್ಟಡ ಕಟ್ಟಬೇಕೆನ್ನುವ ಯೋಚನೆ ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಸುಮಾರು 400 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಖರ್ಚು ಮಾಡುವ ವ್ಯವಸ್ಥೆ ಮಾಡಿದ್ದೇವೆ. ಆದ್ದರಿಂದ ನಾವೇನೋ hostel ಗಳಿಗೆ ಕೊರತೆ ಮಾಡಿದ್ದೇವೆ ಎಂದು ತಿಳಿದುಕೊಳ್ಳುವುದು ಬೇಡ. ಒಂದೇ ಸಾರಿ ಎಲ್ಲವೂ ಆಗುವುದಿಲ್ಲ. ಆದ್ದರಿಂದ ಆ ಕಡೆಗೂ ನಾನು ಗಮನವನ್ನು ಕೊಡುತ್ತಿದ್ದೇನೆ. ಹಾಗೇಯೇ, ಅನೇಕ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿರುವುದನ್ನು ಒಂದೇ ಸಲಕ್ಕೆ ಎಲ್ಲವನ್ನು ಕಾರ್ಯರೂಪಕ್ಕೆ ತರುವುದಿಕ್ಕಾಗುವುದಿಲ್ಲ. ನನಗೆ ನಿಮ್ಮ ಭಾವನೆಗಳು ಗೊತ್ತಿದೆ. SC/ST'ಬಗ್ಗೆ ನಾನು ಆದ್ಯತೆಯನ್ನು ಕೊಟ್ಟಿದ್ದೇನೆ. ನಾನು ಒಂದು ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಪ್ರಶ್ನೆ ಬಂದಾಗ ಯಾವುದೇ ರೀತಿಯಲ್ಲಾದರೂ ಹಣವನ್ನು ಒದಗಿಸಿ ಅವರ ಅಭಿವೃದ್ಧಿಗೆ ಹಣ ಕೊಡುವುದಕ್ಕೆ ನಾನು ಮಾನಸಿಕವಾಗಿ ಸಿದ್ಧತೆಯನ್ನು ಮಾಡಿಕೊಂಡಿದ್ದೇನೆ. ಬರುವಂಥ ದಿವಸಗಳಲ್ಲಿ ಏನು ಆ ತರಹದ ಕೊರತೆಗಳಾಗಿವೆ ಅದನ್ನು ಸರಿಪಡಿಸಬೇಕೆನ್ನುವ ನಿಮ್ಮ ಅಪೇಕ್ಷೆ ಇದ್ದು, ಅದನ್ನು ಸರಿಪಡಿಸುವಂಥ ಪ್ರಾಮಾಣಿಕ ವ್ಯವಸ್ಥೆ ಮಾಡುತ್ತೇವೆ.

ಡಾ: ಕೆ.ಅನ್ನದಾನಿ: ಸರ್, ಎಲ್ಲಾ ಹೇಳಿದ್ದೀರಿ, ಅದನ್ನೂ ಸಹ ದಯವಿಟ್ಟು ಹೇಳಿ. ತಾವು ಹೇಳ ಬೇಕು ಸಾರ್. ಏಕೆಂದರೆ,....

ಉಪಾಧ್ಯಕ್ಷರು: ಅವರು ಉತ್ತರವನ್ನೇ ಮುಗಿಸಲಿಲ್ಲವಲ್ಲ. ಅದೇನು ನೀವು ಕೇಳುತ್ತೀರಿ? ಇನ್ನೂ ಕೂಡ ಉತ್ತರ ಮುಗಿದಿಲ್ಲ. ಉತ್ತರ ಮುಗಿದ ಮೇಲೆ ನಂತರ ನೀವು clarifications ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ನಮ್ಮ SC/ST ಜನಾಂಗದ ಬಗ್ಗೆ, ಬೇರೆ ರೈತರು, ಮತ್ತೊಬ್ಬರು ಎಲ್ಲರದೂ ಸಾಲ ಮನ್ನಾ ಆಯಿತು. ನಾವೇನು ತಪ್ಪು ಮಾಡಿದ್ದೇವೆ, ಇದಕ್ಕೂ ನಮ್ಮ ಬಜೆಟ್‌ನಲ್ಲಿ ಅವಕಾಶವಾಗಬೇಕಾಗಿತ್ತು ಎನ್ನುವ ಮಾತನ್ನು ಅನೇಕ ದಿನಗಳಿಂದ ನೀವು ಹೇಳಿದ್ದಿರಿ. ನಾನು ಬರುವಂಥ ದಿವಸಗಳಲ್ಲಿ ಸಂಪನ್ಮೂಲವನ್ನು ಕ್ರೂಢೀಕರಿಸಿ, ಹೌದು ಯಡಿಯೂರಪ್ಪನವರೆ, ನೀವು ಈ ಬಗ್ಗೆ ಚಿಂತನೆ ಮಾಡಿದ್ದೀರಿ, ಕಾರ್ಯರೂಪದಲ್ಲಿ ಬರುತ್ತಿದೆ ಎನ್ನುವ ರೀತಿಯಲ್ಲಿ ನಾನು ಯೋಚನೆ ಮಾಡುತ್ತೇನೆ. ಸ್ವಲ್ಪ ಸಮಯಾವಕಾಶ ಕೊಡಿ. ಆದ್ದರಿಂದ ಖಂಡಿತ ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಈ

ಪೂರಕ ಅಂದಾಜು ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು: ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "31.03.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳನ್ನು ಕ್ರಮಾಂಕ 1ರಿಂದ 7,9ರಿಂದ 14 ಹಾಗೂ 16 ರಿಂದ 27 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ಬೇಡಿಕೆಗಳು ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಸಭೆ ಮಂಜೂರು ಮಾಡುವುದು"

<u>ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.</u> (ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1–ಕೃಷಿ ಮತ್ತು ತೋಟಗಾರಿಕೆ ಇಲಾಖೆ

ಶ್ರೀ ಬಿ.ಎಸ್.ಯಡಿಯೂರಪ್ಪ(ಹಣಕಾಸು ಸಚಿವರು): ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 803.50 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 2– ಪಶು ಸಂಗೋಪನೆ ಮತ್ತು ಮೀನುಗಾರಿಕೆ

ಶ್ರೀ ಬಿ.ಎಸ್.ಯಡಿಯೂರಪ್ಪ(ಹಣಕಾಸು ಸಚಿವರು): ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶು ಸಂಗೋಪನೆ ಮತ್ತು ಮೀನುಗಾರಿಕೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1000.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 3– ಆರ್ಥಿಕ